
ಗೌರಿ ಲಂಕೇಶರ

ಲಂಕೇಶ್

ಮೇ 10, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಶಿವರಾಜ್‌ಕುಮಾರ್ ಆತ್ಮಕಥೆ

ಈ ದೇಹದಿಂದ ದೂರವಾದೆ ಏಕೆ ಆತ್ಮನೆ?



ಸಿಂಧ್ಯಾಗೆ ಕೈಕೊಟ್ಟ ದೇವೇಗೌಡ





ಮೂರುಸಾವಿರ ಮಠ-ಮೂರೂ ಬಿಟ್ಟವರ ಕಿತ್ತಾಟ






ಒಂದು ಪ್ರಶ್ನೆ:

ತಮ್ಮ ರಥಯಾತ್ರೆಯ ಮೂರನೆ ಇನ್ನಿಂಗ್ಸ್ ಅನ್ನು ಅರ್ಧಕ್ಕೆ ನಿಲ್ಲಿಸಿ ಪಶ್ಚಿಮ ಬಂಗಾಳಕ್ಕೆ ಚುನಾವಣಾ ಪ್ರಚಾರಕ್ಕೆ ತೆರಳಿದ ಅದ್ವಾನಿಯವರು ಯಾರ ಪರವಾಗಿ ಪ್ರಚಾರ ನಡೆಸಿದರೆಂಬುದು ಅಲ್ಲಿನ ಬಿ.ಜೆ.ಪಿ. ಪಕ್ಷದ ಕಾರ್ಯಕರ್ತರಿಗೆ ತಿಳಿಯದಂತಾಗಿದೆಯಂತೆ.

ಏಕೆಂದರೆ ಅವರು ತಮ್ಮ ಪ್ರವಾಸದುದ್ದಕ್ಕೂ ಅಲ್ಲಿನ ಕಮ್ಯುನಿಸ್ಟ್ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯರನ್ನು ಹೊಗಳುತ್ತಲೇ ಇದ್ದರಂತೆ. ತಾನು ಗೃಹಮಂತ್ರಿಯಾಗಿದ್ದಾಗ ತನ್ನ ಸಲಹೆಯ ಮೇರೆಗೆ ಹೇಗೆ ಬುದ್ಧದೇವರು ಬಾಂಗ್ಲಾ ದೇಶದಿಂದ ಮುಸ್ಲಿಮರ ವಲಸೆಯನ್ನು ತಡೆಹಿಡಿದರೆಂದು ವರ್ಣಿಸಿ ಅವರನ್ನು ತಮ್ಮ ಆಪ್ತ ಮಿತ್ರರೆಂದರಂತೆ.


ಈಗ ಪ್ರಶ್ನೆಯೇನೆಂದರೆ ಅದ್ವಾನಿ ಕೋಮುವಾದಿ ಫ್ಯಾಸಿಸ್ಟ್. ಬುದ್ಧದೇವರು ಒಬ್ಬ ಕಮ್ಯುನಿಸ್ಟ್. ಇವರಿಬ್ಬರ ನಡುವೆ ಗೆಳೆತನ ಕುದುರಲು ಕಾರಣವೇನು? ಯಾರು ಬದಲಾಗಿರಬಹುದು?

ಒಂದು ಸತ್ಯ:



ಮೇಲಿನ ಪ್ರಶ್ನೆಗೆ ಒಂದು ಉತ್ತರವೂ ಇದೆ. ಅದೇನಪ್ಪಾ ಎಂದರೆ ಈಗ ಬುದ್ಧದೇವರು ಕೇವಲ ಕೋಮುವಾದಿಗಳಿಗೆ ಮಾತ್ರ ಸ್ನೇಹಿತರಲ್ಲ, ಈಗ ಅವರು ಪ. ಬಂಗಾಳದ ಎಲ್ಲಾ ಉದ್ಯಮಿಗಳ ಮತ್ತು ಭಾರತದ ಎಲ್ಲಾ ಗಣ್ಯ ಕೈಗಾರಿಕೋದ್ಯಮಿಗಳ ಮಿತ್ರರೂ ಆಗಿದ್ದಾರೆ. ಏಕೆಂದರೆ ಹಿಂದೆಲ್ಲಾ ಕೊಲ್ಕತ್ತಾದ ಬೀದಿಗಳಲ್ಲಿ ಬಡ ಹಮಾಲಿಗಳು ಕಾಣುತ್ತಿದ್ದರು. ಈಗ ಅವರ ಬದಲಿಗೆ ಅಲ್ಲೆಲ್ಲಾ ದೊಡ್ಡ ಮಾಲ್‌ಗಳು, ಷಾಪಿಂಗ್ ಕಾಂಪ್ಲೆಕ್ಸ್‌ಗಳು, ಎಕ್ಸ್‌ಪ್ರೆಸ್ ಹೈವೇಗಳು ಕಂಗೊಳಿಸುತ್ತಿವೆ. ಆದ್ದರಿಂದ ಬುದ್ಧದೇವರು ಅಲ್ಲಿನ ಮೇಲ್‌ಮಧ್ಯಮ ವರ್ಗದ ಯುವಜನತೆಯ ಡಾರ್ಲಿಂಗ್ ಕೂಡಾ ಆಗಿದ್ದಾರಂತೆ. ಈ ಹಿಂದೆ ಇದೇ ಕಮ್ಯುನಿಸ್ಟರು ಹಮಾಲಿಗಳ, ರೈತಕೂಲಿಗಳ ಮಿತ್ರರೂ ಹಾಗೂ ಉದ್ಯಮಿಗಳ ಶತೃಗಳೂ ಆಗಿರುತ್ತಿದ್ದರು. ಈಗ ಅವರು ಉದ್ಯಮಿಗಳ ಮಿತ್ರರು. ಅಂದರೆ ಕೂಲಿಕಾರ್ಮಿಕರ ಶತೃಗಳೆಂದರ್ಥವಾಗುತ್ತದಲ್ಲ. ಇಂಗ್ಲೀಷಿನಲ್ಲಿ ಒಂದು ಗಾದೆ ಇದೆ: ನಿನ್ನ ಸ್ನೇಹಿತರು ಯಾರು ಎಂದು ಕೇಳಿದರೆ ನೀನು ಯಾರು ಎಂದು ಹೇಳುವೆ ಎಂದು. ಈಗ ಬುದ್ಧದೇವರಿಗೆ ಉದ್ಯಮಿಗಳು, ಕೋಮುವಾದಿ ಫ್ಯಾಸಿಸ್ಟರೇ ಸ್ನೇಹಿತರು..!

ಐಶ್ವರ್ಯ ರೈಗೆ 3 ಕೋಟಿ, ಆಟಗಾರರಿಗೆ 1500 ರೂಪಾಯಿ!



ಮೊನ್ನೆ ಆಸ್ಟ್ರೇಲಿಯಾದಲ್ಲಿ ಕಾಮನ್‌ವೆಲ್ತ್ ಗೇಮ್ಸ್ ನಡೆದವಷ್ಟೆ. ಅದರಲ್ಲಿ 193 ಅಥ್ಲೆಟ್‌ಗಳು ಭಾಗವಹಿಸಿದ್ದರೆ 500 ಜನ ಡ್ಯಾನ್ಸರ್‌ಗಳು ಭಾಗವಹಿಸಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ ಕೊನೆಯ ದಿನ ನಡೆದ ನೃತ್ಯ ಪ್ರದರ್ಶನದಲ್ಲಿ ಭಾಗವಹಿಸಲು ಐಶ್ವರ್ಯ ರೈ, ರಾಣಿ ಮುಖರ್ಜಿ, ಸೈಫ್ ಅಲಿಖಾನ್, ಯುಕ್ತಾ ಮುಖೀ ಹಾಗೂ ಇನ್ನಿತರ ಬಾಲಿವುಡ್ ತಾರೆಗಳು ಹೋಗಿದ್ದರು. ಅವರೆಲ್ಲಾ ಅಲ್ಲಿ ಹೋಗಿ ಏನು ಮಾಡಿದರು? 11 ನಿಮಿಷ ಡ್ಯಾನ್ಸ್ ಮಾಡಿದರು. ಅದರಿಂದೇನು ನಷ್ಟ? ಜಾಸ್ತಿ ಏನಿಲ್ಲ. ಅವರೆಲ್ಲ ಹನ್ನೊಂದು ನಿಮಿಷ ಡ್ಯಾನ್ಸ್ ಮಾಡಿದ್ದಕ್ಕೆ ಕೇವಲ 40 ಕೋಟಿ ರೂಪಾಯಿಗಳು ವೇಸ್ಟ್ ಆದವು. ಇದು ಯಾರ ದುಡ್ಡು? ಐಶ್ವರ್ಯ ರೈದಂತೂ ಅಲ್ಲ, ಭಾರತದ ಸರ್ಕಾರ ಕ್ರೀಡೆಗೆಂದು ತೆಗೆದಿಟ್ಟ ಹಣದಲ್ಲೇ ಅದನ್ನು ಖರ್ಚು ಮಾಡಲಾಯಿತು.

ಭಾರತ ಸರ್ಕಾರದ ಕ್ರೀಡಾ ವೆಚ್ಚವೆಷ್ಟು? 48 ಕೋಟಿ! ಅದರಲ್ಲಿ 40 ಕೋಟಿ 11 ನಿಮಿಷದ ತಾರಾ ಮೇಳಕ್ಕೆ! ಅದರಲ್ಲಿ ಐಶ್ವರ್ಯ ರೈಗೆ 3 ಕೋಟಿ ಕೊಟ್ಟಿದ್ದರೆ, ರಾಣಿ ಮುಖರ್ಜಿಗೆ 1.5 ಕೋಟಿ, ಸೈಫ್‌ಗೆ 75 ಲಕ್ಷ. ಆದರೆ ಆಟಗಾರರಿಗೆ ದಿನಕ್ಕೆ ಕೊಡುತ್ತಿದ್ದ ಭತ್ಯವೆಷ್ಟು? ಕೇವಲ 30 ಡಾಲರ್-ಅಂದರೆ 1500 ರೂಪಾಯಿಗಳು.

ಐಶ್ವರ್ಯ ರೈಗೆ ವಿಮಾನದಲ್ಲಿ ಎಕ್ಸಿಕ್ಯುಟಿವ್ ಕ್ಲಾಸ್-ಆಟಗಾರರಿಗೆ ಎಕಾನಮಿ ಕ್ಲಾಸು! ಏಕೆ ಎಂದು ಕೇಳಿದರೆ ಅದೇ ಆಟಗಾರರ ಕ್ಲಾಸು ಅಂದರಂತೆ!

ಜೈಭಾರತ್ ಮಾತಾ!

ಚಾರ್ವಾಕ


- ಶಿವಸುಂದರ್-

ತಮಿಳುನಾಡು ಬ್ರಾಹ್ಮಣರಿಗೆ ಇತಿಹಾಸವೇ ಇಲ್ಲವಂತೆ

ತಮಿಳುನಾಡು ಬ್ರಾಹ್ಮಣರ ಕೂಟ-ತಂಬ್ರಾಸ್-ಗೆ ತಮ್ಮ ಇತಿಹಾಸವೇ ಬೇಡವಾಗಿದೆಯಂತೆ. ತಮ್ಮ ಪೂರ್ವಜರು ದಲಿತರ ಮೇಲೆ ನಡೆಸುತ್ತಿದ್ದ ಅತ್ಯಾಚಾರಗಳನ್ನು, ಮತ್ತು ದೇವಸ್ಥಾನ ಇತ್ಯಾದಿಗಳ ಹೆಸರಲ್ಲಿ ಸಮಾಜದ ಮೇಲೆ ನಡೆಸುತ್ತಿದ್ದ ಶೋಷಣೆಗಳನ್ನೆಲ್ಲಾ ಪಠ್ಯ ಪುಸ್ತಕಗಳಿಂದ ತೆಗೆದು ಹಾಕಬೇಕೆಂದೂ ಹಠ ಹಿಡಿದಿದ್ದಾರಂತೆ. ಆದರೆ ಹಾಗೆ ಅದನ್ನು ನೇರವಾಗಿ ಕೇಳಲು ಬರುವುದಿಲ್ಲವಲ್ಲ, ಆದ್ದರಿಂದ ಅದರ ಬದಲಿಗೆ ತಮ್ಮ ವಿರುದ್ಧ ಜೀವನ ಪರ್ಯಂತ ಹೋರಾಟ ನಡೆಸಿದ ಪೆರಿಯಾರ್ ಬಗೆಗಿನ ಪಾಠಗಳನ್ನು ಇತಿಹಾಸದ ಪುಸ್ತಕದಿಂದ ತೆಗೆಯಬೇಕೆಂದು ಹಠ ಹಿಡಿದಿದ್ದಾರಂತೆ.



No Comments



ನಿಜ. ನಾನು ತೀವ್ರವಾಗಿ ಹತಾಶಗೊಂಡಿದ್ದೇನೆ. ಭಾರತದ ಪ್ರಭುತ್ವದ ಮೇಲೆ ಮತ್ತು ಅದರ ಎಲ್ಲಾ ಅಂಗಸಂಸ್ಥೆಗಳ ಮೇಲೆ ನನಗಿದ್ದ ವಿಶ್ವಾಸವೆಲ್ಲಾ ಕುಸಿದಿದೆ. ಇಲ್ಲಿ ಪ್ರಜಾಪ್ರಭುತ್ವದ ಎಲ್ಲಾ ರೀತಿನೀತಿಗಳನ್ನು ಉಲ್ಲಂಘಿಸಲಾಗುತ್ತಿದೆ. ಅಹಿಂಸಾತ್ಮಕ ಹೋರಾಟಗಳ ಮೇಲೆ ವ್ಯವಸ್ಥಿತವಾಗಿ ಹಿಂಸೆಯನ್ನು ಪ್ರಯೋಗಿಸಲಾಗುತ್ತಿದೆ. ಈ ಬಗೆಯ ಹೀನಾಯ ಮತ್ತು ಫ್ಯಾಸಿಸ್ಟ್ ರಾಜ... ಕಾರಣಕ್ಕೆ ನಾನು ಅತ್ಯಂತ ಪ್ರೀತಿಸುವ, ಗೌರವಿಸುವ ಸತ್ಯ, ಅಹಿಂಸೆ ಹಾಗು ಹೋರಾಟಗಳಿಗೆ ಜಾಗತಿಕ ಪ್ರತೀಕಗಳಂತಿರುವವರು ಬೆಲೆ ತೆರುವಂತಾಗಿದೆ.

-ಮೇಧಾ ಪಾಟ್ಕರ್

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



ನನ್ನ ಆಡಳಿತಾವಧಿಯಲ್ಲಿ ನಾನು ಅಪರಾಧಿಗಳೆನ್ನೆಲ್ಲಾ ಬಗ್ಗುಬಡೆದು ಜೈಲಿಗಟ್ಟಿದೆ.

-ಮಾಯಾವ...

ನಾನು ಬುಷ್‌ನ ಕೈಗೊಂಬೆಯಲ್ಲ.

-ಮುಷಾರಫ್



ಇತರ ಹಿಂದುಳಿದ ಜಾತಿಗಳಿಗೂ ಉನ್ನತ ಶಿಕ್ಷಣದಲ್ಲಿ ಮೀಸಲಾತಿ ಕಲ್ಪಿಸದಿದ್ದರೆ ನಾವೂ ನೇಪಾಳದ ಮಾದರಿಯಲ್ಲಿ ಹೋರಾಟ ಪ್ರಾರಂಭಿಸುತ್ತೇವೆ.

-ಸಿದ್ಧರಾಮಯ್ಯ

ವಾರದ ಘೋಷಣೆ



ನಾಯಕರೇ ಎಚ್ಚರ. ಜನರು ನಿಮ್ಮನ್ನು ಗಮನಿಸುತ್ತಿದ್ದಾರೆ. ನಮ್ಮ ಕನಿಷ್ಠ ಬೇಡಿಕೆ ಸಂವಿಧಾನ ಸಭೆ. ಅದಕ್ಕೆ ಕಡಿಮೆ ಏನನ್ನೂ ನೇಪಾಳದ ಜನ ಒಪ್ಪುವುದಿಲ್ಲ.

-ನೇಪಾಳದಲ್ಲಿ ಸಂಸತ್ ಸಭೆ ಸೇರುವ ಮುನ್ನ ಜನರು ಹಾಕಿದ ಘೋಷಣೆ

ಪುಸ್ತಕಗಳು ನಮ್ಮ ಜೀವನದ ಸಂಗಾತಿಗಳಿದ್ದಂತೆ. ನಮಗೆ ಬೇಕೆಂದಾಗಲೆಲ್ಲ ತಮ್ಮನ್ನೇ ತೆರೆದಿಡಬಲ್ಲ ಪುಸ್ತಕಗಳು ನಮ್ಮನ್ನು ಚಿಂತನೆಗೆ ಹಚ್ಚಬಹುದು, ಜಗತ್ತನ್ನೇ ತೆರೆದಿಡಬಹುದು, ಮನರಂಜನೆ ನೀಡಬಹುದು, ಕೊನೆಗೆ ಕೇವಲ ಟೈಂಪಾಸ್ ಕೂಡ ಆಗಬಹುದು. ಆದರೆ ಅವುಗಳಿಲ್ಲದಿದ್ದರೆ ಬದುಕೇ ಬರುಡಾದಂತೆ. ಪುಸ್ತಕಗಳ ಬಗ್ಗೆ ಈ ವಾರ 'ಲಂಕೇಶ್' ಓದಗರಾದ ಬಸವನಬಾಗೇವಾಡಿಯ ಪಾಂಡುರಂಗ ಸಾಲವಾಡಗಿಯವರು ಕೆಲವು ಉಪಯುಕ್ತ ಸೂಕ್ತಿಗಳನ್ನು ಸಂಗ್ರಹಿಸಿ ಕಳುಹಿಸಿದ್ದಾರೆ. ಅವರಿಗೆ ಧನ್ಯವಾದಗಳು.

-ಗೌರಿ

ಅತ್ಯುತ್ತಮ ಪುಸ್ತಕಗಳೇ ಅತ್ಯುತ್ತಮ ಸಂಗಾತಿಗಳು —[illegible]

ಜಾತಿ ದ್ವೇಷ ಮತ್ತು ಖುಷ್‌ವಂತ್ ಪ್ರೀತಿ.....

ಕಳೆದ ವಾರ ಮೀಸಲಾತಿ ವಿವಾದ ಮತ್ತೆ ಭುಗಿಲೆದ್ದಾಗ `Outlook' ಇಂಗ್ಲಿಷ್ ವಾರ ಪತ್ರಿಕೆ ತನ್ನ ಮುಖಪುಟದಲ್ಲಿ 'ದಲಿತ್ ವಿನ್ನರ್ಸ್'(ಗೆದ್ದ ದಲಿತರು) ಎಂಬ ವರದಿ ಪ್ರಕಟಿಸಿತ್ತು. ಆ ವರದಿಯಲ್ಲಿ ಬಡ ದಲಿತರು ಹೇಗೆ ಮೀಸಲಾತಿಯಿಂದ ಅವಕಾಶ ಪಡೆದು ತಮ್ಮ ಪ್ರತಿಭೆಯನ್ನು ಸಾಬೀತುಪಡಿಸಿದ್ದಾರೆ ಎಂದು ವಿವರಿಸಲಾಗಿತ್ತಲ್ಲದೆ, ಮೀಸಲಾತಿ ಇರುವುದರಿಂದಲೇ ದಮನಿತ ವರ್ಗದಿಂದ ಬಂದ ಈ ಪ್ರತಿಭೆಗಳು ಅರಳಲು ಸಾಧ್ಯವಾಯಿತು ಎಂದು ವಾದಿಸಲಾಗಿತ್ತು.

ಇಲ್ಲೊಂದು ವಿಚಿತ್ರ ಸಂಗತಿಯನ್ನು ಪ್ರಸ್ತಾಪಿಸಲೇಬೇಕು. ಅದೇನೆಂದರೆ ಅದೇ ವಾರ `India Today' ಎಂಬ ಮತ್ತೊಂದು ಇಂಗ್ಲಿಷ್ ವಾರಪತ್ರಿಕೆ ಮೀಸಲಾತಿ ಕುರಿತು ಒಂದು ಅಕ್ಷರವನ್ನೂ ಬರೆಯಲಿಲ್ಲ ಮಾತ್ರವಲ್ಲ, ತನ್ನ ಮುಖಪುಟದಲ್ಲಿ ಇವತ್ತಿನ ಕೊಳ್ಳುಬಾಕ ಸಂಸ್ಕೃತಿಯನ್ನು ಕೊಂಡಾಡುತ್ತಾ ಲಕ್ಷಾಂತರ ರೂಪಾಯಿ ಬೆಲೆಬಾಳುವ ವಾಚು, ಕಂಪ್ಯೂಟರ್, ಬ್ಯಾಗ್, ಶೂಗಳ ಬಣ್ಣ ಬಣ್ಣದ ಚಿತ್ರಗಳನ್ನು ಪ್ರಕಟಿಸಿತ್ತು! ಅದು ಒಂದು ಪತ್ರಿಕೆಯೋ ಅಥವಾ ಯಾವುದೋ ಕಂಪನಿಯ ಕ್ಯಾಟಲಾಗೋ ಗೊತ್ತಾಗದಂತಿತ್ತು.

ಇವತ್ತು ಇಂಗ್ಲಿಷ್ ಪತ್ರಿಕೋದ್ಯಮ ಮತ್ತು ಇಂಗ್ಲಿಷ್ ಪತ್ರಿಕೆಗಳನ್ನು ಓದುವ ಜನರ ಆಸಕ್ತಿಗಳು ಎಂತಹವೆಂದರೆ ಅಲ್ಲಿ ಯಾವುದೇ ರೀತಿಯ ಜನಪರ ಕಾಳಜಿಯೇ ಇಲ್ಲದಂತಾಗಿದೆ. ಉದಾಹರಣೆಗೆ- ಭ್ರಷ್ಟಾಚಾರ ವಿರೋಧಿ, ಕೋಮುವಾದದ ವಿರೋಧಿ **Tehelka** ಪತ್ರಿಕೆ ಮೂರನೇ ಸ್ಥಾನದಲ್ಲಿದೆ. **Outlook** ನಂತಹ ಜನಪರ ಪತ್ರಿಕೆ ಹಲವೊಮ್ಮೆ ಸೆಕ್ಸ್ ಸಮೀಕ್ಷೆಗಳನ್ನು ಮುಖಪುಟವಾಗಿಸುತ್ತಾ ಸ್ವಲ್ಪ ಹೆಚ್ಚು 'ಜನಪ್ರಿಯತೆ' ಪಡೆದು ಎರಡನೆ ಸ್ಥಾನದಲ್ಲಿದೆ. ಆದರೆ ಮುಚ್ಚುಮರೆ ಇಲ್ಲದೆ ಕೊಳ್ಳುಬಾಕ ಸಂಸ್ಕೃತಿಯನ್ನೇ ತನ್ನ ಬಂಡವಾಳವಾಗಿಸಿಕೊಂಡಿರುವ, ಕಿಂಚಿತ್ತೂ ಜನಪರ ಚಿಂತಿಸದ, 'ಭಾರತಕ್ಕೂ-ಇಂಡಿಯಾಕ್ಕೂ' ಸಂಬಂಧವೇ ಇಲ್ಲದಂತಿರುವ 'ಇಂಡಿಯಾ ಟುಡೇ' ಮಿಕ್ಕ ಎಲ್ಲ ಪತ್ರಿಕೆಗಳಿಗಿಂತ ಹೆಚ್ಚು ಪ್ರಸಾರ ಹೊಂದಿದೆ. ಇದು ಏನನ್ನು ಸೂಚಿಸುತ್ತದೆ?

ಇಂಗ್ಲಿಷ್ ಬಲ್ಲ, ಹಣ ಉಳ್ಳ ನಮ್ಮ ರೆಸಿಡೆಂಟ್ ನಾನ್ ಇಂಡಿಯನ್‌ಗಳಿಗೂ ಇಂದಿನ ವಾಸ್ತವಕ್ಕೂ ಸಂಬಂಧವೇ ಇಲ್ಲ ಎಂಬುದನ್ನಲ್ಲವೇ?

ಅದೆಲ್ಲ ಬದಿಗಿರಲಿ, `Outlook' ಪತ್ರಿಕೆಯ ದಲಿತ ಪರ ನಿಲುವು ಶ್ಲಾಘನೀಯ. ಆದರೆ ಆ ವರದಿಗೆ ಓದುಗರು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬ ಕುತೂಹಲ ನನಗಿತ್ತು. ಏಕೆಂದರೆ ಮಿಕ್ಕೆಲ್ಲ ಪತ್ರಿಕೆಗಳಿಗಿಂತ **Outlook** ಓದುಗರು ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಾರಲ್ಲದೆ, ಅವರ ಬೈಗುಳಗಳನ್ನೂ ಸಂಪಾದಕ ವಿನೋದ್ ಮೆಹತಾ ಪ್ರಕಟಿಸುತ್ತಾರೆ. ಒಂದು ರೀತಿಯಲ್ಲಿ **Outlook** ಪತ್ರಿಕೆಯ ಜಾತ್ಯತೀತ, ಬಡಜನರ ಪರವಾದ ನಿಲುವನ್ನು ಖಂಡಿಸಲೆಂದೇ ಅದನ್ನು ಬಹಳಷ್ಟು ಜನ ಓದುತ್ತಾರೆ ಅನ್ನಿಸುತ್ತದೆ. ಈ ಬಾರಿಯೂ ಹಾಗೆ ಆಗಿದೆ. ಹಿಂದುಳಿದ ಮತ್ತು ದಲಿತ ಸಮುದಾಯಗಳ ಬಗ್ಗೆ ನಮ್ಮ ಸುಶಿಕ್ಷಿತರಲ್ಲಿ ಎಂತಹ ಅಸಡ್ಡೆ ಇರುತ್ತದೆಂದು



ತೋರಿಸಲು ಹಲವು ಅಭಿಪ್ರಾಯಗಳನ್ನು ಇಲ್ಲೂ ದಾಖಲಿಸಿದರೆ ಉತ್ತಮ ಅನ್ನಿಸುತ್ತದೆ.

ಒಬ್ಬ ಓದುಗ "ಗೆದ್ದ ಬಡ ದಲಿತರ ಬಗ್ಗೆ ಮಾತ್ರ ಯಾಕೆ ಬರೆಯುತ್ತೀರಾ? ಉಳಿದ ಬಡವರ ಬಗ್ಗೆಯೂ ಬರೆಯಬಾರದೇಕೆ?" ಎಂದು ಕೇಳುತ್ತಾನೆ. ಹಾಗೆಯೇ ಮತ್ತೊಬ್ಬ "ಇವತ್ತಿನ ವಾಸ್ತವ ಮತ್ತು ಸಾಮಾಜಿಕ ಸತ್ಯಗಳು ಬದಲಾಗಿವೆ. ಆದ್ದರಿಂದ ಮೀಸಲಾತಿಯ ಅವಶ್ಯಕತೆ ಇಲ್ಲ" ಎಂದು ವಾದಿಸುತ್ತಾನೆ. ಇವರಿಬ್ಬರ ಪ್ರಕಾರ ಭಾರತದಲ್ಲಿ ಜಾತಿ ವ್ಯವಸ್ಥೆ ಮತ್ತು ಶೋಷಣೆ ಇಲ್ಲ ಎಂಬುದೇ ಆಗಿದೆ.

ಕಂಡಹಾಗೆ



ಹಾಗೆಯೇ ಮತ್ತೊಬ್ಬ "ಇವರಿಗೆ ಮೀಸಲಾತಿಯ ಮೂಲಕ ಉನ್ನತ ಶಿಕ್ಷಣದಲ್ಲಿ ಸೀಟ್ ಸಿಕ್ಕರೂ ಅದರಲ್ಲಿ ಪಾಸ್ ಆಗುವ ಅರ್ಹತೆ ಇಲ್ಲ" ಎಂದರೆ ಮಗದೊಬ್ಬ "ಮೀಸಲಾತಿ ಮುಂದುವರೆಯಬೇಕು. ಏಕೆಂದರೆ ಈಗ ಮೇಲು ಜಾತಿಯವರು **world class professional**ಗಳಾಗಿದ್ದಾರೆ" ಅಂತ ಕೆಂಡಕಾರುತ್ತಾನೆ. ಇವರೆಲ್ಲರಿಗಿಂತ ಹಾಸ್ಯಾಸ್ಪದವಾಗಿ ವಾದಿಸಿರುವ ಓದುಗನೊಬ್ಬ ಯಾವುದೋ ಒಬ್ಬ ಯಶಸ್ವಿ ದಲಿತನ ಉದಾಹರಣೆ ನೀಡಿ "ಇಂಥಹವರಿಗೆ ಇನ್ನೆಷ್ಟು ಸಲವತ್ತುಗಳನ್ನು ಕೊಡಬೇಕು" ಎಂದು ಕಟಕಿ ಆಡುತ್ತಾನೆ.

ಇವರಿಗೆಲ್ಲ ಎಲ್ಲ ಅಡೆತಡೆಗಳನ್ನು ಮೀರಿ ಗೆದ್ದಿರುವ ಹಲವೇ ಹಲವು ದಲಿತರು ಕಾಣಿಸುತ್ತಾರೆ. ಆದರೆ ಕಂಬಾಲಪಲ್ಲಿಯಲ್ಲಿ ಭಸ್ಮವಾದ, ಹಂಗರಹಳ್ಳಿಯಲ್ಲಿ ಸರಪಳಿಯೊಂದಿಗೇ ಬದುಕುತ್ತಿದ್ದ, ನಾಗಲಾಪಲ್ಲಿಯಲ್ಲಿ ತಾಯಿಯೊಬ್ಬಳು ತನ್ನ ಮಕ್ಕಳೆದುರೇ ಮಾನ-ಪ್ರಾಣ ಕಳೆದುಕೊಂಡ, ಇಂತಹ ನಿತ್ಯ ಶೋಷಣೆಗೆ ಬಲಿಯಾಗುತ್ತಿರುವ ಸಾವಿರಾರು ದಲಿತರು ಕಾಣಿಸುವುದಿರಲಿ, ಅಂಥವರ ಅಸ್ತಿತ್ವದ ಬಗ್ಗೆಯೂ ಗೊತ್ತಿರುವುದಿಲ್ಲ.

ಇದು ನಮ್ಮ ದೇಶದ ದುರಂತಗಳಲ್ಲಿ ಒಂದು....

* * * * * * * * * * * *

ಇತ್ತೀಚಿಗೆ ಖುಷ್‌ವಂತ್‌ಸಿಂಗ್‌ರವರಿಗೆ ಪತ್ರ ಬರೆದು ಅವರ ಕತೆ ಇದ್ದ ನಮ್ಮ ವಿಶೇಷಾಂಕವನ್ನು ಕಳುಹಿಸಿದ್ದೆ. 'ಕಪ್ಪು ಮಲ್ಲಿಗೆ' ಎಂಬ ಅವರ ಕತೆಗೆ ಓದುಗರಿಂದ ಅತ್ಯುತ್ತಮ ಪ್ರತಿಕ್ರಿಯೆ ಬಂದಿತ್ತೆಂದೂ, ತಮ್ಮ ಆರೋಗ್ಯ ಸರಿ ಇದೆಯಾ ಎಂದೂ, ಕವಿತಾ ಮತ್ತು ಪುಟ್ಟ ಇಶಾ ಚೆನ್ನಾಗಿದ್ದಾರೆಂದೂ, ರಾಜ್ಯದಲ್ಲಿ ಚೆಡ್ಡಿಗಳು ತಮ್ಮ ಬಾಲ ಬಿಚ್ಚಲಾರಂಭಿಸಿದ್ದಾರೆಂದೂ ನಾಲ್ಕೈದು ಸಾಲುಗಳಲ್ಲಿ ಹೇಳಿ ಅವರಿಗೆ ಒಂದು ಪುಟ್ಟ ಚೆಕ್ ಕೂಡ ಕಳುಹಿಸಿದ್ದೆ.

ಪತ್ರಿಯೊಬ್ಬರಿಗೂ ತಮ್ಮ ಹಸ್ತಾಕ್ಷರದಲ್ಲೇ ಉತ್ತರಿಸುವ ಖುಷ್‌ವಂತ್‌ರಿಂದ ಮೊನ್ನೆ ಪತ್ರ ಬಂತು. ಅದು ಹೀಗಿದೆ:

ಪ್ರೀತಿಯ ಗೌರಿ,

ನೀನು ಕಳುಹಿಸಿದ ಅನಿರೀಕ್ಷಿತ ಬೋನಸ್ ಕಂಡು ಅಚ್ಚರಿ ಆಯಿತು. ಥ್ಯಾಂಕ್ಸ್. ನಿನಗೆ ಆಸಕ್ತಿ ಇದ್ದರೆ ನನ್ನ ಹೊಸ 'ಪ್ಯಾರಡೈಸ್ ಅಂಡ್ ಅದರ್ ಸ್ಟೋರೀಸ್' ಪುಸ್ತಕವನ್ನು ನೋಡು. ಅದರ ಹಿಂದಿ ಅನುವಾದಕ್ಕೆ ತುಂಬಾ ಚೆನ್ನಾದ ಪ್ರತಿಕ್ರಿಯೆ ಬರುತ್ತಿದೆ ಎಂದು ಪ್ರಕಾಶಕರು ಹೇಳುತ್ತಿದ್ದಾರೆ.

94 ವರ್ಷ ವಯಸ್ಸಿನ ಮುದುಕ ಹೇಗಿರುತ್ತಾನೋ, ಹಾಗಿದ್ದೇನೆ. ಇವತ್ತಿಗೂ ದಿನವಿಡಿ ಬರೆದು, ಸಂಜೆ ಬಂದು ಡ್ರಿಂಕ್ ಹಾಕುತ್ತೇನೆ.

ಕವಿತ ಮತ್ತು ಇಶಾಗೆ ನನ್ನ ಪ್ರೀತಿ ಕೊಡು. ಅದರಲ್ಲಿ ಸ್ವಲ್ಪವನ್ನು ನಿನಗಾಗಿ ಇಟ್ಟುಕೋ.

ಚೆಡ್ಡಿಗಳ ವಿರುದ್ಧದ ಹೋರಾಟವನ್ನು ಮುಂದುವರೆಸು. ಅವರೆಲ್ಲ ದೇಶದ್ರೋಹಿಗಳು.

ಪ್ರೀತಿಯಿಂದ ನಿನ್ನ

ಖುಷ್‌ವಂತ್

ಪ್ರೀತಿಯ ಅಜ್ಜ ಖುಷ್‌ವಂತರಿಗೆ ದೂರದಿಂದಲೇ ಒಂದು ಮುತ್ತು....

-ಗೌರಿ ಲಂಕೇಶ್

ಕುರುಡು ಕಾಂಚಾಣದ ಎದುರು ಲಕ್ಷ್ಮಿಯ ಅಳಲು!

"ನಾನು ಯಾಕೆ ಆತನ ವಿರುದ್ಧ ಕೇಸ್ ಹಾಕಿ ಇಷ್ಟು ಕಷ್ಟಪಡುತ್ತಿದ್ದೇನೆ ಅಂತ ತುಂಬಾ ಬೇಸರವಾಗುತ್ತಿದೆ. ನಿಜವಾಗಲೂ ಶಾರದೆಯವರೆ, ಈ ಜಗತ್ತಿನಲ್ಲಿ ಒಬ್ಬಂಟಿ ಮಹಿಳೆಗೆ ನ್ಯಾಯ ಎನ್ನುವುದೇ ಇಲ್ಲ ಅನ್ನಿಸುತ್ತಿದೆ" ಎಂದು ನಿಟ್ಟುಸಿರು ಬಿಡುತ್ತಾ ಲಕ್ಷ್ಮಿ ನನ್ನ ಮುಂದಿದ್ದ ಕುರ್ಚಿಯಲ್ಲಿ ಕುಸಿದು ಕೂತಳು




ಗೋಧಿ ಮೈ ಬಣ್ಣದ, ತುಂಬಾ ಸೂಕ್ಷ್ಮ ಮನಸ್ಸಿನ ಲಕ್ಷ್ಮಿ ಸಾಮಾನ್ಯವಾಗಿ ಲವಲವಿಕೆಯಿಂದಿರುವ ಮಹಿಳೆ. ಹದಿನೆಂಟು ವರ್ಷಕ್ಕೆ ಅಪ್ಪ-ಅಮ್ಮ ನೋಡಿದ್ದ ಹುಡುಗನೊಂದಿಗೆ ಮದುವೆ ಆಗಿದ್ದ ಆಕೆ, ಇಪ್ಪತ್ತು ವರ್ಷಕ್ಕೇ ತಾಯಿಯಾಗಿದ್ದಳು. ಸಂತಸದ ದಾಂಪತ್ಯ ಬದುಕನ್ನು ಆಶಿಸುತ್ತಿದ್ದ ಲಕ್ಷ್ಮಿಯ ಕನಸುಗಳು ಕೆಲವೇ ತಿಂಗಳುಗಳಲ್ಲಿ ನುಚ್ಚು ನೂರಾಗಿದ್ದವು. ಅವಳ ಗಂಡ ತನ್ನ business ನ ಸೋಲಿನ ಸೇಡನ್ನೆಲ್ಲಾ ಆಕೆಯ ಮೇಲೆ ತೀರಿಸಿಕೊಳ್ಳಲಾರಂಭಿಸಿದ. ದಿನನಿತ್ಯ ಆತನ ಹೊಡೆತಗಳಿಂದ ಜರ್ಝರಿತಳಾದ ಲಕ್ಷ್ಮಿಯ ನೆರವಿಗೆ ಅವಳ ತಂದೆಯೇ ಬಂದರು. "ಇವನಿಂದ ನೀನು ಇಂತಹ ಹಿಂಸೆ ಅನುಭವಿಸುವುದಕ್ಕಿಂತಲೂ ಒಬ್ಬಂಟಿಯಾಗಿ ಜೀವನ ಸಾಗಿಸುವುದೇ ಮೇಲು, ಬಾ" ಎಂದು ಕರೆದ ಅಪ್ಪನ ಮನೆಗೆ ಲಕ್ಷ್ಮಿ ತನ್ನ ಪುಟ್ಟ ಮಗನೊಂದಿಗೆ ಬಂದಿದ್ದಳು. ಆಗ ಅವಳಿಗೆ ಕೇವಲ 24 ವರ್ಷ ವಯಸ್ಸು.

ಯಾವುದೋ ಒಂದು ಸಣ್ಣ NGO ನಲ್ಲಿ ಕೆಲಸ ಪಡೆದ ಲಕ್ಷ್ಮಿಗೆ ಗಂಡನ ನೆರವು ಬೇಕಿಲ್ಲದಿದ್ದರೂ ಆತ ತನ್ನ ಮಗನ ಜವಾಬ್ದಾರಿಯನ್ನಾದರೂ ವಹಿಸಿಕೊಳ್ಳಲಿ ಎಂಬ ನಿಲುವು.

ಇದರಿಂದಾಗಿ ಮಗನ ತಿಂಗಳ ವೆಚ್ಚ ಇಷ್ಟಾಗುತ್ತದೆ ಎಂದು ಇತರರ ಮೂಲಕ ಗಂಡನಿಗೆ ತಿಳಿಸಿದ ಲಕ್ಷ್ಮಿ ಆತ ಅಷ್ಟನ್ನಾದರೂ ನಿಭಾಯಿಸಬಹುದು ಅಂದುಕೊಂಡಿದ್ದಳು. ಆದರೆ ಆತ ಯಾವುದೇ ರೀತಿಯಲ್ಲಿ ನೆರವಾಗಲು ನಿರಾಕರಿಸಿದನಲ್ಲದೆ, ಲಕ್ಷ್ಮಿಯ ಬಗ್ಗೆ ಅಪಪ್ರಚಾರ ಶುರು ಮಾಡಿದ. ಆಗಲೇ ನನಗೆ ಅವಳ ಪರಿಚಯವಾಗಿದ್ದು.

ಮಗನ ವಿದ್ಯಾಭ್ಯಾಸದ ಜವಾಬ್ದಾರಿಯನ್ನೂ ಹೊರಲು ತಯಾರಿರದ ಮನುಷ್ಯನಿಂದ ವಿಚ್ಛೇದನೆ ಪಡೆಯುವುದೇ ವಾಸಿ ಎಂದು ನಿರ್ಧರಿಸಿದ್ದ ಲಕ್ಷ್ಮಿಗೆ ನಾವು ಸಹಾಯ ಮಾಡಿದೆವಲ್ಲದೆ, ಅವಳ ಗಂಡ ಪ್ರತಿ ತಿಂಗಳು ಮಗನ ವೆಚ್ಚಕ್ಕೆಂದು ಐದು ಸಾವಿರ ರೂಪಾಯಿಗಳನ್ನು ನೀಡಬೇಕೆಂದು ನ್ಯಾಯಾಲಯ ತೀರ್ಪು ನೀಡಿತ್ತು. ಇದರಿಂದ ಲಕ್ಷ್ಮಿ ಸಂತಸಗೊಂಡಿದ್ದಳು. ತಾನು ದುಡಿಯುವ ಹಣದಿಂದ ದಿನನಿತ್ಯದ ವೆಚ್ಚಗಳನ್ನು ಭರಿಸಿ, ತನ್ನ ಮಾಜಿ ಗಂಡ ನೀಡುವ ಹಣದಿಂದ ಮಗನ ವಿದ್ಯಾಭ್ಯಾಸ ಸಾಧ್ಯವಾಗುತ್ತದೆ ಎಂದು ನಂಬಿದ್ದಳು. ಆದರೆ ಅವಳ ಗಂಡ ಎಂಥ ಭಂಡನೆಂದರೆ, ಆತ ಹಣವನ್ನು ಕಳುಹಿಸುತ್ತಲೇ ಇರಲಿಲ್ಲ. ಪ್ರತಿ ತಿಂಗಳು ಅವನಿಂದ ಹಣ ಪಡೆಯುವುದೇ ಒಂದು ದೊಡ್ಡ ಕಸರತ್ತಾಗಿತ್ತು. ಈ ಮಧ್ಯೆ ಮಗನಿಗೆ ಟೈಫಾಯ್ಡ್ ಬಂದು ಲಕ್ಷ್ಮಿ ಹೆಣಗಬೇಕಾಯಿತು. ಮಗುವಿನ ಆರೋಗ್ಯ ಸರಿ ಇಲ್ಲ ಎಂದು ಗೊತ್ತಾದ ನಂತರವೂ ಆತನ ತಂದೆ ಅನ್ನಿಸಿಕೊಂಡವ ಒಂದು ನಯಾಪೈಸೆ ನೀಡಲಿಲ್ಲ.

ಇದೆಲ್ಲದರಿಂದ ಬೇಸತ್ತ ಲಕ್ಷ್ಮಿ ತನ್ನ ಮಗುವಿನ ತಂದೆಯ ವಿರುದ್ಧ ಮತ್ತೆ ಕೋರ್ಟಿನ ಮೆಟ್ಟಿಲು ಹತ್ತಿದಳು. ನ್ಯಾಯಾಲಯದ ಮುಂದೆ ಅವಳ ಮಾಜಿ ಗಂಡ ಹಾಜರಾಗದಿದ್ದಾಗ ಅವನ ಬಂಧನಕ್ಕೆ ವಾರೆಂಟ್ ಜಾರಿಯಾಯಿತು. ಆದರೆ ಅವನನ್ನು ಬಂಧಿಸುವ



ಬದಲಾಗಿ ಅವನಿಗೆ ಮುನ್ನೆಚ್ಚರಿಕೆ ನೀಡುತ್ತಿದ್ದ ಪೋಲೀಸರೇ ಅವನಿಂದ ಲಂಚ ಪಡೆದು ಸುಮ್ಮನಾಗುತ್ತಿದ್ದರು. ನ್ಯಾಯಾಲಯದ ಮುಂದೆ ತನ್ನ ಹೋರಾಟವನ್ನು ಮುಂದುವರಿಸಿದ್ದ ಲಕ್ಷ್ಮಿ ತಾನೇ ಪೋಲೀಸರಿಗೂ ಕೋರ್ಟಿನ ಅಮಲದಾರನಿಗೂ ಹಣ ನೀಡಿ ಗಂಡನಿದ್ದ ಮನೆಗೆ ಹೋದಳು. ಹೀಗೆ ಆತನನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರಾಗುವಂತೆ ಮಾಡಲು ಲಕ್ಷ್ಮಿ ಹದಿನೈದು ಸಾವಿರ ರೂಪಾಯಿಗಳನ್ನು ಲಂಚದ ರೂಪದಲ್ಲಿ ನೀಡಿದ್ದಳು. ಅಷ್ಟೊತ್ತಿಗಾಗಲೇ ಅವಳ ಮಾಜಿ ಗಂಡನಿಂದ ಬರಬೇಕಿದ್ದ ಹಣದ ಒಟ್ಟು ಮೊತ್ತ ಒಂದು ಲಕ್ಷ ರೂಪಾಯಿಗಳಾಗಿದ್ದವು.

ಆಗಲಾದರೂ ತನ್ನ ಮಗನ ವಿದ್ಯೆ, ಆರೋಗ್ಯ ಇತ್ಯಾದಿಗಳಿಗೆ ಕೊಡಬೇಕಿದ್ದ ಹಣವನ್ನು ನ್ಯಾಯಾಧೀಶರು ಕೊಡಿಸುತ್ತಾರೆ ಎಂದೇ ಲಕ್ಷ್ಮಿ ನಂಬಿದ್ದಳು. ಆದರೆ ಅವಳ ಗಂಡ ತನ್ನ ಬಳಿ ಇರುವುದು ಕೇವಲ ಹತ್ತು ಸಾವಿರ ರೂಪಾಯಿಯೆಂದೂ, ಮಿಕ್ಕ ಹಣವನ್ನು ನೀಡಲು ಸಮಯ ಬೇಕೆಂದೂ ವಾದಿಸಿದ. ಅದನ್ನು ನಂಬಿದ ನ್ಯಾಯಾಧೀಶರು ಲಕ್ಷ್ಮಿ ನೋಡುನೋಡುತ್ತಿದ್ದಂತೆಯೇ ಅವನನ್ನು ಬಿಡುಗಡೆ ಮಾಡಿದರು.

ಈ ಎಲ್ಲ ಸಾಹಸಗಳಿಂದ ಲಕ್ಷ್ಮಿಗೆ ಹಣ ಸಿಗುವುದಿರಲಿ, ಐದು ಸಾವಿರ ರೂಪಾಯಿಗಳ ನಷ್ಟವಾಗಿತ್ತು. ಆಗಲೇ ಆರ್ಥಿಕ ಸಂಕಷ್ಟದಲ್ಲಿ ಮುಳುಗಿ ಹೋಗಿದ್ದ ಲಕ್ಷ್ಮಿಗೆ ಇದು ಘೋರ ಅನ್ಯಾಯದಂತೆ ಕಂಡಿದ್ದರಲ್ಲಿ ಯಾವ ಅಚ್ಚರಿಯೂ ಇರಲಿಲ್ಲ.


"ಅವನಿಂದ ನನಗಾಗಿ ಒಂದು ನಯಾಪೈಸೆ ಬೇಕಿಲ್ಲ, ಕಷ್ಟ ಬಂದರೆ ಅವನನ್ನು ಕೇಳುವ ಬದಲಾಗಿ ನಾನು ಪಾತ್ರೆ ತಿಕ್ಕಿಯಾದರೂ ಜೀವನ ಸಾಗಿಸಬಲ್ಲೆ. ಆದರೆ ಅವನ ರಕ್ತವನ್ನೇ ಪಡೆದು ಹುಟ್ಟಿರುವ ಮಗನಿಗೂ ಆತ ನೆರವಾಗುವುದಿಲ್ಲ ಅಂದರೆ, ಅದು ಯಾವ ನ್ಯಾಯ. ಇದರ ವಿರುದ್ಧ ನಾನು ಹೋರಾಡಿದರೆ ನಮ್ಮ ಪೋಲೀಸರಾಗಲಿ, ನ್ಯಾಯಾಲಯವಾಗಲೀ ನೆರವಿಗೆ ನಿಲ್ಲುವುದಿಲ್ಲವೆಂದರೆ ನನ್ನಂಥವರು ಏನು ಮಾಡಬೇಕು? ಎಲ್ಲಿಂದ ಆಸರೆ, ಶಕ್ತಿ, ನೆರವು ಪಡೆಯಬೇಕು... ನಾನು ಸೋತಿದ್ದೇನೆ..." ಎಂದು ಲಕ್ಷ್ಮಿ ಕಣ್ಣೀರಿಡಲಾರಂಭಿಸಿದಳು.

ಲಕ್ಷ್ಮಿಯಂತಹ ಅದೆಷ್ಟೋ ಮಹಿಳೆಯರು ತಮ್ಮ ಮಕ್ಕಳ ಹಕ್ಕುಗಳಿಗೂ ಹೋರಾಡದೆ ಸುಮ್ಮನಾಗುತ್ತಾರೆ. ಆದರೆ ಈಕೆ ಹೋರಾಡಿಯೂ ಸೋತು ನನ್ನ ಮುಂದೆ ಕಣ್ಣೀರಿಡುತ್ತಾ ಕೂತಿದ್ದಾಳೆ.

ಲಕ್ಷ್ಮಿಗೆ ಏನು ಹೇಳಬೇಕೆಂದು ತೋಚದೆ ಮೌನವಾಗಿ ಕುಳಿತೆ...

-ಶಾರದೆ

ಅಲೆಮಾರಿ ಅವತಾರದಲ್ಲಿ ಪಿಜಿಆರ್ ಸಿಂಧ್ಯಾ



"ಬರುವ ಚುನಾವಣೆಗಳಲ್ಲಿ ಮರಾಠಿಗರೂ, ಕುರುಬರೂ ಒಂದಾಗಿ ಹೋರಾಡಿದಲ್ಲಿ ಜಯ ಶತಸ್ಸಿದ್ಧ"

ಇದು ಒಂದೆರಡು ವಾರಗಳ ಹಿಂದೆ ಮೈಸೂರಿನಲ್ಲಿ ಜರುಗಿದ ಮರಾಠಾ ಕ್ಷತ್ರಿಯ ಸಮ್ಮೇಳನ ವೇದಿಕೆಯ ಮೇಲೆ ಒಂದಾದ ಜಾತ್ಯತೀತ ಜನತಾದಳದ ರೆಬೆಲ್‌ಸ್ಟಾರ್ ಜೋಡಿ ಪಿ.ಜಿ.ಆರ್. ಸಿಂಧ್ಯ ಹಾಗೂ ಸಿದ್ಧರಾಮಯ್ಯ ರಾಜ್ಯದ ಮತದಾರರೆದುರು ಬಿತ್ತರಿಸಿದ ರಾಜಕೀಯ ಸಂದೇಶ!!

ಸುಮಾರು 30 ವರ್ಷಗಳಿಂದಲೂ ಕರ್ನಾಟಕದ ಜನತಾ ಪರಿವಾರದಲ್ಲಿ ರಾಜ್ಯಮಟ್ಟದ ಅಧಿಕಾರ ರಾಜಕಾರಣದಲ್ಲಿ ಮಿಂಚಿರುವ, "ಪ್ರಗತಿಪರ ರಾಜಕಾರಣಿ"ಗಳೆಂಬ ಹಣೆಪಟ್ಟಿ ಹೊತ್ತುಕೊಂಡೇ ಅಧಿಕಾರ ಅನುಭವಿಸುತ್ತ ಬಂದ ಈ ಸಿಂಧ್ಯಾ ಹಾಗೂ ಸಿದ್ರಾಮಯ್ಯಗಳೆಂಬ ಮಧ್ಯಮ ತಲೆಮಾರಿನ ನಾಯಕರಿಗೆ ಇಂತಹ ಜಾತಿಕೇಂದ್ರಿತ ಲೆಕ್ಕಾಚಾರಗಳ ಹೊರತಾಗಿ ಬೇರಾವುದೇ ಆದರ್ಶಗಳು ಮುಖ್ಯವೆನಿಸುವುದೇ ಇಲ್ಲವೆ?

ತಾವುಗಳಿದ್ದ ಜನತಾ ಪಾರ್ಟಿ ಅಥವಾ ಜನತಾದಳ ಪಕ್ಷಗಳು ಅಧಿಕಾರಕ್ಕೆ ಬಂದಾಗಲೆಲ್ಲ ಮಂತ್ರಿಗಳಾಗುತ್ತ ಬಹುತೇಕ ಎಲ್ಲ ಮಹತ್ವದ ಖಾತೆಗಳನ್ನು ನಿಭಾಯಿಸಿದ ಅನುಭವವುಳ್ಳ ಸಿಂಧ್ಯಾ-ಸಿದ್ದು ಜೋಡಿಗೆ ದೇವೇಗೌಡರ ಕೌಟುಂಬಿಕ ರಾಜಕಾರಣಕ್ಕೆ ಪರ್ಯಾಯವಾಗಿ ಇನ್ನಾವುದೇ ಆರೋಗ್ಯಕರ ಸಿದ್ಧಾಂತ, ಪ್ರೇರಣೆಗಳು ಹೊಳೆಯುವುದೇ ಇಲ್ಲವೆ?

ಬಹುಶಃ ಅದಕ್ಕೋಸ್ಕರವೇ ಹಿಂದೆ 1999 ರಲ್ಲಿ ಪಟೇಲ್ ಸರ್ಕಾರದ ಪತನದೊಂದಿಗೆ ಹೋಳಾದ ಜನತಾದಳದ ಉಭಯ ಬಣಗಳಿಗೆ ಹೊಸತಾಗಿ ನಾಮಕರಣ ಮಾಡುವಾಗ ರಾಷ್ಟ್ರೀಯ ಚುನಾವಣಾ ಆಯೋಗ "ಕಿಲಾಡಿತನ" ಮಾಡಿರಬೇಕು: ಪರಮ ಜಗಳಗಂಟರಿದ್ದ ರಾಮಕೃಷ್ಣ ಹೆಗಡೆ ಬೆಂಬಲಿತ ಬಣಕ್ಕೆ ಸಂಯುಕ್ತ ಜನತಾದಳ (JD-United) ಎಂದೂ, ಅಪ್ಪಟ ಜಾತಿವಾದಿ ಲೆಕ್ಕಾಚಾರದ ನಾಯಕರೇ ತುಂಬಿದ್ದ ದೇವೇಗೌಡರ ಬಣಕ್ಕೆ ಜಾತ್ಯತೀತ ಜನತಾದಳ (JD-Secular) ಎಂದು ಹೆಸರಿಟ್ಟು ತಮಾಷೆ ಮಾಡಿತ್ತು ಚುನಾವಣಾ ಆಯೋಗ!

ಪಿ.ಜಿ.ಆರ್. ಸಿಂಧ್ಯಾ ಗುರುತಿಸಿಕೊಂಡ ದಳ ಸಂಯುಕ್ತವಾಗಿಯೂ ಉಳಿಯಲಿಲ್ಲ, ಸಿದ್ಧರಾಮಯ್ಯ ಗುರುತಿಸಿಕೊಂಡ ದಳ ಜಾತ್ಯತೀತವೆನ್ನಲು ಪುರಾವೆಗಳೇ ಸಿಗುತ್ತಿಲ್ಲ... ಹೀಗಾಗಿ ಸಿಂಧ್ಯಾ-ಸಿದ್ದುಗಳಿಬ್ಬರೂ ಬೇರೆ ಬೇರೆ ಸನ್ನಿವೇಶಗಳು ಮತ್ತು ಸಂದರ್ಭಗಳಿಂದಾಗಿ ದೇವೇಗೌಡರಿಂದ ಸಿಡಿದು ಹೋಗಿ ಸ್ವತಂತ್ರ ವೇದಿಕೆ ಹತ್ತಿ ನಿಂತಾಗಲೂ ಅವರ ಬಾಯಲ್ಲಿ ಹೊರಡುವುದು "ಕುರುಬರು ಮತ್ತು ಮರಾಠಿಗರು ಒಂದಾದರೆ...." ಎಂಬ ಜಾತಿ ಸಂಗೀತವೇ....

ಸಿದ್ಧರಾಮಯ್ಯನವರೇನೋ ಯಾವುದೇ ಸಂಕೋಚ, ಹಿಂಜರಿಕೆಗಳಿಲ್ಲದೆಯೇ ಕುರುಬ ಜನಾಂಗದ ಪ್ರಶ್ನಾತೀತ ನಾಯಕನೆನಿಸಿಕೊಳ್ಳುವುದಕ್ಕೇ "ಹೋರಾಟ" ಮಾಡುತ್ತ ಬಂದು ಯಶಸ್ವಿಯೂ ಆದರು... ಆದರೆ ಸನ್ 1983 ರಿಂದಲೂ ಸತತವಾಗಿ ಆರು ಬಾರಿ ತಮ್ಮನ್ನು ಗೆಲ್ಲಿಸುತ್ತ ಬಂದ ಒಕ್ಕಲಿಗರ ಪ್ರಾಬಲ್ಯದ ಕನಕಪುರ ಅಸೆಂಬ್ಲಿ ಕ್ಷೇತ್ರದ "ಸೋಲರಿಯದ ಸರದಾರ" ಸಿಂಧ್ಯಾರಿಗೆ ತಮ್ಮ ಮತದಾರರ ಜಾತ್ಯತೀತ ಔದಾರ್ಯ, ಅಂತಃಕರಣ, ನಿರಂತರ ಬೆಂಬಲದ ಮಹತ್ವವೇ ಅರ್ಥವಾಗಿರುವಂತಿಲ್ಲ....

ಕನಕಪುರ ಕ್ಷೇತ್ರದಲ್ಲಿ ಸಿಂಧ್ಯಾರ ಮರಾಠಾ ಕುಲ ಬಾಂಧವರು ಒಂದೆರಡು ಸಾವಿರದಷ್ಟಾದರೂ ಇದ್ದಾರೋ, ಇಲ್ಲವೋ ಅದನ್ನೊಂದು ಜಾತಿವಾರು ಜನಗಣತಿಯ ಮೂಲಕವೇ ಪತ್ತೆಹಚ್ಚಬೇಕು... ಆದರೆ ಅಲ್ಲಿನ ಬಡ ಒಕ್ಕಲಿಗರು, ಲಿಂಗಾಯತರು, ಕುರುಬರು, ದಲಿತರು, ಮುಸಲ್ಮಾನರೆಲ್ಲರೂ ಯಾವುದೇ ಜಾತಿಬಲವಿಲ್ಲದ (ಆದರೆ ಸಾಕಷ್ಟು ಧನಬಲ ಕ್ರೋಢೀಕರಿಸಿಕೊಂಡ!) ಸಿಂಧ್ಯಾರನ್ನೇ ಆರಿಸಿ ತಂದಿದ್ದಾರಷ್ಟೇ ಅಲ್ಲ.... ಅವರ ವಿರುದ್ಧ ಸ್ಪರ್ಧಿಸಿದ್ದ ದೇವೇಗೌಡರು ಹಾಗೂ ಕುಮಾರಸ್ವಾಮಿಗಳನ್ನೇ ಸೋಲಿಸಿ ತಮ್ಮ ಜಾತ್ಯತೀತ ಸಂವೇದನೆಗಳನ್ನು ಮೆರೆದಿದ್ದಾರೆ...

ಆದರೀಗ ದೇವೇಗೌಡರಿಂದ ದೂರವಾದ ದಾರುಣ ಸನ್ನಿವೇಶದಲ್ಲಿ ಸಿಂಧ್ಯಾ ಎಂಬ ಮಾಜಿ ಆರೆಸ್ಸೆಸ್ ಸ್ವಯಂ ಸೇವಕ ಹಾಗೂ ಜಾತ್ಯತೀತ ದಳದ (ಮಾಜಿ) ಮುಂಚೂಣಿ ನಾಯಕರಿಗೆ ಇದ್ದಕ್ಕಿದ್ದಂತೆ ಜಾತಿಪ್ರಜ್ಞೆ ಜಾಗೃತಗೊಂಡಿದೆ. ಕುರುಬರನ್ನು ಸಂಘಟಿಸಿ ಹೀರೋವಾದ ಸಿದ್ಧರಾಮಯ್ಯನವರಂತೆಯೇ, ತಮ್ಮ ಮರಾಠಾಬಾಂಧವರನ್ನು ಕಟ್ಟಿಕೊಂಡು ಹೀರೋವಾಗಬೇಕೆಂಬ ತವಕ ಶುರುವಾಗಿದೆ....

ಕಾಲುಶತಮಾನದ ರಾಜ್ಯಮಟ್ಟದ ರಾಜಕೀಯದಲ್ಲಿ ಸುಮಾರು 15 ವರ್ಷ ಮಂತ್ರಿಸ್ಥಾನದ ಅಧಿಕಾರ, ವರ್ಚಸ್ಸು, ಭೋಗಜೀವನದ ಐಷಾರಾಮಿ ಅನುಭವ ಪಡೆದ ಮೇಲೂ ಸಿಂಧ್ಯಾರಂಥವರಿಗೆ ಜಾತಿ ಹೊರತಾದ ಪರ್ಯಾಯ ಸಾಧ್ಯತೆಗಳೇ ಹೊಳೆಯುತ್ತಿಲ್ಲವೆಂದರೆ ಅವರ ಇದುವರೆಗಿನ "ಅನುಭವ"ವೆಲ್ಲವೂ ಕೇವಲ ವ್ಯಕ್ತಿಗತವಾದ ಪ್ರತಿಷ್ಠೆ, ಪ್ರಭಾವ ಹಾಗೂ ಯಥೇಚ್ಛ ಹಣ ಗಳಿಕೆಯ ವಹಿವಾಟುಗಳಿಗಷ್ಟೇ ಸೀಮಿತಗೊಂಡದ್ದಾಗಿತ್ತೆಂಬುದು ಸ್ಪಷ್ಟ.....

ಇಂಜಿನಿಯರಿಂಗ್ ಮಾಸ್ಟರ್ಸ್ ಪದವೀಧರರಾದ ಸಿಂಧ್ಯಾ ಸಕ್ರಿಯ ರಾಜಕಾರಣ ಪ್ರವೇಶಿಸಿದ ಮೇಲೆ ಮತ್ತೆಂದೂ ಹೊಸತನ್ನು ಓದುವ, ಬರೆಯುವ, ಗಂಭೀರ ಅಧ್ಯಯನ ನಡೆಸುವ ಉಸಾಬರಿಗೆ ಹೋಗಲಿಲ್ಲವೆಂಬುದಕ್ಕೆ ಅವರ ಸಾರ್ವಜನಿಕ ಹೇಳಿಕೆಗಳು, ಭಾಷಣಗಳೇ ಸಾಕ್ಷಿ.....

ಮಂತ್ರಿಯಾಗಿ ಇದುವರೆಗೂ ಸಾರಿಗೆ, ಆರೋಗ್ಯ, ಗೃಹಾದಳಿತ, ಕೈಗಾರಿಕೆ, ಹಣಕಾಸು ಇತ್ಯಾದಿ ಹಲವು ಹತ್ತು ಹೆವಿವೈಟ್ ಖಾತೆಗಳನ್ನೇ ನಿರ್ವಹಿಸಿರುವ ಸಿಂಧ್ಯಾ ಯಾವುದರಲ್ಲೂ ತಮ್ಮದೇ ಆದ ವಿಶಿಷ್ಟ ಛಾಪು ಒತ್ತಿ ಗುಣಾತ್ಮಕವಾದ ಬದಲಾವಣೆ ತಂದರೆಂಬ ದಾಖಲೆಯೇ ಇಲ್ಲ.... ಅವರೂ ಸಹ ಒಬ್ಬ ಐಎಎಸ್ ಅಧಿಕಾರಿಯ ತರವೇ ಯಾವುದೇ ಇಲಾಖೆಗೆ ವರ್ಗಾ ಆದರೂ ಮೇಲ್ನೋಟದ ದಕ್ಷತೆ, ಜಬರ್ದಸ್ತು, ಗತ್ತುಗಾರಿಕೆಯ ಮೂಲಕವೇ ವಿಜೃಂಭಿಸದರೆ ಹೊರತು ವ್ಯವಸ್ಥೆಯ ಮೇಲೆ ಶಾಶ್ವತವಾಗಿ ಪರಿಣಾಮ ಬೀರುವಂತಹ ಯಾವುದೇ ಐತಿಹಾಸಿಕ ಪರಿವರ್ತನೆ ತಂದವರಲ್ಲ.....

ಮಿಕ್ಕಂತೆ ಮಂತ್ರಿ ಪದವಿಯ ಬಲದಿಂದಲೇ ಮರಾಠಾ ಸರದಾರ ಶರದ್ ಪವಾರ್‌ರ ದೋಸ್ತಿ, ಮಾಧವರಾವ್ ಸಿಂಧ್ಯಾರ ಒಡನಾಟ ಹಾಗೂ ಲೋಕಲ್ ಕುಬೇರರಾದ ಹೆಂಡ ಸಾಮ್ರಾಜ್ಯದ ಜಗದಾಳೆ, ಖೋಡೆಗಳ ಸಖ್ಯ.... ಇವೇ ಸಿಂಧ್ಯಾರ ಸಾರ್ವಜನಿಕ ಬಯೋಡಾಟಾದ ಎದ್ದು ಕಾಣುವ ಅಂಶಗಳು....

ದಯವಿಟ್ಟು ಎಚ್ಚೆತ್ತುಕೊಳ್ಳಿ ಮಿ. ಸಿಂಧ್ಯಾ! ವಿಶ್ವಾಸ ಮತ ಯಾಚನೆಯಲ್ಲಿ ಕುಮಾರಸ್ವಾಮಿಯ ವಿರುದ್ಧ ಏಕಾಂಗಿಯಾಗಿ ನಿಂತು ಮತ ಚಲಾಯಿಸಿದ ಸಂದರ್ಭವೇ ನಿಮ್ಮ ನಾಯಕತ್ವದ ಅಮೃತಗಳಿಗೆ... ಆವತ್ತಿನ ಸ್ಫೂರ್ತಿಯನ್ನೇ ಜೀವಂತವಾಗಿಡಲು ಪ್ರಯತ್ನಿಸಿ... ಜಾತಿಬಲ, ಧನಬಲ, ಅಧಿಕಾರಬಲಗಳಿಂದ ಮುಕ್ತವಾದ ಜನಶಕ್ತಿಯನ್ನು ಸಂಘಟಿಸಲು ಸಿದ್ಧರಾಗಿ... ಇದು ನಿಮಗೆ ಆತ್ಮ ವಿಮರ್ಶೆಯ ಕಾಲ... ಅಗ್ನಿ ಪರೀಕ್ಷೆಯ ಸನ್ನಿವೇಶ....

-ರೇಶ್ಮೆ

ಜೆಡಿಎಸ್ ಮ್ಯೂಸಿಕಲ್ ಚೇರ್

ಸಿಂಧ್ಯಾಗೆ ಕೈಕೊಟ್ಟ ದೇವೇಗೌಡ

"ದೇವೇಗೌಡರನ್ನು ನಂಬಿದವರ್‍ಯಾರು ಉದ್ಧಾರವಾಗಲ್ಲ" ಎಂಬ ಮಾತನ್ನು ಸಾಕ್ಷಾತ್ ದೇವೇಗೌಡರೇ ಮತ್ತೊಮ್ಮೆ ಸಾಬೀತು ಮಾಡಿ ತೋರಿಸಿದ್ದಾರೆ.

ಜಾತ್ಯತೀತ ದಳದ ಇನ್ನೋರ್ವ ಹಿರಿಯ ನಾಯಕ ಪಿ.ಜಿ.ಆರ್. ಸಿಂಧ್ಯಾರನ್ನು ಗೌಡರು ತಮ್ಮ 'ಕುಮಾರನ ಅಶ್ವಮೇಧಯಾಗ'ಕ್ಕೆ ಬಲಿ ಕೊಟ್ಟಿದ್ದಾರೆ. ದೇವೇಗೌಡರು ಹಾಕಿದ್ದ ಗೆರೆ ದಾಟದಿದ್ದ, ಅವರ 'ಸೆಕ್ಯುಲರಿಸಂ' ಸ್ಲೋಗನ್‌ಗೆ ದನಿಗೂಡಿಸುತ್ತಲೇ ಬಂದಿದ್ದ ಸಿಂಧ್ಯಾ ಪಾಪ, ಇವತ್ತು ಒಂಟಿಯಾಗಿದ್ದಾರೆ.



ಮತ್ತೊಂದೆಡೆ ಇದೇ ದೇವೇಗೌಡರು ಯಾರನ್ನು ಪಕ್ಷ ವಿರೋಧಿ ಎಂದು ಜರೆದು ಅತ್ತು ಕರೆದು ದೂಷಿಸಿದ್ದರೋ, ಅಮಾನತ್ತು ಮಾಡಿದ್ದರೋ, ಅದೇ ಕುಮಾರಸ್ವಾಮಿಯಾದಿಯಾಗಿ ಜೆಡಿಎಸ್‌ನ ಎಲ್ಲಾ 49 ಜನ ಅವಕಾಶವಾದಿ ಶಾಸಕರು ಈಗ ಅಧಿಕಾರದ ಹಾಲು-ತುಪ್ಪ ಚಪ್ಪರಿಸುತ್ತಾ ಖುಷಿಯಾಗಿದ್ದಾರೆ. ಗೌಡರ ಜೊತೆ ನಿಂತಿದ್ದ ಸಿಂಧ್ಯಾ ಇವತ್ತು ಬೀದಿ ಪಾಲು.

ವಾಸ್ತವವಾಗಿ ಇಡೀ ಇಂಡಿಯಾ ದೇಶದ, ಕಳೆದ 50 ವರ್ಷಗಳ ಎಲ್ಲಾ ಚುನಾವಣಾ ರಾಜಕೀಯ ಪಕ್ಷಗಳ ಒಳಜಗಳ, ತಂತ್ರಗಾರಿಕೆ, ಪಿತೂರಿ, ಮೋಸಗಳನ್ನೆಲ್ಲಾ ಒಂದು ತಕ್ಕಡಿಗೆ ಹಾಕಿ ತೂಗಿದರೂ ಕಳೆದ ಮೂರು ತಿಂಗಳಲ್ಲಿ ದೇವೇಗೌಡರು ಮಾಡಿರುವ ತಂತ್ರಗಾರಿಕೆ, ಪಿತೂರಿಗಳ ಸಮಕ್ಕೆ ತೂಗಲಾರವೇನೋ.

ಇವತ್ತು ಸಿಂಧ್ಯಾಗೆ ಎಲ್ಲೂ ಜಾಗವಿರದಂತೆ ಮಾಡಿರುವ ದೇವೇಗೌಡ ಹಾಗೂ ಕುಮಾರಸ್ವಾಮಿ ಯವರ ಸೇಡಿನ ರಾಜಕೀಯ ಇತ್ತೀಚಿನ ರಾಜಕೀಯ ಬೆಳವಣಿಗೆಗಳಿಂದ ಸಂಭವಿಸಿಲ್ಲ, ಕುಮಾರಸ್ವಾಮಿ ಸರ್ಕಾರ ವಿಶ್ವಾಸ ಮತ ಕೋರುವಾಗ ಸಿಂಧ್ಯಾ ಅವರ ವಿರುದ್ಧ ಮತ ಹಾಕಿದ್ದಾಗಲಿ, ಬಿಜೆಪಿ ಜೊತೆಗಿನ ಮೈತ್ರಿಯನ್ನು ಖಂಡಿಸಿದ್ದಾಗಲಿ... ಇವು ಮಾತ್ರ ನೆಪವಾಗಿಲ್ಲ, ಕಳೆದ ಹತ್ತು ವರ್ಷಗಳಿಂದ ಮಸೆದಾಡುತ್ತಿದ್ದ ಗೌಡರ ಕತ್ತಿ ಈಗ ಹೊರಬಂದಿದೆ ಅಷ್ಟೇ.

ಕನಕಪುರದಲ್ಲಿ ಕುಮಾರಣ್ಣ

ಕಳೆದ 6 ಅವಧಿಯಿಂದಲೂ ಒಕ್ಕಲಿಗ ಮೆಜಾರಿಟಿಯ ಕನಕಪುರ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಆರಿಸಿ ಬರುತ್ತಿರುವ ಸಿಂಧ್ಯಾ ಮರಾಠ ಅಲ್ಪಸಂಖ್ಯಾತ ಜನಾಂಗದವರು. ಸಾಕಷ್ಟು ಜನಪರ ಕೆಲಸ, ಜನಪ್ರಿಯತೆ ಹಾಗೂ ಹಣ ಎಲ್ಲವನ್ನೂ ಗಳಿಸಿರುವ ಸಿಂಧ್ಯಾ ಒಕ್ಕಲಿಗ ಮೆಜಾರಿಟಿಯ ಕ್ಷೇತ್ರವನ್ನು ಏಕೆ ಪ್ರತಿನಿಧಿಸಬೇಕೆಂಬ ಕೊಂಕು ಮಾತು ಕಳೆದ ಹತ್ತು ವರ್ಷಗಳಿಂದಲೂ ಕೇಳಿಬರುತ್ತಿತ್ತು. ವೆಂಕಟಸ್ವಾಮಿ ಆಯೋಗದ ವಿರುದ್ಧ ಗೌಡರು ಗುಡುಗಿದ್ದು, ಒಕ್ಕಲಿಗರಲ್ಲಿ ಬಲಾಢ್ಯ ಜಾತಿ ಪ್ರಜ್ಞೆ ಬೆಳೆದಿದ್ದು, ಕನಕಪುರದಲ್ಲಿ ಆದಿ ಚುಂಚನಗಿರಿ ಮಠದ ಶಾಖೆ ಕಟ್ಟಿದ್ದು ಇವೆಲ್ಲಾ ಕನಕಪುರದಲ್ಲಿ ಒಕ್ಕಲಿಗ ಜಾತಿ ಪ್ರಜ್ಞೆ-ಪ್ರತಿಷ್ಠೆ ಬೆಳೆಯಲು ಪೋಷಣೆ ನೀಡಿದ್ದವು.

ಆ ಕಾರಣಗಳಿಂದಾಗಿಯೇ 1996 ರಲ್ಲಿ ಕುಮಾರಸ್ವಾಮಿ ಕನಕಪುರದಿಂದ ಪಾರ್ಲಿಮೆಂಟಿಗೆ ಸ್ಪರ್ಧಿಸಿ ಗೆದ್ದಿದ್ದರು. ಆಗಲೇ ಕನಕಪುರದ ಹಳ್ಳಿ ಹಳ್ಳಿಗಳಲ್ಲೂ ಹುಡುಗರಿಗೆ ಕಾಸು ಕೊಟ್ಟು 'ಕುಮಾರಸ್ವಾಮಿ ಅಭಿಮಾನಿಗಳ ಸಂಘ' ಕಟ್ಟಲು ಪ್ರಚೋದನೆ ನೀಡಲಾಗಿತ್ತು, ಸಿಂಧ್ಯಾ ಹೆಗಡೆ ಪರ ಎಂಬ ದೇವೇಗೌಡರಿಗಿದ್ದ ಅಸಹನೆಯೇ ಇದಕ್ಕೆಲ್ಲಾ ಕಾರಣವಾಗಿತ್ತು, ಅಷ್ಟೇ ಅಲ್ಲ ಸಿಂಧ್ಯಾರನ್ನು ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಸೋಲಿಸಲು ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ, ಏ ವನ್ ಕಳ್ಳ ನಾರಾಯಣ ಗೌಡನೆಂಬುವನನ್ನು ಕಾಂಗ್ರೆಸ್‌ನಿಂದ ಅಖಾಡಕ್ಕಿಳಿಸಲಾಗಿತ್ತು.

ಈ ಕಿರುಕುಳಗಳನ್ನೆಲ್ಲಾ ಸಹಿಸಿಕೊಂಡೇ ಸಿಂಧ್ಯಾ ಗೆಲ್ಲುತ್ತಾ ಹೋದರು. ದಳದಲ್ಲಿ ಅವರ ಹಿರಿತನ, ಸ್ಥಾನಮಾನಗಳೂ ಹಾಗೇ ಉಳಿದುಕೊಂಡೇ ಬಂದಿದ್ದವು.

ಈಗಿನ ಬೆಳವಣಿಗೆಗಳನ್ನು ಗಮನಿಸಿದರೆ ಒಂದು ವಿಚಾರವಂತೂ ಸ್ಪಷ್ಟವಾಗಿ ಕಾಣುತ್ತಿದೆ.

ದೇವೇಗೌಡರಿಗೆ ತಮ್ಮ ಪುತ್ರರತ್ನ ಕುಮಾರಸ್ವಾಮಿಯವರ ಕ್ಯಾಬಿನೆಟ್‌ನಲ್ಲಾಗಲೀ ಅಥವಾ ಜಾತ್ಯತೀತ ದಳದಲ್ಲಾಗಲೀ ಹಿರಿತನ, ಇಮೇಜು, ತತ್ವ ಬದ್ಧತೆಗಳಿರುವವರು ಬೇಕಿಲ್ಲ ಎಂಬುದು. ಅಷ್ಟೇ ಅಲ್ಲ ಕುಮಾರಸ್ವಾಮಿಯವರ ಈಗಿನ ಹೊಸ ನಾಯಕತ್ವಕ್ಕೆ ಸವಾಲಾಗಬಲ್ಲಂತವರು ಯಾರೂ ತಮ್ಮ ಹತ್ತಿರ ಇರಬಾರದೆಂಬುದೇ ಗೌಡರ ಹಿಡನ್ ಅಜೆಂಡಾ.

ಆ ಕಾರಣದಿಂದಲೇ ಈಗ ಸಿಂಧ್ಯಾರನ್ನು ಗೌಡರ ನಿರ್ದೇಶನದ ಜೆಡಿಎಸ್-ಬಿಜೆಪಿ ಮ್ಯೂಸಿಕಲ್ ಚೇರ್ ಆಟದಲ್ಲಿ ವಂಚಿಸಿ ಕುರ್ಚಿ ಸಿಗದಂತೆ ಮಾಡಲಾಗಿದೆ. ಸಿಂಧ್ಯಾರನ್ನು 'ಕುಮಾರಸ್ವಾಮಿ ಅಶ್ವಮೇಧಯಾಗದ' ಯಜ್ಞಕುಂಡಕ್ಕೆ ದೂಡಲಾಗಿದೆ.

ಆದರೆ ಸಿಂಧ್ಯಾ ಏನು ಕಡಿಮೆ ಅನುಭವ ಇರುವ ರಾಜಕಾರಣಿಯೇನಲ್ಲ, ಅವರು ಈಗಾಗಲೇ ಸಿದ್ಧರಾಮಯ್ಯ ಜೊತೆ ಸೇರುವ ಯೋಚನೆ ಮಾಡಿದ್ದಾರೆ. ಕನಿಷ್ಠ ಸಿಂಧ್ಯಾ ಆದರೂ ಸಿದ್ಧರಾಮಯ್ಯನವರ ರೀತಿ ಕೇವಲ ಅಪ್ಪ-ಮಕ್ಕಳ ಕೌಟುಂಬಿಕ ರಾಜಕಾರಣದ ಬಗ್ಗೆ ಆಡಿದ್ದೇ ಆಡುತ್ತಿರುವಂತೆ ವರ್ತಿಸದೆ ಕರ್ನಾಟಕಕ್ಕೆ ಈಗ ನಿಜವಾಗಲೂ ಬೇಕಿರುವ ಹೊಸ ರಾಜಕೀಯದ ಅಗತ್ಯ ಅರಿತು ವರ್ತಿಸುತ್ತಾರಾ ಕಾದು ನೋಡಬೇಕಿದೆ.

-ಈಶ

ಸಿದ್ಧರಾಮಯ್ಯ: "ಬೃಹತ್" ರ್‍ಯಾಲಿಗಳ ಭ್ರಮಾಲೋಕ!

ರವೀಂದ್ರ ರೇಶ್ಮೆ

ಬೆಂಗಳೂರು ಅರಮನೆ ಮೈದಾನದಲ್ಲಿ ಮತ್ತೊಂದು ಸಿದ್ದು ಪ್ರಾಯೋಜಿತ 'ಬೃಹತ್' ಸಮಾವೇಶ... ರೈತ ಮಹಾಜನಗಳ ರ್‍ಯಾಲಿ ಎಂಬ ಬ್ಯಾನರ್‌ನಲ್ಲಿ!

ವೇದಿಕೆಯ ಮೇಲಿನ ಸಿಂಹಾಸನಗಳ ಮೇಲೆ ಮಾಜಿ ಪ್ರಧಾನಿ ವಿ.ಪಿ. ಸಿಂಗ್, ಲೋಕದಳ್ ಎಂಬ ಫ್ಯಾಮಿಲಿ ಪ್ರೈವೇಟ್ ಲಿಮಿಟೆಡ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಅಜಿತ್‌ಸಿಂಗ್ ಹಾಗೂ ಕೇವಲ ನಾಲ್ಕೈದು ದಿನಗಳ ಹಿಂದೆಯಷ್ಟೇ ಜನ್ಮತಾಳಿದ 'ಜನಮೋರ್ಚಾ' ಎಂಬ ರಾಜಕೀಯ ಹಸುಗೂಸಿನ ಜನಕ ರಾಜ್ ಬಬ್ಬರ್ ಎಂಬ ಮೂವರು ರಾಷ್ಟ್ರನಾಯಕರುಗಳ ಸನ್ನಿಧಾನ.....

ಮಿಕ್ಕಂತೆ ಎ.ಕೆ. ಸುಬ್ಬಯ್ಯ, ಎ. ಲಕ್ಷ್ಮೀಸಾಗರ್, ಪಿ. ಕೋದಂಡರಾಮಯ್ಯ ಸಿ.ಎಂ. ಇಬ್ರಾಹಿಂ, ವೈಜನಾಥ್ ಪಾಟೀಲ್ ಮತ್ತಿತರ ಜೆಡಿಎಸ್ ರೆಬೆಲ್ ಸ್ಟಾರ್‌ಗಳು ವಿರಾಜಮಾನ....

ಈ ಸಮಸ್ತ ರೈತ-ಹಿಂದುಳಿದ-ದಲಿತ-ಅಲ್ಪಸಂಖ್ಯಾತ ಹಾಗೂ ಮಹಿಳಾ ರ್‍ಯಾಲಿಯ ವೇದಿಕೆಯ ಮೇಲೆ ಒಬ್ಬರೇ ಒಬ್ಬ ಮಹಿಳಾ ನಾಯಕಿಗೂ ಆಸನವಿಲ್ಲ! ಉಳಿದಂತೆ ಕಾರ್ಯಕ್ರಮ ಸಂಘಟನೆಯ ಸಮಗ್ರ ಉಸ್ತುವಾರಿಯೆಲ್ಲವೂ ಅವರ ಪರಮಾಪ್ತ ಕುಲಬಾಂಧವ ಕಾಮ್ರೇಡ್‌ಗಳದ್ದೇ... ನಟ ದೊಡ್ಡಣ್ಣನವರ ಬಂದೋಬಸ್ತು, ಮಾಜಿ ಮೇಯರ್ ಹುಚ್ಚಪ್ಪನವರ ಕಾರ್ಯಕ್ರಮ ನಿರೂಪಣೆ, ಮಾಜಿ ಎಮ್ಮೆಲ್ಲೆ ಆರ್. ಕೃಷ್ಣಪ್ಪನವರ ವಂದನಾರ್ಪಣೆ, ಮಾಜಿ ಕೆಪಿಎಸ್‌ಸಿ ಮೆಂಬರ್ ಮುಕುಡಪ್ಪನವರ ನಿರ್ಣಯ ಮಂಡನೆ ಹಾಗೂ ಸ್ವತಃ ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಅಗ್ರಭಾಷಣ!!

ಒಂದು ಗಂಟೆಯುಷ್ಟು ಸುದೀರ್ಘವಾದ ಭಾಷಣದುದ್ದಕ್ಕೂ ಪದೇಪದೇ ಮಾರ್ದನಿಗೊಂಡದ್ದು ಅವೇ 25-26 ಶಬ್ದಗಳಷ್ಟೇ... ಸಾಮಾಜಿಕ ನ್ಯಾಯ, ಮೀಸಲಾತಿ, ಮೆರಿಟ್ ವರ್ಗ, ಮಂಡಲ್ ವರದಿ, ದೇವೇಗೌಡ, ಕುಮಾರಸ್ವಾಮಿ, ರೇವಣ್ಣ ಹಾಗೂ ಎಂ.ಪಿ. ಪ್ರಕಾಶ್..... ಇವೇ ವಿಷಯಗಳು, ವಸ್ತುಗಳು ಹಾಗೂ ವ್ಯಕ್ತಿಗಳನ್ನೊಳಗೊಂಡ ಲೇವಡಿ ಮಾತುಗಳ ಲಾರಿ ಪ್ರಹಾರ ನಮ್ಮ ಸಿದ್ಧರಾಮಯ್ಯನವರದ್ದು....

ಈಗ್ಗೆ ಹನ್ನೆರಡು ವರ್ಷಗಳ ಕಾಲ ದೇವೇಗೌಡರ ಜೆಡಿಎಸ್‌ನಲ್ಲಿ ಸತತವಾಗಿ ಗಾಡ್‌ಫಾದರ್-ಗಾಡ್‌ಸನ್ ಸಂಬಂಧವಿಟ್ಟುಕೊಂಡೇ ಅಧಿಕಾರ, ಅವಕಾಶ, ಅನುಕೂಲಗಳನ್ನು ಅನುಭವಿಸುತ್ತ ಬಂದ ಸಿದ್ಧರಾಮಯ್ಯನವರಿಗೆ ದೇವೇಗೌಡರೊಂದಿಗಿನ ಡೈವೋರ್ಸ್ ಪರಿಣಾಮಗಳನ್ನು ಮಾತ್ರ ನಿಭಾಯಿಸಲಾಗುತ್ತಿಲ್ಲ.

1993 ರಿಂದಲೂ ಗೌಡರ ಶ್ರೀರಕ್ಷೆಯಿಂದಾಗಿ ಚುನಾವಣೆ ಗೆದ್ದರೆ ಫೈನಾನ್ಸ್ ಮಿನಿಸ್ಟ್ರು ಮತ್ತು ಡಿಸಿಎಮ್ಮು, ಸೋತರೆ ಪಾರ್ಟಿ ಪ್ರೆಸಿಡೆಂಟು ಅಥವಾ ಸೆಕ್ರೆಟರಿ ಜನರಲ್ ಹುದ್ದೆಗಳನ್ನು ಅನಾಯಾಸವಾಗಿ ಪಡೆದುಕೊಳ್ಳುತ್ತ ಬಂದಿದ್ದ ಸಿದ್ದುಗೆ ತಮ್ಮದೇ ಆದ ಸ್ವತಃ ವ್ಯಕ್ತಿತ್ವ ರೂಢಿಸಿಕೊಳ್ಳುವುದಕ್ಕೆ ಬಹುಶಃ ಪುರುಸೊತ್ತೇ ಆಗಿರಲಿಕ್ಕಿಲ್ಲ...

ಬಹುಶಃ ಇಂತಹ ಸಂದಿಗ್ಧ ಹಿನ್ನೆಲೆಯಿಂದಾಗಿಯೇ ಸಿದ್ದುವಿನ ಭಾಷಣಗಳಲ್ಲಿ, ಹೇಳಿಕೆಗಳಲ್ಲಿ, ಟಿವಿ ಚಾನೆಲ್ ಕ್ಯಾಮರಾಗಳಿಗೆ ನೀಡುವ ಸೌಂಡ್ ಬೈಟ್‌ಗಳಲ್ಲಿ ಬರೀ ದೇವೇಗೌಡರ ನಿಂದನೆಯೇ ಏಕಾಂಶ ರಾಜಕೀಯ ಪ್ರಣಾಲಿಕೆಯಂತಾಗಿಬಿಟ್ಟಿದೆ... ಗೌಡರು ಮತ್ತು ಅವರ ಕುಟುಂಬ ಕರ್ನಾಟಕದ ರಾಜಕಾರಣ ಹಾಗೂ ಸಾಮಾಜಿಕ ಬದುಕಿಗೆ ಮಾಡಿರಬಹುದಾದ ಹಲವು ಹತ್ತು ಬಗೆಯ ಮುಜುಗರಗಳ, ಅವಾಂತರಗಳ ಬಗ್ಗೆ ಅಥವಾ ಅಭಾಸಗಳ ಬಗ್ಗೆ ಸಿದ್ಧರಾಮಯ್ಯನವರ ಗಮನ ಹರಿಯುವುದೇ ಅಪರೂಪ... ದೇವೇಗೌಡರ ವಿರುದ್ಧದ ಸಿದ್ದುವಿನ ರೋಷ ಮತ್ತು ಆಕ್ರೋಶಗಳೆಲ್ಲವೂ ಸೀಮಿತಗೊಳ್ಳುವುದೇ ಅವರು ತಮ್ಮನ್ನು ಉಪಮುಖ್ಯಮಂತ್ರಿ ಸ್ಥಾನದಿಂದ ಅನಾಮತ್ತಾಗಿ ವಜಾ ಮಾಡಿದ ದುರ್ಘಟನೆಯ ಬಗೆಗಷ್ಟೇ...

ಗೌಡರು ಮತ್ತವರ ಮಕ್ಕಳ ರಾಜವೈಭವದ ವಿರುದ್ಧ ಜನಸಾಮಾನ್ಯರಲ್ಲಿ ಆಗಾಗ್ಗೆ ಮರುಕಳಿಸುವ ಅಸಂತುಷ್ಟತೆ, ಅಸಮಾಧಾನಗಳಿಗೆ ಮುತ್ಸದ್ದಿಯ ರೂಪದಲ್ಲಿ ದನಿ ಕೊಡಬೇಕಿದ್ದ ಸಿದ್ಧರಾಮಯ್ಯ ಕೇವಲ ಒಂದಷ್ಟು ವೈಯಕ್ತಿಕ ಅಧಿಕಾರ ನಷ್ಟದಿಂದ ನರಳುವ ಯಕಃಶ್ಚಿತ್ ರಾಜಕಾರಣಿಯಂತೆ ಸಾರ್ವಜನಿಕವಾಗಿ ಠೇಂಕರಿಸುತ್ತಾರೆ. ಒರಟು ಒರಟಾಗಿ ಬೈಯ್ಯುತ್ತಾರೆ... ಕುಹಕನಗೆ ಬೀರುತ್ತ ವ್ಯಂಗ್ಯವಾಡುತ್ತಾರೆ... ಇದೆಲ್ಲವೂ ಒಂದು ಹಂತದವರೆಗೆ ಮಾತ್ರ ಸಹನೀಯ ಎಂಬುದನ್ನು ಮರೆತು ತಿಂಗಳುಗಟ್ಟಲೆ, ವಾರಗಟ್ಟಲೆ ಅಲ್ಲಲ್ಲಿ ಜರುಗುವ ರ್‍ಯಾಲಿ, ಸಮಾರಂಭಗಳಲ್ಲಿ ಅದೇ ಮಾತು, ಅದೇ ಶೈಲಿಯಲ್ಲಿ ಹೂಂಕರಿಸುತ್ತ ಹೋಗುವುದು ಸಿದ್ಧಮಯ್ಯನವರ ಅಭಿಮಾನಿಗಳಲ್ಲೂ ಕಸಿವಿಸಿಯುಂಟು ಮಾಡುತ್ತಿದ್ದಲ್ಲಿ ಅಚ್ಚರಿ ಪಡಬೇಕಿಲ್ಲ....

ಸಿದ್ದುವನ್ನು ದೇವೇಗೌಡರೆಂಬ ದೈತ್ಯನ ವಿರುದ್ಧ ಸಿಡಿಬಾಂಬನ್ನಾಗಿ ಬಳಸಿಕೊಳ್ಳುತ್ತ ಬಂದಿರುವ ಭಾಷಣಶೂರ ಸಿ.ಎಂ. ಇಬ್ರಾಹಿಂರ ಮಾತುಗಳೂ, ಜೋಕುಗಳೂ, ನಗೆಚಾಟಿಕೆ ಪ್ರಸಂಗಗಳೂ ಬರಬರುತ್ತ ತಮ್ಮ ಸಹಜ ವ್ಯಂಗ್ಯ, ವಿನೋದ, ಸೂಕ್ಷ್ಮತೆಗಳನ್ನು ಕಳೆದುಕೊಂಡು ಶುದ್ಧ ತಲೆಹರಟೆಯ, ಅಧಿಕ ಪ್ರಸಂಗಿತನದ ಪ್ರಲಾಪಗಳಂತೆ ಕೇಳಿಸತೊಡಗಿವೆ...

ಅಹಿಂದ, ಎಬಿಪಿಜೆಡಿ ಇತ್ಯಾದಿ ವೇದಿಕೆಗಳಲ್ಲಿ ವಿಜೃಂಭಿಸುವ ಸಿದ್ಧರಾಮಯ್ಯ ಮತ್ತವರ ರಾಜಕೀಯ ಸಂಗಾತಿಗಳೆಲ್ಲರೂ ವಯಸ್ಸಲ್ಲಿ, ವಿದ್ಯೆಯಲ್ಲಿ, ರಾಜಕೀಯ ಅನುಭವದಲ್ಲಿ, ಹಾಗೂ ಜನಸಾಮಾನ್ಯರೊಂದಿಗಿನ ಒಡನಾಟದಲ್ಲಿ ಗೌಡರ ಪುತ್ರರತ್ನರಾದ ಕುಮಾರಸ್ವಾಮಿ, ರೇವಣ್ಣಗಳಿಗಿಂತ ಸಾವಿರ ಪಾಲು ಉತ್ತಮರಿರಬಹುದು... ಆದರೆ ಇಂತಹ ಪ್ರಬುದ್ಧ ನಾಯಕರುಗಳ ಮಿತ್ರ ಮಂಡಲಿಯೆನಿಸಿರುವ ಎಬಿಪಿಜೆಡಿಯಲ್ಲಿ ಹೊಸ ವಿಚಾರ, ಪರ್ಯಾಯ ಚಿಂತನೆ ಅಥವಾ ವಿನೂತನವಾದ ಪ್ರಯೋಗಶೀಲತೆಯ ಲಕ್ಷಣಗಳೇ ಕಂಡುಬರುತ್ತಿಲ್ಲ... ಇವರೆಲ್ಲ ಕೇವಲ ದೇವೇಗೌಡರಿಂದ ದೂರವಾದ ಸಮಾನ ದುಃಖಿಗಳು ಹಾಗೂ ಸಮಾನ ವ್ಯಸನಿಗಳಂತೆ ಆರ್ಭಟಿಸುತ್ತಿರುವುದು ಮಾತ್ರ ದಯನೀಯ ದೃಶ್ಯದಂತಿದೆ....

ಆರು ವರ್ಷಗಳ ಕಾಲ ಹಣಕಾಸು ಮಂತ್ರಿಯಾಗಿದ್ದುಕೊಂಡು ಒಟ್ಟು 7 ಬಜೆಟ್ಟುಗಳನ್ನು ಮಂಡಿಸಿದ ಹೆಗ್ಗಳಿಕೆಯುಳ್ಳ, 5 ವರ್ಷ ಉಪಮುಖ್ಯಮಂತ್ರಿ ಹುದ್ದೆಯನ್ನು ಅಲಂಕರಿಸಿದ್ದ ಸಿದ್ಧರಾಮಯ್ಯನವರಂತಹ ಹಿರಿಯ ನಾಯಕರ ಬಗ್ಗೆ ಜನರಿಟ್ಟುಕೊಂಡ ನಿರೀಕ್ಷೆಗಳೇ ಬೇರೆ... ಅವರ ಬಹಿರಂಗ ಚಿಂತನೆ ಮತ್ತು ಭಾಷಣಗಳಲ್ಲಿ ಹೊರಹೊಮ್ಮುವ ವಿಚಾರಲಹರಿಯೇ ಬೇರೆ.

ಮಂತ್ರಿಸ್ಥಾನ ಕಳೆದುಕೊಂಡಾದ ಮೇಲೆ ಅಪ್ಪಿತಪ್ಪಿ ಒಮ್ಮೆಯೂ ಯಾವುದೇ ಸಾರ್ವಜನಿಕ ವೇದಿಕೆಯಲ್ಲಿ ಅಭಿವೃದ್ಧಿ ಪ್ರಕ್ರಿಯೆಗೆ ಸಂಬಂಧಿಸಿದ, ಜನಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಹಾಗೂ ಪ್ರಚಲಿತ ಮುಕ್ತ ಆರ್ಥಿಕ ವ್ಯವಸ್ಥೆಯ ಇತಿಮಿತಿಗಳು ಮತ್ತು ಅಪಾಯಗಳ ಬಗ್ಗೆ ಯಾವುದೇ ಒಳನೋಟವನ್ನು, ಸ್ವತಂತ್ರ ಚಿಂತನೆಯನ್ನು ಸಿದ್ಧು ಎಲ್ಲಾದರೂ ಮಂಡಿಸಿದ್ದುಂಟೆ?

ಹೋದಲ್ಲಿ ಬಂದಲ್ಲಿ ಬರೀ ಮೀಸಲಾತಿ, ಸಾಮಾಜಿಕ ನ್ಯಾಯದ ಮಂತ್ರ ಪಠಿಸುವ ಸಿದ್ಧರಾಮಯ್ಯ ಒಂದೇ ಒಂದು ಸಾರಿಯಾದರೂ ಹಿಂದೆ ತಾವೆಲ್ಲ ಅಧಿಕಾರದಲ್ಲಿದ್ದಾಗಲೇ ವೆಂಕಟಸ್ವಾಮಿ ವರದಿ, ಚಿನ್ನಪ್ಪ ರೆಡ್ಡಿ ವರದಿಗಳು ತಿರಸ್ಕೃತಗೊಂಡ ಪ್ರಸಂಗದ ಬಗ್ಗೆ ಪ್ರಾಯಶ್ಚಿತ್ತ, ಪಶ್ಚಾತ್ತಾಪ ವ್ಯಕ್ತಪಡಿಸಿದ್ದುಂಟೆ?

ಇದೀಗ "ಮೆರಿಟ್ಟು ಮೀಸಲಾತಿಯ ಶತ್ರು" ಎಂದು ಆರ್ಭಟಿಸುತ್ತಿರುವ ಸಿದ್ರಾಮಯ್ಯನವರಿಗೆ ಮೀಸಲಾತಿಯ ಫಲಾನುಭವಿಗಳಾದ ಹೊಸ ತಲೆಮಾರಿನ ಯುವ ಪೀಳಿಗೆಯ ಅನಿಸಿಕೆಗಳು, ಆಕಾಂಕ್ಷೆಗಳೇನೆಂಬುದೇ ಅರ್ಥವಾದಂತಿಲ್ಲ....

ಇವತ್ತು ಪಿಯುಸಿಗೆ ಪ್ರವೇಶ ಪಡೆಯುವ, ಸಿಇಟಿ ಪರೀಕ್ಷೆ ಬರೆಯುವ ದಲಿತ-ಹಿಂದುಳಿದ-ಅಲ್ಪಸಂಖ್ಯಾತ ವರ್ಗಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರ್‍ಯಾರೂ ಕಳಪೆ ಮಾರ್ಕ್ಸ್ ಪಡೆಯುವ ದಡ್ಡರಲ್ಲವೇ ಅಲ್ಲ... ಮೀಸಲಾತಿ ಕೋಟಾಗೆ ಸೇರಿದ ಇವರೆಲ್ಲರೂ ಸಾಮಾನ್ಯ ವರ್ಗದ ಮೆರಿಟ್ ವಿದ್ಯಾರ್ಥಿಗಳಷ್ಟೇ ಸಮರ್ಥರೂ, ಬುದ್ಧಿವಂತರೂ, ಪರಿಶ್ರಮ ಜೀವಿಗಳಾದ್ದರಿಂದಲೇ ಬರ ಬರುತ್ತ ಮೆರಿಟ್ ಹಾಗೂ ಮೀಸಲಾತಿ ಅಭ್ಯರ್ಥಿಗಳ ಕನಿಷ್ಠ ಅರ್ಹತಾಂಕಗಳ (cut off mark) ನಡುವಿನ ಅಂತರ ಅತ್ಯಲ್ಪವೆನ್ನುವಷ್ಟು ಕಿರಿದಾಗಿಬಿಟ್ಟಿದೆ...

ಬಹುಶಃ ಶಿಕ್ಷಣ ಕ್ಷೇತ್ರದ ವಾಸ್ತವಾಂಶಗಳ ಬಗ್ಗೆ ಕೊಂಚ ಗಮನವಿಟ್ಟು ವಿವರಗಳನ್ನು ಕಲೆ ಹಾಕುವಷ್ಟೂ ವ್ಯವಧಾನವೆಲ್ಲಿದೆ ಸಿದ್ಧರಾಮಯ್ಯನವರಂತಹ 'ಬಿಜಿ' ನಾಯಕರಿಗೆ?

ತಮ್ಮ ಪವರ್‌ಪಾಲಿಟಿಕ್ಸ್‌ನ ಗುದ್ದಾಟಗಳಲ್ಲೇ ಸದಾ ಮುಳುಗಿರುವ ಸಿದ್ದು ಬಳಗಕ್ಕೆ ಮೀಸಲಾತಿ ಎಂಬುದು ಮೆರಿಟ್‌ನ ಶತ್ರುವಲ್ಲ; ಹಾಗೆಯೇ ಮೆರಿಟ್ಟು ಮೀಸಲಾತಿಯ ವೈರಿಯೂ ಅಲ್ಲವೆಂಬ ಸರಳ ಸತ್ಯವನ್ನು ಗ್ರಹಿಸುವುದೂ ಸಾಧ್ಯವಾಗಿರಲಿಕ್ಕಿಲ್ಲ... ■





ಕೇಂದ್ರ ಸಾಹಿತ್ಯ ಅಕಾಡೆಮಿ 'ಅಗ್ರಹಾರ'ದವರ ಅಪಸ್ವರ

ಕೇಂದ್ರ ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿಯಾಗಿ ಕನ್ನಡ ಬರಹಗಾರ ಅಗ್ರಹಾರ ಕೃಷ್ಣಮೂರ್ತಿ ನೇಮಕವಾಗುವುದು ಖಚಿತವಾಗಿರುವ ಬೆನ್ನಲ್ಲೇ ಕೆಲ ಪತ್ರಕರ್ತರು ಕಿತಾಪತಿ ಶುರು ಮಾಡಿದ್ದಾರೆ.

ಕಳೆದ ಶುಕ್ರವಾರದ ಕನ್ನಡಪ್ರಭ ಹಾಗೂ ದ ಹಿಂದೂ ದಿನಪತ್ರಿಕೆಗಳಲ್ಲಿ 'ಅಕಾಡೆಮಿ ಕಾರ್ಯದರ್ಶಿಯಾಗಿ ಅಗ್ರಹಾರ ಕೃಷ್ಣಮೂರ್ತಿ ನೇಮಕಗೊಳ್ಳುತ್ತಿರುವುದು ಈಗ ವಿವಾದಕ್ಕೆ ಕಾರಣವಾಗಿದೆ' ಎಂಬ ಕಲ್ಪಿತ ವರದಿಯೊಂದು ಪ್ರಕಟವಾಗಿತ್ತು.

ಖ್ಯಾತ ಮಲೆಯಾಳಂ ಸಾಹಿತಿ ಸಚ್ಚಿದಾನಂದನರ ಅವಧಿ ಮುಗಿದ ನಂತರ ಅಕಾಡೆಮಿಯ ದಕ್ಷಿಣ ವಲಯ ಪ್ರಾದೇಶಿಕ ಕಚೇರಿಯ ಕಾರ್ಯದರ್ಶಿಯಾಗಿದ್ದ ಅಗ್ರಹಾರ ಕೃಷ್ಣಮೂರ್ತಿಯವರನ್ನು ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿಯನ್ನಾಗಿ ನೇಮಿಸಲು ಸಂಬಂಧಿಸಿದ ಸಮಿತಿ ನಿರ್ಧರಿಸಿದೆ.

ಈ ಸುದ್ದಿ ಬಂದ ತಕ್ಷಣ ಕೆಲ ಪುರೋಹಿತ ಪತ್ರಕರ್ತರು ಚುರುಕಾಗಿ 'ಅಗ್ರಹಾರ ವಿರುದ್ಧ ಹಣ ದುರುಪಯೋಗದ ಆರೋಪವಿದ್ದು ಸಿಬಿಐ ತನಿಖೆ ನಡೆದಿದೆ' ಎಂಬಿತ್ಯಾದಿ ರೋಚಕ ವರದಿ ನೀಡಿದ್ದಾರೆ.

ವಾಸ್ತವವೇನೆಂದರೆ ಅಗ್ರಹಾರ ಕೃಷ್ಣಮೂರ್ತಿ ಬಗ್ಗೆ ಅಂತಹ ಆರೋಪವೊಂದು ಬಂದು ಅದರ ತನಿಖೆಯೂ ಆಗಿ ಅವೆಲ್ಲಾ ಹುರುಳಿಲ್ಲದವುಗಳೆಂದು ಸಾಬೀತಾಗಿದೆ. ಮತ್ತು ಇವೆಲ್ಲಾ ತೀರಾ ಹಳೆಯ, ಮುಗಿದ ವಿಷಯ. ಹೀಗಿದ್ದಾಗಲೂ ಇಂತ ಕುಚೋದ್ಯದ ವರದಿ ಬರೆಯಲು ಪುರೋಹಿತ ಪತ್ರಕರ್ತರಿಗೆ ಪ್ರಚೋದನೆ ನೀಡಿದವರ್‍ಯಾರೆಂಬ ಬಗ್ಗೆಯೂ ತರೇವಾರಿ ಪುಕಾರುಗಳು ಕೇಳಿಬರುತ್ತಿವೆ. ಇನ್ನೂ ತಮಾಷೆ ಏನೆಂದರೆ ಈ ವರದಿಗಳು ದೆಹಲಿ ಡೇಟ್‌ಲೈನ್‌ನಲ್ಲಿ ಪ್ರಕಟಗೊಂಡಿವೆಯಾದರೂ ವರದಿ ಬರೆದಿರುವವರು ಬೆಂಗಳೂರಿನ ಪತ್ರಕರ್ತರೆಂಬುದು.

ಇವರ ದುರುದ್ದೇಶಗಳೇನೆ ಇರಲಿ ಅಗ್ರಹಾರ ಕೃಷ್ಣಮೂರ್ತಿ ಇದನ್ನು ಕೇರ್ ಮಾಡದೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿಯಾಗಿ ರಚನಾತ್ಮಕ ಕೆಲಸ ಮಾಡಲಿ ಎಂದು 'ಲಂಕೇಶ್' ಬಳಗ ಆಶಿಸುತ್ತದೆ. ಸ್ವತಃ ಲಂಕೇಶರ ಒಡನಾಡಿಯಾಗಿದ್ದ ಅಗ್ರಹಾರ ಕೃಷ್ಣಮೂರ್ತಿಯವರು ಈ ಹೊಸ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತಾರೆ ಎಂಬುದು ನಮ್ಮ ನಿರೀಕ್ಷೆ. ●

ಲತ್ತೆಯೋ ದೌರ್ಭಾಗ್ಯವೋ; ಕುಮಾರಸ್ವಾಮಿ ಮುಖ್ಯಮಂತ್ರಿಯಾದಾಗಿನಿಂದ ಬೆಂಗಳೂರಿನ ಒಟ್ಟು ಹನ್ನೆರಡು ಸ್ಲಮ್ಮುಗಳು ಭಸ್ಮಗೊಂಡಿವೆ. ಕುಮಾರಸ್ವಾಮಿ ಪ್ರಮಾಣವಚನ ಸ್ವೀಕರಿಸಿದ ರಾತ್ರಿಯೇ ಚಂದ್ರಾಲೇಔಟ್ ವ್ಯಾಪ್ತಿಯ ವಿನಾಯಕ ಲೇಔಟಿನ ಸ್ಲಮ್ಮಿಗೆ ಬೆಂಕಿ ಬಿದ್ದು ಇನ್ನೂರಕ್ಕೂ ಹೆಚ್ಚು ಗುಡಿಸಲುಗಳು ಬೂದಿಯಾದವು. ಅದರ ಮರುದಿನ ಅಂದರೆ ಫೆಬ್ರವರಿ ಒಂಭತ್ತರ ರಾತ್ರಿ ಬನ್ನೇರುಘಟ್ಟ ರಸ್ತೆಯ ಎನ್ಸೆಸ್ ಪಾಳ್ಯದ ಜೇಡಿಮರ ಸ್ಲಮ್ಮಿಗೆ ಬಿದ್ದ ಬೆಂಕಿಗೆ ಮಂಜುನಾಥ ನಾಯ್ಕ ಎಂಬಾತ ಸತ್ತೇ ಹೋದ. ಅದಾದ ಮೂರೇ ದಿನಕ್ಕೆ ಲಗ್ಗೆರೆಯಲ್ಲಿ ಸರ್ಕಾರಿ ಶಾಲೆಯ ಆವರಣದಲ್ಲಿದ್ದ ಇನ್ನೂರಕ್ಕೂ ಅಧಿಕ ಜೋಪಡಿಗಳು ಭಸ್ಮಗೊಂಡವು.



ಸುಟ್ಟ ಜೋಪಡಿಗಳ ಮುಂದೆ ದೇವರ ಮಕ್ಕಳು!

ತೀರ ಇತ್ತೀಚೆಗೆ ಅಂದರೆ ಏಪ್ರಿಲ್ 24ರ ರಾತ್ರಿ ಬಡದಿ ಪೊಲೀಸ್ ಠಾಣೆ ವ್ಯಾಪ್ತಿಯ ಹೊಸಪಾಳ್ಯದ ಅಂಬೇಡ್ಕರ್ ಕಾಲೋನಿಯ ಸಾವಿರ ಗುಡಿಸಲುಗಳ ಪೈಕಿ ಆರುನೂರು ಗುಡಿಸಲುಗಳು ಬೂದಿಯಾದದ್ದನ್ನು ಸೇರಿಸಿದರೆ ಕುಮಾರಸ್ವಾಮಿ ಮುಖ್ಯಮಂತ್ರಿಗಿರಿಯಲ್ಲಿ, ಸುಟ್ಟು ಒಟ್ಟು ಸ್ಲಮ್ಮುಗಳ ಸಂಖ್ಯೆ ಹನ್ನೆರಡಾದಂತಾಯ್ತು.

ಕುಮಾರಸ್ವಾಮಿ ಸೀಯೆಮ್ಮಾಗಿ ಇನ್ನು ಮೂರು ತಿಂಗಳಾಗಿಲ್ಲ, ಆಗಲೇ ಹನ್ನೆರಡು ಸ್ಲಮ್ಮುಗಳು ಭಸ್ಮ! ಏನಿದರ ಮರ್ಮ? ಇದೋ ಹತ್ತೋ ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದ ಅರಸು, ವೀರೇಂದ್ರ ಪಾಟೀಲ್, ಕೃಷ್ಣರ ಕಾಲದಲ್ಲೂ ಹೀಗಾಗಿದ್ದಿಲ್ಲ.


ಸುಟ್ಟ ಸ್ಲಮ್ಮುಗಳೆಲ್ಲ ಗುಲ್ಬರ್ಗಾ, ರಾಯಚೂರಿನಿಂದ ಬಂದ ಕಟ್ಟಡ ಕಾರ್ಮಿಕರಿದ್ದ ಕನ್ನಡಿಗರ ಜೋಪಡಿಪಟ್ಟಿಗಳೇ. ಎಲ್ಲೋ ಗೋವಾದಲ್ಲಿ ಕನ್ನಡಿಗರ ಗುಡಿಸಲು ಕೆಡವಿದ್ದಕ್ಕೆ ಬಾಯಿಬಡಿದುಕೊಂಡವರ್‍ಯಾರೂ ಈ ಬಗ್ಗೆ ಚಕಾರವೆತ್ತಿಲ್ಲ. ತಮ್ಮದೇ ಜಿಲ್ಲೆಯವರೆಂಬ ಕಾರಣಕ್ಕಾದರೂ ಕನಿಷ್ಠ ಖರ್ಗೆ-ಧರ್ಮಸಿಂಗ್ ಜೋಡಿ ಕೂಗಾಡಬೇಕಿತ್ತು. ದಲಿತರೆಂಬ ಕಾರಣಕ್ಕೆ ದಲಿತ ಸಂಘಟನೆಗಳಾದರೂ ಪ್ರತಿಭಟಿಸಬೇಕಿತ್ತು, ಸ್ಲಂ ರಾಜಕೀಯವನ್ನೇ ಮಾಡುತ್ತ ಬಂದ ಕಾಂಗ್ರೆಸ್ ತಾನೊಂದು ವಿರೋಧ ಪಕ್ಷವೆಂಬ ಕಾರಣಕ್ಕಾದರೂ ಇದನ್ನು ಗಂಭೀರವಾಗಿ ಪರಿಗಣಿಸಬೇಕಿತ್ತು. ಹೋಗಲಿ ಪತ್ರಿಕೆಗಳಾದರೂ ಈ ಬಗ್ಗೆ ತನಿಖೆ ಕೈಗೊಳ್ಳಬೇಕಿತ್ತು.

ದುರಂತವೆಂದರೆ ಈ ರೀತಿ ಸ್ಲಮ್ಮೊಂದಕ್ಕೆ ಬೆಂಕಿ ಬಿದ್ದಾಗ ಪ್ರಜಾವಾಣಿ ಸಣ್ಣದೊಂದು ಫೋಟೋ ಹಾಕಿ ಸುದ್ದಿ ಮಾಡುತ್ತದೆ. ಅಷ್ಟೇ, ಅನಂತರ ಅದು ಯಾರಿಗೂ ಬೇಡದ ವಿಷಯವಾಗುತ್ತದೆ. ಮುಖ್ಯಮಂತ್ರಿಯ ಕಾಲುಗುಣವೋ, ಪತ್ರಿಕೆಗಳ ಅಸಡ್ಡೆಯೋ, ಜನ ಪ್ರತಿಭಟಿಸುವ ಶಕ್ತಿಯನ್ನೇ ಕಳೆಕೊಂಡಿದ್ದಾರೋ ಅಥವಾ ಗುಲ್ಬರ್ಗಾ ಕನ್ನಡಿಗರಿಗೇ ಬಾಯಿಲ್ಲವೋ....!

ಸುಟ್ಟ ಜೋಪಡಿಗಳ ಮುಂದೆ ಹರಿಸಿದ ಕಣ್ಣೀರೊಂದೇ ಆ ನತದೃಷ್ಟರಿಗಾದ ಲಾಭ.

ದೇವರ ಮಕ್ಕಳನ್ನು ದೇವರೇ ಕಾಯಬೇಕೆ? ●

ದ್ಯಾವೇಗೌಡ್ಯಾಕೆ ಯ್ಯಮ್ಮೆತ್ತಂಗೆ ಅಳತನಂತಲ್ಲಾ!



ಅಲ್ಲೊಂದು ರಣಬಿಸಿಲ ಮೌನ ಆವರಿಸಿತ್ತು ಭೂಮಿ ಆಕಾಶದ ನಡುವಿನ ಗಾಳಿಯೂ ಬಿಸಿಯಾಗಿದ್ದರಿಂದ ಆಗಾಗ್ಗೆ ಗಾಳಿ ಬೀಸಿದಾಗ ಹಬೆಗೆ ಮೈಯೊಡ್ಡಿದಂತಹ ಅನುಭವ ವಾಗುತ್ತಿತ್ತು. ನೀರನ್ನು ಹುಡುಕಿ ಕೊಂಡು ಊರಿನ ಕಡೆಗೇ ಬರುತ್ತಿದ್ದ ದನಗಳನ್ನು ನೋಡಿದ ಜುಮ್ಮಿ,

"ಅದ್ಯಾರವು ದನ ಬತ್ತಾಯಿರವು?" ಎಂದಳು.

"ಆ ದನ ನೋಡಿದ್ರೆ ಸಾಕಿ ದೋನು ಹುಲ್ಲು ನೀರು ತೋರಂಗೆ ಕಾಣದಿಲ್ಲ ಕಂಢ್ಳೆ" ಎಂದ ಸೀರ.

"ದನ ಸಾಕ್ತಾಗದೋರು ಮದ್ದು ದೊಡ್ಡಿಗೊಡಿತಿದ್ರು. ಈಗ ಅವುನ್ನಾರೂ ಸ್ವಾಮಿ ಸಾಕ್ತಾಗದೆಯಿರೋರತ್ರ ದನ ತಗುಂಡು ತಾನೆ ಸಾಕ್ತಯಿದ್ದನಂತೆ" ಎಂದಳು ಜುಮ್ಮಿ.

"ಸ್ವಾಮಿ ದನ ಸಾಕ್ತಯಿದ್ದನೆ?" ಎಂದ ಕಾಳಮಾವ.

"ಊ ಕಣ ಮಾವ, ಪಂಚಾತಿಲಿ ಅಂಗಂತ ಮಾತಾಡ್ತಯಿದ್ರು. ಬೇಕಾದೋಟು ದನ ಮಡಿಕಂಡು ಸಾಕ್ತಯಿದ್ದನಂತೆ."

"ಅಂಗರೆಲ್ಲೊ ಗ್ವಲ್ಲರ ಸ್ವಾಮಿಯಿರಬೇಕು ಕಂಡ್ಳೆ."

"ಗ್ವಲ್ಲರೋನಲ್ಲ ಕಣ ಮಾವ ಬ್ರಾಂಬ್ರೊನಂತೆ" ಎಂದ ಉಗ್ರಿ.

"ನೋಡಪ್ಪ ಬ್ರಾಂಬ್ರು ಸ್ವಾಮಿ ದನ ಸಾಕ್ತನೆ ಅಂದ್ರೆ, ಇನ್ನು ನಮ್ಮ ಸ್ವಾಮಿಗಳಿಗೇನಾಗ್ಬದೆ?"

"ನಮ್ಮ ಸ್ವಾಮಿಗಳ ತೆವ್ಲಲೆ ಬ್ಯಾರೆ. ಅವುರ್ನಾಕ್ ದನ ಕಟ್ತರೂ. ಇವುರ ಕತೆ ಯಂಗೆ ಅಂದ್ರೆ ರುಪಾಯಿಗೆ ಸೇರು ಹಾಲು ಸಿಗುವಾಗ ಯಮ್ಮೆ ಯಾಕ್ ಕಟ್ತರೂ ಅನ್ನಂಗವುರೆ ಕಣ ಮಾವ" ಎಂದ ಉಗ್ರಿ.

"ಮದಿವಾಗದೆ ಅಂಗೆ ಇರೋರಿಗೂ ಅಂಗೇ ಅಂತರೆ ಕಂಡ್ರ ಉಗ್ರಿ" ಎಂದು ಜುಮ್ಮಿ ನಗಾಡಿದಳು.

"ಊ ಅಗ್ಗವಾಗಿ ಹಾಲು ಸಿಗುವಾಗ, ಯಾರ ತಾನೆ ಯಮ್ಮೆ ಕಟ್ಟಿ, ಹುಲ್ಲಾಕಿ, ಸಗಣಿ ಬಾಚ್ತರೂ?" ಎಂದ ಉಗ್ರಿ.

"ಈ ಮಾತು ನಿನ್ನ ಬದ್ಧಿಗೇ ಬತ್ತದೆ ಅನ್ನದು ಗೊತ್ತಿಲವೇನ್ಲ" ಎಂದು ಜುಮ್ಮಿ ಬಿದ್ದು ಬಿದ್ದು ನಕ್ಕಳು.

"ನನ್ನ ಬದ್ಧಿಗ್ಯಾಕ್ ಬಂದತ್ತೆ? ನಾನೇನಾರ ಅಂಗಿದ್ರೆ ಊರಲ್ಲಿ ಬ್ಲಲಿ ಕೊಡತಿದ್ರೆ? ನಾನು ಯಮ್ಮೆ ಕಟಗಳನು ತಡಾಗಿರಬವುದು, ಆಗಂತ ಅಗ್ಗವಾದಾಲುಡ್ಕಂಡು ಆಲಿತಾಯಿದ್ದನೆ."

"ಅದೇನಾರ ಆಗ್ಲಿ ತರತ್ತತ್ತ ವಳ್ಳೆ ಯಮ್ಮೆ ತಂದು ಕಟಗಳ್ಳ."

"ಯಮ್ಮೆ ಅಂದ್ರೆ ಅಂತಿಂತ ಯಮ್ಮೆ ತರದಿಲ್ಲ, ಏಟೊತ್ತಿನಲ್ಲಿ ಕ್ಯಚ್ಚಲಿಗೆ ಕೈಹಾಕಿದ್ರೂ ಸುಮ್ಮನೆ ನಿಂತಗಬೇಕು."

"ತುವ್ವರಿಸಿದ್ರೆ ಯಂತ ಯಮ್ಮೆನೂ ಸ್ವರಬುಟಗಂಡು ನಿಂತಗತ್ತವೆ ತಗೊ" ಎಂದು ಜುಮ್ಮಿ ನಗಾಡಿದಳು.

"ಆ ದ್ಯಾವೇಗೌಡ್ಯಾಕೆ ಯಮ್ಮತ್ತಂಗೆ ಅಳತನಂತಲ್ಲಾ" ಎಂದ ಸೀರ.

"ಅಳೊ ಅಂತದು ಅವುನಿಗೇನಾಗಿದ್ದತ್ಲ. ಅಂಗೆ ನೋಡಿದ್ರೆ ಸಂತೋಸವಾಗಿರೊ ಕಾಲ ಇದು."

"ಸಂತೋಸವಾಗೇ ಅವುನೆ ದ್ವಡಪ್ಪ ಆದ್ರೆ ಸಾರ್ವಜನಿಕವಾಗಿ ಅಳತಾ ಅವುನೆ" ಎಂದು ಕೊಂಡು ವಾಟಿಸ್ಸೆ ಬಂದ.

"ನೀರಗಣ್ಣು ಮುಂಡೆ ಊರಾಳು ಮಾಡಿದ್ನು ಅಂತ ಅವುನ ಕಣ್ಣೀರ ನಂಬಕ್ಯೋಗ ಬಾರ್ದು" ಎಂದ ಉಗ್ರಿ.

"ಅಳೊ ಹೆಂಗುಸ್ನೂ ನಗೋ ಗಂಡುಸ್ನ ನಂಬುಬಾರದು ಅಂತ ಗಾದೆ ಮಾತು ಮಾಭಾರತದ ಕಾಲದಿಂದ ಬಂದಿತ್ತು, ಆದ್ರೀಗ ಉಲ್ಟ ಆಗ್ಯದೆ" ಎಂದ ವಾಟಿಸ್ಸೆ.

"ಅಂಗೆ ನೋಡಿದ್ರೆ ಕೇಡುಗಾಲ ಯಲ್ಲಾರಿಗೂ ಬಂದದೆ ಕಣೊ ವಾಟಿಸ್ಸೆ."

"ಇಲ್ಲ ಕಣೊ ಉಗ್ರಿ. ದ್ಯಾವೇಗೌಡನಿಗೆ ಮಾತ್ರ ಇದು ವಳ್ಳೆ ಕಾಲ. ಅವುನು ಮಾಡಕ್ಕೆ ವಂಟಿದ್ಯಲ್ಲ ಸಕ್ಸಸ್ಸಾಗ್ಯದೆ. ಇ ಈಸ್ ರಿಯಲಿ ಲಕ್ಕಿ ಫೆಲೊ ಕಣೊ, ಲಕ್ಕಿ ಫೆಲೊ."

"ಮತ್ತೆ ಅದ್ಯಾಕೆ ಅಳತಯಿದ್ದನೂ?"

"ತುಂಬ ಖುಷಿಯಾದಾಗ ಅಳದು ಅವುನ ವೀಕನೆಸ್ಸು. ಮಗ ಮುಖ್ಯಮಂತ್ರಿಯಾದ. ಸಪ್ಪೆಂಡಾಗಿದ್ದ ಎಮ್ಮೆಲ್ಲೆಗಳನ್ನೆಲ್ಲ ತಿರಗ ಆಫೀಸತ್ರಕೆ ಕರದು ಕಾಫಿ ಕೊಟ್ಟ. ತಿರಗ ಮಾಮೂಲಿ ಯಂಗೆ ಮನೆಹತ್ರ ಜನ ಸೇರಕ್ಕೆ ಶುರುವಾದ್ರು. ಇಂತ ಟೇಮ್ನಲ್ಲಿ ಆನಂದ ಭಾಸಪ ಸುರುಸ್ತೆ ಇನ್ನೇನು ಮಾಡ್ತನೆ. ಆದ್ರೆ ಈ ಜನಗಳು ಪಾಪ ಅಳತನೆ ಅಂತವೆ. ಅವುನ್ನೋಡಿದ್ರೆ ವಳಗೇ ನಗತ ಕುಂತವುನೆ."

"ಅಂತು ಕುಮಾರ ಸ್ವಾಮಿನೂ ದ್ಯಾವೇಗೌಡನೂ ಒಂದಾದ್ರು ಅನ್ನು" ಎಂದ ಸೀರ.

"ಒಂದಾಗಕ್ಕೆ ಅವುರು ಬ್ಯಾರೆ ಆಗಿದ್ದಾವಾಗ್ಲೊ ಸೀರಣ್ಣ?" ಎಂದ ಉಗ್ರಿ.



"ಅಂಗರೆ ಆ ಗಾದಿ ಮಾತು ಮಾಭಾರತದ ಕಾಲದಿಂದ ಇದ್ದತೆ?"

"ಊ ಕಣಕ್ಕ. ಕೃಷ್ಣ ಯಾವಾಗ್ಲು ನಗತಿದ್ದ, ದ್ರೌಪತಿ ಯಾವಾಗ್ಲು ಅಳತಿದ್ಲು, ಇಬ್ರು ಸೇರಿ ಕುರುವಂಸ ನಿರುವಂಸ ಮಾಡಿಬುಟ್ರು. ಆದ್ರೀಗಿನ ಕಾಲದಲ್ಲಿ ದ್ಯಾವೇಗೌಡ ಅಳತಕುಂತವುನೆ, ಶೋಬ ಕರಂದ್ಲಾಜೆ ನಗತ ಕುಂತವುಳೆ. ಇವುನು ದಳ ಹಾಳು ಮಾಡಿದ್ರೆ ಅವುಳು ಬಜೆಪಿನೆ ತಗಿಯಕ್ಕೆ ಹ್ವಂಟವುಳೆ."

"ಸೋಬ ಕರಿಂದಾಚೆ ಅಂದ್ರೆ ಅವುಳ್ಯಾರ್ಲ?"

"ಅವುಳು ನಮ್ಮ ಎಡೂರಪ್ಪನ ಪ್ರೆಂಡು ಕಣಕ್ಕ. ಅದ್ಕೆ ಎಡೂರ ಅವುಳ ಮಂತ್ರಿ ಮಾಡ್ತಿನಿ ಅಂತ ಹ್ವಂಟವುನೆ. ಅವುನಿಗಾಗದೋರು ಅದ್ಯಂಗೆ ಮಾಡ್ತನೆ ನೋಡನ ಅಂತ ಕುಂತವುರೆ. ಅಂಗಾಗಿ ಈ ಬಜೆಪಿಗೆ ಕೇಡುಗಾಲ ವಕ್ಕರಿಸಿಗಂಡದೆ."

"ಅಂಗರೆ ನಾಟಗ ಅಂತಿಯಾ?"

"ಕಣೆ ಕೇಳು, ನಾಟಗ ಆಗ್ಲೆ ಮುಗಿಯಕ್ಕೆ ಬಂದದೆ. ಕೊನೆ ಅಂಕ ಮನ್ನೆದಿನ ನ್ಯಡದೋಯ್ತು."

"ಅದ್ಯಾವುದಪ್ಪ ಕ್ವನೆ ಅಂಕ" ಎಂದು ಸೀರ ಕೇಳಿದ ಕೂಡಲೇ ವಾಟಿಸ್ಸೆ ಪೌರಾಣಿಕ ನಾಟಕದ ಹಾವಭಾವದಲ್ಲಿ

"ಎಲವೊ ಸದಾನಂದ, ಒಂದಲ್ಲಾ ಒಂದು ದಿನ ತುಂಬಿದ ವಿಧಾನ ಸಭೆಯಲ್ಲಿ ಬಿಜೆಪಿ ಮಾನ ಹರಾಜಾಕದಿದ್ದರೆ ನಾನು ಕುಮಾರಸ್ವಾಮಿಯೇ ಅಲ್ಲ, ಮಲಗಿದ್ದ ಸರ್ಪದ ಎಡೆಯನ್ನು ತುಳಿದಿರುವೆ. ಬೆಂಕಿಯೊಡನೆ ಸರಸವಾಡಿರುವೆ. ನಿಮ್ಮ ಎಡೂರನನ್ನೇ ಬಳಸಿಕೊಂಡು ನಿಮ್ಮನ್ನು ನಿರ್ನಾಮ ಮಾಡುವೆ" ಎಂದ ವಾಟಿಸ್ಸೆ. ಕೂಡಲೇ,

"ಮುಚ್ಚು ಬಾಯಿ ದೇವೇಗೌಡನ ಮಗನೆ" ಎಂದ ಉಗ್ರಿ.

"ಏಯ್ ಸದಾನಂದ, ನಾನು ದೇವೇಗೌಡನ ಮಗನೊ ಅಲ್ಲವೊ ಎಂಬ ನಿರ್ಧಾರಕ್ಕಾಗಿಯೇ ಈ ಜಗಳ. ಮುಗಿಯಿತು ನಿಮ್ಮ ಕತೆ, ನಡೆಯಿರಿ ಚುನಾವಣೆಗೆ."

"ಚುನಾವಣೆಯ ಗೊಡ್ಡು ಬೆದರಿಕೆಯನ್ನು ನನ್ನ ಬಳಿ ಹೇಳುವುದು ಬೇಡ. ಚುನಾವಣೆಗೆ ನಾವು ಯಾವಾಗಲೂ ಸಿದ್ಧ ನಮ್ಮ ಬಳಿ ಎಪ್ಪತ್ತಕ್ಕೂ ಹೆಚ್ಚಿನ ಶಾಸಕರ ಭಲವುಂಟು."

"ನಿನ್ನ ಎಪ್ಪತ್ತು ಶಾಸಕರ ಭಲವನ್ನು ಇಪ್ಪತ್ತಕ್ಕೆ ಇಳಿಸಿ ನಾನೇ ನಲವತ್ತು ತಿಂಗಳು ಇರದಿದ್ದರೆ, ನಾನು ದೇವೇಗೌಡನ ಮಗನಲ್ಲ, ದೇವೇಗೌಡನ ಮಗನಲ್ಲ" ಎಂದ ವಾಟಿಸ್ಸೆ ರಾಜ್‌ಕುಮಾರನ ದನಿಯಲ್ಲಿ ಹೇಳಿ,

"ದ್ವಡಪ್ಪ ಈಗ ನಿನ್ನ ಡೈಲಾಗು" ಎಂದ. ಬಿದ್ದುಬಿದ್ದು ನಕ್ಕ ಜುಮ್ಮಿ,

"ಕಾಳಮಾವ ಏನು ಮಾತಾಡಬೇಕ್ಲ?" ಎಂದಳು.

"ಕಾಳದ್ವಡಪ್ಪ ಕುಳಿತಿರೊ ಸ್ಟೈಲು ದ್ಯಾವೇಗೌಡ ಕುಳತಂಗೇ ಅದೆ. ಡೈಲಾಗೇನಪ್ಪಾ ಅಂದ್ರೇ.... ಕುಮಾರ, ಶಾಂತ ನಾಗು. ನಮ್ಮನ್ನು ಆಡಿಕೊಳ್ಳುವ ಜನ ಅರಮನೆ ಮೈದಾನದಲ್ಲಿ ಸೇರಿದ್ದಾರೆ. ಅವರಿಗೆ ಅಂಜಿಕೊಂಡಾದರೂ ನೀವು ನಿಮ್ಮ ಜಗಳವನ್ನು ನಿಲ್ಲಿಸಬೇಕು. ನಿಮ್ಮ ಇಂತಹ ಸ್ಥಿತಿಗಾಗಿ ನಾನು ಕಿವಿಯಿದ್ದು ಕಿವುಡನಾಗಿ, ಕಣ್ಣಿದ್ದು ಕುರುಡನಾಗಿ, ಕಾಲಿದ್ದು ಹೆಳವನಾಗಿ ವರ್ತಿಸುತ್ತಿರುವ ಮರ್ಮವನ್ನು ಅರಿತು ನಡೆದುಕೊಳ್ಳುವುದು ಒಳಿತು ಅನ್ನಬೇಕು ಕಣಕ್ಕ."

"ಅಂದ ಅಂತ ಇಟಗೊ."

"ಆಮೇಲೆ, ಸದಾನಂದರೆ ಇಲ್ಲಿ ಬನ್ನಿ. ನಿಮ್ಮ ಜೀವಮಾನದಲ್ಲೆಂದೂ ಅಧಿಕಾರಕ್ಕೆ ಬರದೆ ದಿವಂಗತರಾಗಿ ಹೋಗುತ್ತಿದ್ದ ನಿಮ್ಮವರಿಗೆ ಅಧಿಕಾರ ಕೊಡಿಸಿದ್ದೇನೆ. ಅದಕ್ಕಾಗಿ ನಡೆದಿರುವ ತ್ಯಾಗ ಬಲಿದಾನವನ್ನು ನೆನೆದರೆ ನನಗೆ ದುಃಖವಾಗುತ್ತದೆ. ಮತ್ತೆ ನೀವು ಚುನಾವಣೆಗೆ ಹೋಗುವಿರಾದರೆ ಬಿಜೆಪಿಯೊಳಗೇ ಬಿಜೆಪಿ ಕ್ಯಾಂಡಿಡೇಟುಗಳನ್ನ ಹುಡುಕಿ ನಿಲ್ಲಿಸಿ. ನೀವು ಶಾಶ್ವತವಾಗಿ ಹದಿನೆಂಟೇ ಜನಗಳು ಆರಿಸಿ ಬರುವಂತಹ ಸಂಚು ರೂಪಿಸುತ್ತೇವೆ. ಈಗ ಮಾನಮರ್ಯಾದೆಯಿಂದ ಕುಮಾರ ಹೇಳಿದಂತೆ ನಡೆದುಕೊಳ್ಳುತ್ತೀರೋ ಅಥವಾ ಶೇವಣಿ ಕಳೆದುಕೊಳ್ಳುತ್ತಿರೋ ಅಂತ ಇನ್ನೊಂದು ಡೈಲಾಗ್ ಕಾಳ ದ್ವಡಪ್ಪ ಹೇಳಬೇಕು ಕಣಕ್ಕ."

"ಹೇಳಿದ ಮ್ಯಾಲೇನಾದತ್ಲ?"

"ಕ್ಷಮಿಸಿ ಗೌಡರೆ, ಪ್ರಮಾದವಾಯ್ತು, ಇನ್ನೆಂದೂ ನಾನು ಬಾಯಿ ಬಿಡುವುದಿಲ್ಲ, ಬಿಟ್ಟರೂ ಮುವ್ವತ್ತೆರಡು ಹಲ್ಲೂ ಕಾಣುವಂತೆ ನಗುತ್ತಿರುತ್ತೇನೆ" ಎಂದ ವಾಟಿಸ್ಸೆ ಕಾಳಮಾವನ ಕಾಲಿಗೆ ಬಿದ್ದು ಅಭಿನಯಿಸಿದ.

ಕಾಳಮಾವ ತುಟಿಯಂಚಲ್ಲಿ ನಗುವಾಗ ಸೀರ,

"ರಾಜಕುಮಾರ ಮೈಮ್ಯಾಲೆ ಬಂದಂಗೆ ಮಾಡಿದರಲ್ಲಾ ಇವುರೂ" ಎಂದು ಅಚ್ಚರಿಗೊಂಡ.

"ಚಿಗಪ್ಪ, ನಮ್ಮಣ್ಣಾರು ಸತ್ತಿಲ್ಲ, ನಾವ್ಯಲ್ಲ ಸಾಯಗಂಟ ಅವುರು ಸಾಯದಿಲ್ಲ ಅಂಡರ್‌ಸ್ಟ್ಯಾಂಡ್?"

"!?"

–ಬಿ. ಚಂದ್ರೇಗೌಡ

Zero Hour ಮುನ್ನಿ

"ಇದು ಸ್ಪರ್ಧಾತ್ಮಕ ಯುಗ! ಐಟಿಯವರು ಹೇಳುವಂತೆ knowledge-age! ಹೆಚ್ಚು ಮಾಹಿತಿ ಗೊತ್ತಿದ್ದವರಿಗೆ ಹೆಚ್ಚೆಚ್ಚು ಲಾಭವಂತೆ.

ರಾಜಕೀಯ, ಸಾಹಿತ್ಯ, ಕ್ರೀಡೆ, ಸಿನಿಮಾಗಳ ಬಗ್ಗೆ ನಿಮ್ಮ ಜ್ಞಾನ (ಧ್ಯಾನ) ಎಷ್ಟೆಂದು ಪರೀಕ್ಷಿಸಲು ಈ Zero Hour ಎಂಬ ವಿಶಿಷ್ಟ ಅಂಕಣ ಆರಂಭಿಸುತ್ತಿದ್ದೇವೆ.

ತಮಾಷೆ, ವ್ಯಂಗ್ಯ ವಿಡಂಬನೆಗಳ ಮೂಲಕ ಸತ್ಯವನ್ನು ಹೇಳುವ ಈ ಹೊಸ ಶೈಲಿಯ 'Zero Hour' ನಿಮ್ಮನ್ನು ಖುಷಿಗೊಳಿಸುತ್ತಲೇ, ನಿಮ್ಮ ಗ್ರಹಿಕೆ, ಜ್ಞಾನಗಳಿಗೆ ಒಂದಿಷ್ಟು ಸವಾಲು ಎಸೆಯಲಿದೆ. ಧಾರವಾಡದ ಜರ್ನಲಿಸಂ ಸ್ಟೂಡೆಂಟ್ ಮತ್ತು 'ಲಂಕೇಶ್' ಅಭಿಮಾನಿ ಮುನ್ನಿ ಬರೆಯುತ್ತಿರುವ ಈ ಅಂಕಣದ 'Coffee rights' ನಿಮ್ಮವೇ ಪ್ರಿಯ ಓದುಗರೇ...

–ಗೌರು

1. "ಮೀಸಲಾತಿ ಜಾರಿಯಾಗದಿದ್ದರೆ ಇಲ್ಲೂ ನೇಪಾಳ ಕ್ರಾಂತಿ ಸಂಭವಿಸಲಿದೆ" ಎಂಬ ಸಿದ್ಧರಾಮಯ್ಯರ 'ಪ್ರಚಂಡ' ಹೇಳಿಕೆಯು ಏನನ್ನು ಸೂಚಿಸುತ್ತದೆ?



(a) ಸಿದ್ದು ಇಬ್ರಾಹಿಂಗಳೆಲ್ಲ ಮಾವೋವಾದಿಗಳಾಗಲಿದ್ದಾರೆ.
(b) ಎಂದಿನಂತೆ ದೇವೇಗೌಡರ ರಾಜಪ್ರಭುತ್ವದ ವಿರುದ್ಧದ ಹೇಳಿಕೆ.
(c) ಸಿದ್ಧರಾಮಯ್ಯರಿಗೆ current affairs ('ವಿದ್ಯಮಾನ್' ವಿದ್ಯಮಾನ) ಚೆನ್ನಾಗಿ ಗೊತ್ತು.
(d) ಅಹಿಂದ ವರ್ಗಗಳು ಸಿಡಿದೇಳಲಿವೆ.

2. ಗುಂಪಿಗೆ ಸೇರದ ಪದ ತೆಗೆಯಿರಿ

ಆರ್ಗನೈಸರ್, ಉದಯವಾಣಿ, ವಿಜಯ ಕರ್ನಾಟಕ, ದಿ ಹಿಂದೂ, ಸಂಯುಕ್ತ ಕರ್ನಾಟಕ, ಕನ್ನಡಪ್ರಭ

3. ಮೀಸಲಾತಿ ಬೇಡ ಎನ್ನುವ ನಾರಾಯಣಮೂರ್ತಿಗೇನು ಬೇಕು?

a) ರೈತರಿಂದ ಕಿತ್ತುಕೊಂಡ ಭೂಮಿ.
b) ಸರ್ಕಾರದ ರಿಯಾಯ್ತಿಗಳು.
c) ಐಟಿಯನ್ನು ಬ್ರಾಹ್ಮಣರ ಅಗ್ರಹಾರ ಮಾಡುವುದು
d) ಮೇಲಿನೆಲ್ಲವೂ!

4. ಓಂಪ್ರಕಾಶ್ ರಾವ್, ಸಾಧುಕೋಕಿಲಾರ ನಿರ್ದೇಶನದ ಸಾಮ್ಯತೆಗಳೇನು?

a) ರಿಮೇಕ್ ಚಿತ್ರ
b) ರಿಮಿಕ್ಸ್ ಚಿತ್ರ
c) ದೃಶ್ಯಗಳನ್ನು ಕದಿಯುವುದು
d) (b) ಮತ್ತು (c) ಎರಡೂ ಸರಿ

5. ನಾರಾಯಣಗೌಡ, ವಾಟಾಳ್, ಚಂಪಾ, ಸಿ. ಅಶ್ವತ್ ಕುರಿತ ಈ ಹೇಳಿಕೆಯಲ್ಲಿ ಯಾವುದು ಸರಿ?


a) ಕನ್ನಡವನ್ನು ಇವರಿಂದ ಕಾಪಾಡಬೇಕಿದೆ.
b) ಇವರೆಲ್ಲ ಅಸಲಿ 'ಖನ್ನಡ' ಓರಾಟಗಾರರು
c) ಇಡೀ ಗುಂಪನ್ನು ತೆಗೆದು ಅರಬ್ಬಿ ಸಮುದ್ರಕ್ಕೆ ಎಸೆಯಿರಿ
d) ಕನ್ನಡಕ್ಕೂ ಇವರಿಗೂ ಅಜಗಜಾಂತರ

ಉತ್ತರಗಳು
1. C 2. ದಿ ಹಿಂದೂ 3. D 4. D
5. C ಪೂರ್ತಿ ಸರಿಯುತ್ತರ A, B, D ಎಂದು ಬರೆದವರಿಗೂ "ಗ್ರೇಸ್ ಮಾರ್ಕ್ಸ್" ಕೊಡಲೇಬೇಕಾಗುತ್ತದೆ!


ಹೋದ ಸಲ ಹೊನ್ನಾವರಕ್ಕೆ ಹೋದದ್ದು ಬರೆದಾಗ ಒಂದು ಚಿಕ್ಕ ಅಂಶವನ್ನು ಮರೆತೆ. ಅದು, ತಾಳಗುಪ್ಪಾದಿಂದ ಕಾರವಾರ ಜಿಲ್ಲೆಯನ್ನು ಮುಟ್ಟುವಾಗ ಇರುವ ಜೋಗ್ ಜಲಪಾತ. ಅಲ್ಲಿಗೆ ಹೋಗಿ ಬಹಳ ದಿನವಾಗಿತ್ತು; ಕಳೆದ ಸಲ ಒಂದೂವರೆ ವರ್ಷದ ಹಿಂದೆ ಹೋಗಿದ್ದಾಗ ಕಾರವಾರ ಜಿಲ್ಲೆಯ ಕಡೆಯಿಂದ ನಿಂತು ನೋಡಿದ್ದೆ. ಈ ಸಲ ಶರಾವತಿಯ ಸುಂದರ ಸೇತುವೆ ಮನಸೆಳೆಯಿತು; ಅದರ ಮೇಲೆ ನಿಂತು ನದಿ, ಕಾಡು ನೋಡುವ ಆಸೆಯಿಂದ ಹೋದೆವು. ಅಷ್ಟು ಹತ್ತಿರ ಬಂದು ಜಲಪಾತದತ್ತ ನೋಡದಿರುವುದು ಹೇಗೆ? ಹೋದರೆ ಅಲ್ಲಿ ನಿರಾಶೆ ಕಾದಿತ್ತು.

ಜೋಗ್

ಅಲ್ಲಿ ಈಜುವ ಕೊಳ ಇರುವುದು ನನಗೆ ಗೊತ್ತಿರಲಿಲ್ಲ. ನೋಡೋಣವೆಂದು ಹೋದರೆ ಅದರ ಉಸ್ತುವಾರಿಗಿದ್ದ ಮನುಷ್ಯ ನಿಕ್ಕರ್, ಬನಿಯನ್‌ನಲ್ಲಿ 'ಮುಚ್ಚಿದೆ' ಫಲಕ ತೋರಿದ; ಆದರೆ ನನ್ನನ್ನು ಗುರುತಿಸಿ ಒಳಗೆ ಕರೆದು ಇಂಗ್ಲಿಷ್‌ನಲ್ಲಿ ಜೋಗದ ಗೋಳು ತೋಡಿಕೊಳ್ಳಹತ್ತಿದ. ಅಲ್ಲಿಗೆ ಒಂದು ದಿನಕ್ಕೆಂದು ಬಂದ ವಿದೇಶೀಯರು ಪ್ರಕೃತಿ ಸೌಂದರ್ಯಕ್ಕೆ ಮರುಳಾಗಿ ಮೂರು ದಿನ ತಂಗುತ್ತಾರೆ; ಮೂರು ದಿನಕ್ಕೆಂದು ಬಂದವರು ವಾರಗಟ್ಟಲೆ ಇದ್ದುಬಿಡುತ್ತಾರೆ. ಆದರೆ ಸರ್ಕಾರದ ಇಂಜಿನಿಯರುಗಳು, ಉಸ್ತುವಾರಿಯವರು ಈ ಜಲಪಾತದ ಸ್ಥಳವನ್ನು ಸ್ಮಶಾನವನ್ನಾಗಿ ಇಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಈಜುವ ಕೊಳ ಸೋರುತ್ತಿದೆ; ಅನೇಕ ತಿಂಗಳಿಂದ ರಿಪೇರಿಯ ಮಾತಾಡುತ್ತ ಇಂಜನಿಯರುಗಳು ಓಡಾಡುತ್ತಿದ್ದಾರೆ. ಹೂಗಿಡಗಳಿರಬೇಕಾದ ಕಡೆ ಕಸ ಬಿದ್ದಿದೆ. ಕೊಳಕಾಗಿ ಕಕ್ಕಸು ಕಟ್ಟಿಸಿ ಅಲ್ಲಿಗೆ ಯಾವ ಪ್ರವಾಸಿಗರೂ ಹೋಗದಂತೆ ನೋಡಿಕೊಂಡಿದ್ದಾರೆ. ಸರ್ಕಾರದ ಜನರ ಬೇಜವಾಬ್ದಾರಿತನಕ್ಕೆ



ದಿಕ್ಕೆಟ್ಟಿರುವ ಈ ಬಡಪ್ರಾಣಿ ಇಂಗ್ಲಿಷ್‌ನಲ್ಲಿ ಮಾತಾಡುತ್ತಿದ್ದುದಕ್ಕೆ ಕಾರಣ ಹೇಳಿದ- ಅಲ್ಲಿಯ ಕೆಲಸಗಾರರು ಚಾಡಿ ಹೇಳಿದರೆ.... ಓಡಿ ಹೋಗುವವಳು ಹಾಲಿಗೆ ಹೆಪ್ಪು ಹಾಕುತ್ತಾಳೆಯೇ ಎಂಬ ಗಾದೆ ಇದೆ. ಈ ಸರ್ಕಾರದ ಜನಕ್ಕೆ ಅನ್ವಯಿಸುವ ಈ ಗಾದೆ ನನಗೆ ನೆನಪಾಯಿತು.



ಮರೆಯುವ ಮುನ್ನ

ಮಾರ್ಚ್ 6, 1988



ದ್ರಾಕ್ಷಾರಸದ ಸ್ವರ್ಗ

ಭೂಮಿಯ ಮೇಲೆ ಸ್ವರ್ಗವನ್ನು ಹೇಗೆ ಕಟ್ಟುವುದು? ಅದು ಕಷ್ಟವಿರಬಹುದು; ಅನೇಕರು ಕಲ್ಪನೆಯಲ್ಲಿ ಮಾತ್ರ ಈ ಸ್ವರ್ಗ ನಿರ್ಮಿಸುತ್ತಾರೆ. ಆದರೆ ಈ ಭೂಮಿಯ ಕೆಲವು ಭಾಗದ ಜನ ತಮ್ಮ ಅಂತರಂಗಕ್ಕಾಗಿ, ನಿತ್ಯದ ಬಹಿರಂಗ ಜೀವನಕ್ಕಾಗಿ ಇಂಥದೊಂದು ಸ್ವರ್ಗ ನಿರ್ಮಿಸಿಕೊಂಡಿರುತ್ತಾರೆ. ಹೊರಗಿನಿಂದ ನೋಡಿ ಅಚ್ಚರಿಗೊಳ್ಳುವವರಿಗಂತೂ ಇದು ಸ್ವರ್ಗ. ನೀವು ಕೃಷಿ ಬದುಕಿನ ಶ್ರೀಮಂತ ರಾಷ್ಟ್ರಗಳ ಪಟ್ಟಿ ನೋಡುತ್ತೀರಿ. ಇಂಗ್ಲೆಂಡಿನಿಂದ ಬೇಸಾಯ ಹೊರಟು ಹೋಗಿದೆ. ಅಮೆರಿಕಾದಲ್ಲಿ ಬೇಸಾಯ ಕೈಗಾರಿಕೆಯಂತೆ ಆಗಿ ಉಡುಗಿ ಹೋಗುತ್ತಿದೆ. ಜರ್ಮನಿಯಲ್ಲೂ ಅಷ್ಟೇ. ಕೆನಡಾ, ಫಿನ್ಲೆಂಡ್, ನ್ಯೂಜಿಲೆಂಡ್‌ಗಳಲ್ಲಿ ಕೃಷಿ ಕಮ್ಮಿಯಾಗಿದೆ; ಅರಣ್ಯ ಕೈಗಾರಿಕೆ ಹೆಚ್ಚಾಗಿದೆ. ಒಮ್ಮೆ ತನ್ನ ಕೃಷಿಯ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಜಪಾನ್ ಇವತ್ತು ಹೊಲಗದ್ದೆಗಳನ್ನು ಕೈಗಾರಿಕೆ, ಉದ್ಯಮಗಳಿಗೆ ಬಿಟ್ಟು ಕೊಟ್ಟಿದೆ.

ಆದರೆ ಈ ಫ್ರಾನ್ಸ್‌ನಲ್ಲಿ ಕೃಷಿ ಸ್ವಲ್ಪ ಉಡುಗಿದ್ದರೂ ತನ್ನ ಹುಮ್ಮಸ್ಸು ಕಳೆದುಕೊಂಡಿಲ್ಲ. ಫ್ರಾನ್ಸ್‌ನ ಗ್ರಾಮ ಇವತ್ತಿಗೂ ಹಚ್ಚಹಸಿರು, ಪಟ್ಟಣಕ್ಕಿಂತ ನೆಮ್ಮದಿಯ ತಾಣ. ಇಲ್ಲಿ ಜನರು ಪಟ್ಟಣಗಳಿಗೆ ಹೋಗುವ ಕನಸು ಕಾಣುವುದಿಲ್ಲ. ಯಾಕೆಂದರೆ..... ಇವರ ಗೋಧಿ, ದ್ರಾಕ್ಷಿ, ಚೆರ್ರಿಗಳು ಇವರನ್ನು ಸುಖವಾಗಿಟ್ಟಿವೆ. ಈ ಸುಖ ಮತ್ತು ಇವರ ವಾತಾವರಣ ಸ್ವರ್ಗದ ತುಣುಕನ್ನು ನೆನಪಿಗೆ ತರುತ್ತದೆ.

ಇದು ದ್ರಾಕ್ಷಿಯ ಹಬ್ಬ; ಅಂದರೆ ದ್ರಾಕ್ಷಿ ಹಣ್ಣನ್ನು ಸಮೃದ್ಧವಾಗಿ ಬೆಳೆದು ಬಿಳಿ, ಕೆಂಪು ವೈನ್ ತಯಾರಿಸಿ ಜಗತ್ತಿಗೇ ಮಾರಿ ಕೈತುಂಬ ಹಣ ಗಳಿಸಿದ ಇವರು ಹಬ್ಬ ಆಚರಿಸುತ್ತಾರೆ. ಬ್ಯಾಕಸ್ ವೈನ್‌ನ ದೇವತೆ. ಆತನನ್ನು ಕುಣಿದು, ಹಾಡಿ, ಪ್ರೇಮಿಸಿ ಆರಾಧಿಸುವ ಹಬ್ಬ. ಫ್ರಾನ್ಸ್‌ನ ಆ ಹಳ್ಳಿಯ ಹೆಸರು ಅಲೋಯ್ ಕಾರ್ಟನ್. ಜನಸಂಖ್ಯೆ ಇನ್ನೂರು. ಸುಗ್ಗಿಯ ಕಾಲ ಬಂದಿದೆ. ಉದಾರವಾಗಿರುವ, ಸಂತೋಷವಾಗಿರುವ ಕಾಲ. ಹಳ್ಳಿಗೊಬ್ಬಳು ಹಬ್ಬದ ರಾಣಿಯಾಗಿ ಚುನಾಯಿತಳಾಗಿದ್ದಾಳೆ. ಯಾರಾದರೂ ಕೆಲವೇ ಕೆಲವು ಫ್ರಾಂಕ್ ಕೊಟ್ಟು ದಿನವಿಡೀ, ರಾತ್ರಿ ಇಡೀ ವೈನ್ ಕುಡಿಯಬಹುದು. ಅಟ್ಟದ ಮೇಲೆ ವೈನ್ ಗಡಿಗೆಗಳನ್ನಿಟ್ಟು ಕುಡಿಯಲು ಕೋರಿಕೊಳ್ಳುತ್ತಾರೆ. ಕುಡಿದಾದ ಮೇಲೆ ಬ್ಯಾಕಸ್ ದೇವತೆಯ ಎದುರು ಹಾಡುತ್ತಾರೆ, ನರ್ತಿಸುತ್ತಾರೆ, ತಮ್ಮ ಹೆಮ್ಮೆಯ ಊರಲ್ಲಿ ಹೊಸ ಅನುಭವ ದೊರಕಿಸಿಕೊಳ್ಳುತ್ತಾರೆ.

"ಕುಡಿಯುವ ಅಭ್ಯಾಸವುಳ್ಳವನು ಕುಡುಕನಾಗಿರುವುದಿಲ್ಲ", "ಫ್ರಾನ್ಸ್ ಬದಲಾಗಬಹುದು, ಆದರೆ ಫ್ರೆಂಚ್ ಗ್ರಾಮ ಬದಲಾಗುವುದಿಲ್ಲ" ಎಂಬ ಮಾತು ಅವರ ತುಟಿಯ ಮೇಲಿವೆ. ಹಸಿರು ಫ್ರಾನ್ಸ್‌ನ ಸಮೃದ್ಧ ಗ್ರಾಮದ ಜನರ ಈ ಹಬ್ಬ ಸಂತೋಷದ್ದು, ಹಾಗೆಯೇ ಧಾರ್ಮಿಕವಾದದ್ದು, ಬಡತನದ ಗೋಳುಗಳಿಂದ ಮುಕ್ತವಾದದ್ದು. ಏಸುಕ್ರಿಸ್ತನ ಈ ಧರ್ಮದಲ್ಲಿ ವೈನ್ ಕುಡಿಯುವುದು ಕೂಡ ಧಾರ್ಮಿಕ; ಅದು ದೇವರ ರಕ್ತ ಸ್ವೀಕರಿಸಿದಂತೆ, ರೊಟ್ಟಿ ತಿಂದರೆ ಅದು ಆತನ ಮಾಂಸವನ್ನು ಮೆಲ್ಲುವಂತೆ.....

ಪಟ್ಟಣದ ವೈಭವ, ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಹಳ್ಳಿಯ ತೀವ್ರ ಸಂತೋಷ ಮತ್ತು ಔದಾರ್ಯ.... ಕೆಲ ನಿಮಿಷ ಫ್ರಾನ್ಸಿನ ನಗರಗಳ ಸಾರ್ತ್‌ರ್, ಹ್ಯೂಗೋ, ವಾಲ್ಟೇರ್ ಮುಂತಾದವರನ್ನು ಮರೆಯಿರಿ. ಈ ಹಳ್ಳಿ, ಇಲ್ಲಿಯ ಸಂತೋಷ ಮತ್ತು ಸಂಭ್ರಮ, ತಮ್ಮನ್ನು ತಾವು ತಮ್ಮ ದ್ರಾಕ್ಷಿ ತೋಟಕ್ಕೆ ಮತ್ತು ಕೃಷಿಯ ಕೆಲಸಕ್ಕೆ ಅರ್ಪಿಸಿಕೊಂಡ ಜನ.

ಭೂಮಿಯ ಮೇಲೆ ಸ್ವರ್ಗ ಇರುವುದು ಸಾಧ್ಯ ಎಂದು ಕೆಲವೊಮ್ಮೆ ಅನ್ನಿಸುವುದಿಲ್ಲವೆ? ಆದರೆ ಅದು ಅಲ್ಲಿಯ ಜನರ ಸ್ವರ್ಗ ಮಾತ್ರ ಆಗಬಲ್ಲದು. ನಮ್ಮ ಅಮರಲೋಕ ನಮ್ಮ ಕೊಡಗಿನ ಕಿತ್ತಲೆ ಮತ್ತು ಉತ್ತರ ಕನ್ನಡದ ಗೋಡಂಬಿ, ನಿಂಬೆ, ಕಬ್ಬು, ಬತ್ತದಿಂದ ಮೂಡಿಬರುವಂತೆ ಇದ್ದಿದ್ದರೆ! ■

ಸ್ತ್ರೀಯರ ನೈಟಿಗೂ, ಸನ್ಯಾಸಿ/ಸ್ವಾಮಿಗಳ ನಿಲುವಂಗಿಗೂ ಇರೋ ವ್ಯತ್ಯಾಸ?

ಬಿ.ಚಂದ್ರೇಗೌಡ. ಬೆಂಗಳೂರು
ಹೆಣ್ಣು ಸಂಸಾರದ ಕಣ್ಣು. ಗಂಡು?
* ನಿಯತ್ತಾಗಿದ್ದರೆ ಹೊನ್ನು.

ಓದು ಸಿದ್ದೇಗೌಡ. ಕೆಬ್ಬೇಹಳ್ಳಿ
ಸುದಕ್ಕ ಡಾಲರ್ ಸೊಸೆಯಾದರೆ, ಸಂದ್ಯಾ ಮಾಮಿ?
* ಕ್ಯಾಪಿಟೇಷನ್ ತಂದ ಸೌಭಾಗ್ಯ.

ಪೂರ್ಣಿಮಾ. ಹಗರಿಬೊಮ್ಮನಹಳ್ಳಿ
ಇಸ್ಕಾನ್ ಮಂದಿರ "ಜೇಬು ಕಳ್ಳರಿದ್ದಾರೆ ಎಚ್ಚರಿಕೆ" ಎಂಬ ಬರಹದಿಂದಲೇ ತುಂಬಿಬಿಟ್ಟಿದೆಯಲ್ಲಾ?
* ರಾಮ...ರಾಮ, ಹಾಗೆ ವಾರ್ನಿಂಗ್ ಕೊಡುತ್ತಲೇ ನಿಮ್ಮ ಜೇಬಿಗೆ ಕೈ ಹಾಕುತ್ತಾರೆಂದರೆ ಅವರೆಂತಾ ಖದೀಮರಿರಬೇಕು.

ಕಾಳಿಹುಂಡಿ ಶಿವಕುಮಾರ್. ಮೈಸೂರು
ಡಿಕೆಶಿಗೆ ಗೌಡರು ಕಲ್ಲೇಟು ಹೊಡೆದದ್ದು ಏಕೆ?
* ಮುಂದೆ ತನಗೇ ಚಪ್ಪಲಿಯೇಟು ಕೊಟ್ಟಾನೆಂಬ ಹೆದರಿಕೆ ಇರಬಹುದು.

ಸೋಮಶೇಖರ್. ಎಲೆಮುದ್ದನಹಳ್ಳಿ
ಯಾರನ್ನು ಪ್ರಾಣ ಎಂದು ಭಾವಿಸಿರುತ್ತೇವೋ ಕೊನೆಗೆ ಅವರೇ ಪ್ರಾಣ ಹಿಂಡುತ್ತಾರಲ್ಲ?
* ಪ್ರೇಮದ 'ನೋವು', 'ನಲಿವು' ಇರುವುದೇ ಅದರಲ್ಲಿ ಗೊತ್ತಾಯ್ತಾ

ಖಲಂದರ್ ಅಜೀಜ್. ಜಾವಗಲ್
ಕಟ್ಟಿಕೊಂಡವಳು ಜೊತೆಗಿರುವಾಗ ಇಟ್ಟುಕೊಂಡವಳು ಬಂದರೆ?
* ಸಮಸ್ಯೆ ನಿಮಗೆ ಕಟ್ಟಿಟ್ಟ 'ಬುತ್ತಿ'

ಕೆ. ಶ್ರೀನಿವಾಸ್. ಮಂಡ್ಯ
ದೇವೇಗೌಡರ ಪುತ್ರ ಪ್ರೇಮ, ಪ್ರೇಮಪತ್ರ ಎರಡೂ ವಿವಾದಾಸ್ಪದವೇಕೆ?
* ಇವೆರಡರ ನಡುವೆ ರಾಜ್ಯದ ಜಾತ್ಯತೀತರಿಗೆ ನೀಡಿದ ವಿಚ್ಛೇದನೆಯಿಂದಾಗಿ ಅಷ್ಟೇ!

ಆ.ರಾ.ಮಂಜುನಾಥ. ಗೆದರೆ
ಮಾನಕ್ಕೂ, ಬಹುಮಾನಕ್ಕೂ ಇರುವ ವ್ಯತ್ಯಾಸ?
* ಬಹುವಚನ ಇಲ್ಲದಿರುವುದೇ ಅಸಲಿ ಮಾನ.

ಎಂ.ಎಫ್. ತುಮ್ಮಿನಕಟ್ಟಿ, ರಾಣೇಬೆನ್ನೂರು
ರಾಮಚಂದ್ರಾಪುರದ ರಾಘವೇಶ್ವರ ಸ್ವಾಮಿ ಟನ್‌ಗಟ್ಟಲೇ ತುಪ್ಪ ಬೆಂಕಿಗೆ ಸುರಿದು ಆ ಮೂಲಕ ಲೋಕಕಲ್ಯಾಣ ಮಾಡುವುದಾಗಿ ಹೇಳಿದ್ದಾರಲ್ಲಾ?
* ಅಮಾಯಕರ ರಕ್ತ ಹರಿಸಿ ರಾಮದೇವಸ್ಥಾನ ನಿರ್ಮಿಸಲು ಹೊರಟಿರುವವರ ಸಂತತಿಯವರಲ್ಲವೇ, ಅವರಿಂದ ಇನ್ನೇನು ಸಾಧ್ಯ ಪಾಪ.

ಮಂಚಾಲಿ ಗುರುರಾಜಚಾರು. ಬಳ್ಳಾರಿ
ನಮ್ಮ ದೇಶದಲ್ಲಿ ಸುಳ್ಳು ಹೇಳುವವರಿಗೆ ಬಹುಮಾನ ನೀಡಿದರೆ ಯಾರಿಗೆ ಮೊದಲು?
* ಸಧ್ಯಕ್ಕೆ ದೇವೇಗೌಡರಿಗೆ ಸರಿಸಾಟಿ ಇಲ್ಲ ಅಂತ YSV ದತ್ತನೇ ಒಪ್ಪಿಕೊಂಡಾಗಿದೆಯಲ್ಲ...



ಕಣ್ಣಾಮುಚ್ಚಾಲೆ

ಬಸವರಾಜ್ ಬೆಸ್ತರ್. ಹರಪನಹಳ್ಳಿ
ಅಭಿಮಾನಿ ದೇವರುಗಳಿಗೆ ಸಾಂತ್ವನ ಹೇಳುವವರಾರು?
* ಈ ಸಂಚಿಕೆಯಲ್ಲಿ ಶಿವರಾಜ್ ಕುಮಾರ್‌ರವರ heart beat ಓದಿ.

ಎಚ್.ಸಿ. ಮಹದೇವ್. ಬಳ್ಳಾರಿ
ಶೋಭಾ ಕರಂದ್ಲಾಜೆ ದಂತವನ್ನು ಯಾವುದಾದರೂ ಟೂತ್‌ಪೇಸ್ಟ್ ಕಂಪನಿಯವರು ಜಾಹೀರಾತಿಗೆ ಬಳಸಬಾರದೇಕೆ?
* 'ಶೋಟೀತ್' ಎಂಬ ಬ್ರಾಂಡ್ ಹೆಸರಿನ ಬಗ್ಗೆ ಸದಾನಂದಗೌಡರ ಅಭ್ಯಂತರವಿದೆಯಂತೆ.

ಪಿ.ಎನ್. ಶ್ರೀವತ್ಸ. ಬೆಂಗಳೂರು
ಇತ್ತೀಚೆಗೆ ಬಾಗಲಕೋಟೆಯಲ್ಲಿ ಐಶ್ವರ್ಯರೈಳಿಗೆ ಕೈ ಬೆರಳಿನ ಬದಲು ಬೇರೆ ಕಡೆ ಎಲ್ಲಾದರೂ ಅಪಘಾತ ಆಗಿದಿದ್ದರೆ...?
* ಅದಕ್ಕೆ ಅಭಿಷೇಕ್ ಕಾರಣ, ಶ್ರೀವತ್ಸ ಅಲ್ಲ ಅಂತ ಬಾಗಲಕೋಟೆಗೆ ಗೊತ್ತಾಗಿದೆ, ಯೋಚನೆ ಮಾಡಬೇಡಿ.

ಜಿ.ಎನ್. ಪ್ರಸನ್ನಕುಮಾರ್. ತುಮಕೂರು
ಎಷ್ಟೋ ಸೂಪರ್‌ಹಿಟ್ ಸಿನಿಮಾಗಳಲ್ಲಿ ನಾಯಕಿಯರೆಲ್ಲಾ ದಡ್ಡರನ್ನೇ ಇಷ್ಟಪಟ್ಟಿದ್ದಾರಲ್ಲ?
* ಅವುಗಳನ್ನು ಸೂಪರ್ ಹಿಟ್ ಮಾಡಿದ ಜನ ಇನ್ನೆಷ್ಟು ದಡ್ಡರಿರಬೇಕು.

ಎಂ.ಎನ್. ಕುಮಾರಸ್ವಾಮಿ. ಮಂಡ್ಯ
ಸಂಸತ್ತಿನಲ್ಲಿ ಸಂಪತ್ತಿನ ವ್ಯವಹಾರ ಯಾಕೆ?
* ಸಂಪನ್ನರ ಕೊರತೆಯಿಂದ.

ಬಹುಮಾನಿತ ಪ್ರಶ್ನೆಗಳು

ಆರ್ಶ್ರ, ಅರೂದಿ
ಸ್ತ್ರೀಯರ ನೈಟಿಗೂ, ಸನ್ಯಾಸಿ/ ಸ್ವಾಮಿಗಳ ನಿಲುವಂಗಿಗೂ ಇರೋ ವ್ಯತ್ಯಾಸ?
* ನೈಟಿ ನೈಟಿನ ಆಕ್ಟಿವಿಟಿಯ ಬಗ್ಗೆ ಮುಚ್ಚುಮರೆ ಮಾಡುವುದಿಲ್ಲ.

ಎಚ್.ಎಂ. ಹೇಮಂತ್. ಬೆಂಗಳೂರು
ಗೌಡ-ಕುಮಾರಣ್ಣ ಕೃಷ್ಣಾರ್ಜುನರಾದರೆ, ಯಡ್ಡಿ?
* ರಾಮಾಯಣದಲ್ಲಿ ಬಲಿಯಾದ ವಾಲಿ ಅಂತ ಅನಂತು ಗ್ಯಾಂಗ್ ಟೀಕೆ ಮುರಿಯುತ್ತಿದೆಯಂತೆ.

ಧೀ ತುಂಟಿ!

ಆತ ಅವಳನ್ನು ಬಹಳವಾಗಿ ಪ್ರೀತಿಸುತ್ತಿದ್ದ. ಒಂದು ದಿನ ಮನಸ್ಸು ಮಾಡಿ ತನ್ನ ಸೈಕಲ್ ಮೇಲೆ ಆಕೆಯನ್ನು ಕೂರಿಸಿಕೊಂಡು ಹೋಗುತ್ತಾ ಬೆನ್ನಿಗೊಂದು ಮುತ್ತು ಕೊಟ್ಟ. ಆಕೆ ಸೈಕಲ್‌ನಿಂದ ಹಾರಿ ಓಡಿ ಹೋದಳು. ಆತ, "ನಿನ್ನ ಆತ್ಮೀಯ ಮಿತ್ರರು ನಿನ್ನೆರಡು ಕಾಲುಗಳು ಮಾತ್ರವೆ?" ಎಂದು ಕಾಗದ ಬರೆದ.

ಎರಡು ಮೂರು ದಿನಗಳ ನಂತರ ಅವಳನ್ನು ಪುಸಲಾಯಿಸಿ ತನ್ನ ಗೆಳೆಯನ ಬೈಕ್‌ನಲ್ಲಿ ಆಕೆಯನ್ನು ಕೂರಿಸಿಕೊಂಡು ಹೋಗುತ್ತಾ ಕಿವಿಗೊಂದು ಮುತ್ತು ಕೊಟ್ಟ. ಆಕೆ ಬೈಕ್ ನಿಲ್ಲಿಸಿ ಓಡಿ ಹೋದಳು. ಆತ "ನಿನ್ನ ಮಿತ್ರರಾದ ಕಾಲುಗಳ ಬಗ್ಗೆ ಇನ್ನೂ ನಂಬಿಕೆ ಇಟ್ಟಿದ್ದೀಯಾ?" ಎಂದು ಪತ್ರ ಬರೆದ.

ಮತ್ತೊಂದು ದಿನ ಹೇಗೋ ಅವಳ ಮನಸ್ಸು ಗೆದ್ದು ಗೆಳೆಯನ ಕಾರಿನಲ್ಲಿ ಆಕೆಯನ್ನು ಕೂರಿಸಿಕೊಂಡು ಹೋಗಿ ಪ್ರೇಮಿಸತೊಡಗಿದ. ಆಕೆ, ತನ್ನ ಗೆಳತಿಗೆ, "ಆತ್ಮೀಯ ಮಿತ್ರರು ಒಬ್ಬರನೊಬ್ಬರು ಅಗಲುವಿಕೆಯಲ್ಲೂ ಒಂಥರಾ ಖುಷಿ, ಆನಂದ ಇದೆ ಕಣೇ" ಎಂದು ಕಾಗದ ಬರೆದಳು.



ಕಲಾಸಿಪಾಳ್ಯದ ದುರಂತ

ಫುಟ್‌ಪಾತ್ ಗಣೇಶನಿಗೆ ಸಾರ್ವಜನಿಕ ಶೌಚಾಲಯವೇ ನೈವೇದ್ಯ?


ಅದೇನು ಮಹಿಮೆಯೋ, ಮಾರ್ಕೆಟ್ ಗಣೇಶನ ಹೆಸರೆತ್ತಿದರೆ ಸಾಕು ಕಲಾಸಿಪಾಳ್ಯದ ಜನ ಮೂತ್ರ ಕಟ್ಟೆಗಳನ್ನು ಹುಡುಕುವಂತಾಗಿದೆ!

ಹಿಂದೆಲ್ಲಾ ಪಾರ್ಕು, ರಸ್ತೆ, ಮೋರಿಗಳ ಮೇಲೆ ಉದ್ಭವಿಸುತ್ತಿದ್ದ ಫುಟ್‌ಪಾತ್ ದೇವರುಗಳ ಪೈಕಿ ಕಲಾಸಿ ಪಾಳ್ಯದ ಮಾರ್ಕೆಟ್ ಗಣೇಶನಿಗಾಗಿ ಸಾರ್ವಜನಿಕ ಶೌಚಾಲಯವೇ ಬಲಿಯಾಗಿದೆ. ಫುಟ್‌ಪಾತ್ ದೇವರನ್ನು ಹುಟ್ಟು ಹಾಕಿ ಪಬ್ಲಿಕ್ ಟಾಯ್ಲೆಟ್ಟನ್ನೇ ಮುಕ್ಕುವ ಪುಢಾರಿಗಳು ಕಲಾಸಿಪಾಳ್ಯದಲ್ಲಿ ಅವತರಿಸಿದ್ದಾರೆ. ದುರಂತವೆಂದರೆ ಪಾಲಿಕೆಯೇ ನಿಂತು ಇಂಥ ಖದೀಮರನ್ನು ಪೊರೆಯುತ್ತಿದೆ. ಬೆಂಗಳೂರಿಗೆ ಕೆ.ಆರ್. ಮಾರುಕಟ್ಟೆ ಹೇಗೋ ಹಾಗೇ ಮಾರ್ಕೆಟ್ ಆಸುಪಾಸಿನ ಸಹಸ್ರಾರು ಜನಕ್ಕೆ ಅನಿವಾರ್ಯವಾಗಿದ್ದ ಸಾರ್ವಜನಿಕ ಮೂತ್ರ-ಕಕ್ಕಸ್ಸುಗಳನ್ನು ಕಬಳಿಸಿ ತಲೆ ಎತ್ತಿದ ಮಾರ್ಕೆಟ್ ಗಣೇಶನಿಗೆ ಮುಖ್ಯಮಂತ್ರಿ ಕುಮಾರಸ್ವಾಮಿಯೇ ಪೂಜೆ ಸಲ್ಲಿಸಿದ್ದು ಬೆಂಗಳೂರು ಮಹಾನಗರ ಪಾಲಿಕೆಯೇ ನಿಂತು ಕುಮ್ಮಕ್ಕು ಕೊಟ್ಟಿದ್ದು ವಿಚಿತ್ರವಾದರೂ ಸತ್ಯ.


ಇನ್ನೂ ತಮಾಷೆಯೆಂದರೆ ಯಾವ ಮುಸ್ಲಿಮರ ವಿರುದ್ಧ ಮಾರ್ಕೆಟ್ ಗಣೇಶನನ್ನು ಉದ್ಭವಿಸಲಾಯಿತೋ ಕೊನೆಗೂ ಓರ್ವ ಮುಸ್ಲಿಮ್ ನಾಯಕನೇ ನಿಂತು ದೇವಸ್ಥಾನ ಕಟ್ಟಿಸಿಕೊಡಬೇಕಾಯಿತು. ಹಾಗೇ ತನ್ನ ಜೇಬನಿಂದ ಹತ್ತು ಲಕ್ಷ ಕೊಟ್ಟು, ಸಾರ್ವಜನಿಕ ಶೌಚಾಲಯವನ್ನೂ ಕೊಟ್ಟು ಕಾಣಿಕೆ ಹುಂಡಿ ಕಳ್ಳರಿಂದ ಮಾರ್ಕೆಟ್ ಗಣೇಶನನ್ನು ಮುಕ್ತಗೊಳಿಸಿದ್ದು ಚಾಮರಾಜಪೇಟೆಯ ಶಾಸಕ ಜಮೀರ್ ಅಹ್ಮದ್!

ಅಲ್ಲಿಗೆ ಪುಟ್ಟದೊಂದು ಫುಟ್‌ಪಾತ್ ದೇವಸ್ಥಾನಕ್ಕೆ ಕಳೆದ ಇಪ್ಪತ್ತೆರಡು ವರ್ಷಗಳಿಂದ ಹಿಡಿದಿದ್ದ ಗ್ರಹಣವನ್ನು ಮುಸ್ಲಿಮನೊಬ್ಬ ನಿಂತು ಬಿಡಿಸಿದಂತಾಯ್ತು!

ಬಹುಶಃ ಯುವಕರಿಗೆ ಕಲಾಸಿಪಾಳ್ಯದ ಕೆ.ಆರ್. ಮಾರುಕಟ್ಟೆಯ ಫುಟ್‌ಪಾತ್ ಗಣೇಶನ ಮಹಿಮೆ ಗೊತ್ತಿರಲಿಕ್ಕಿಲ್ಲ. ಆಗಿನ್ನೂ ಗುಂಡೂರಾವ್ ಮುಖ್ಯಮಂತ್ರಿಯಾಗಿದ್ದರು. ಅದು 1982 ರ ಕಾಲ. ಕೆ.ಆರ್. ಮಾರುಕಟ್ಟೆ ಎದುರಿಗಿದ್ದ ಪುರಾತನ ಶೌಚಾಲಯಕ್ಕೆ ಅನತಿ ದೂರದಲ್ಲೇ ಏಕಾಏಕಿ ಮಸೀದಿಯೊಂದು ಉದ್ಭವಿಸಿತ್ತು. ಮಾರ್ಕೆಟ್ಟಿನ ಕೆಲ ಮುಸ್ಲಿಂ ವ್ಯಾಪಾರಿಗಳು ಸೇರಿಕೊಂಡು ಮುಸ್ಲಿಂ ಮರ್ಚೆಂಟ್ಸ್ ಅಸೋಸಿಯೇಷನ್ ಹುಟ್ಟುಹಾಕಿ ಎಫ್.ಎಂ. ಖಾನ್‌ರನ್ನು ಮುಂದಿಟ್ಟುಕೊಂಡು ಎದುರಿನ ಫುಟ್‌ಪಾತಿನಲ್ಲೊಂದು ಪುಟ್ಟ ಮಸೀದಿ ಎಬ್ಬಿಸಿದ್ದರು. ಆಗ ತಲೆ ಎತ್ತಿದ್ದೇ ಉದ್ಭವ ಗಣಪತಿ!


ಶೌಚಾಲಯವನ್ನು ಕೆಡವಿರುವುದು

ಮಾರ್ಕೆಟ್ಟಿನಲ್ಲಿ ಬಾಳೆಹಣ್ಣು ಮಾರುತ್ತಿದ್ದ ಲಚ್ಚ ಕೊತ್ತಂಬರಿ ಸೊಪ್ಪು ಮಾರಿಕೊಂಡಿದ್ದ ಮನೋಹರ್ ಮತ್ತು ಸಾರ್ವಜನಿಕ ಶೌಚಾಲಯವನ್ನು ತೊಳೆದುಕೊಂಡಿದ್ದ ಗೋವಿಂದಪ್ಪ ಸೇರಿಕೊಂಡು ಎಲ್ಲಿಂದಲೋ ಗಣೇಶನ ಮೂರ್ತಿ ತಂದು ಮಸೀದಿಗೂ ಟಾಯ್ಲೆಟ್ಟಿಗೂ ಮಧ್ಯದ ಫುಟ್ ಪಾತಿನಲ್ಲಿ ಹೂತಿಬಿಟ್ಟರು. ಅದಾಗಿ ತಿಂಗಳಿಗೇ ಗಣೇಶನ ಉದ್ಭವವಾಗಿತ್ತು. ಕೋಮು ಘರ್ಷಣೆ ನಡೆದು ಹಿಂದೂ ಮುಸ್ಲಿಮರಿಬ್ಬರೂ ಜೈಲು ಕಂಡರು. ಒಂದೇ ಜಾಗದಲ್ಲಿ ವ್ಯಾಪಾರ ಮಾಡಿಕೊಂಡಿರುವವರು ಎಷ್ಟು ದಿನ ತಾನೇ ಬಡಿದಾಡುತ್ತಾರೆ?



ಜಮೀರ್, ದೇವರಾಜ್


ಕ್ರಮೇಣ ಫುಟ್‌ಪಾತಿನಲ್ಲೇ ಮಸೀದಿ ಮತ್ತು ಉದ್ಭವ ಮಹಾಗಣಪತಿ ಒಟ್ಟೊಟ್ಟಿಗೇ ಚಾಲ್ತಿಗೆ ಬಂದವು. 1987 ರ ಹೊತ್ತಿಗೆ ತಿಗಳರ ಪೇಟೆಯ ಕಾಂಗ್ರೆಸ್ ಪುಡಾರಿ ಎಂ. ರಾಮಕೃಷ್ಣ ಕಾಂಗ್ರೆಸ್ ಸೇವಾದಳದ ನಾಯಕ ಆಂಜನರೆಡ್ಡಿ ಮತ್ತು ಮನೋಹರ್ ಸೇರಿಕೊಂಡು ಶ್ರೀ ಉದ್ಭವ ಮೂರ್ತಿ ದೇವಾಲಯ ಟ್ರಸ್ಟ್ ಹುಟ್ಟಿ ಹಾಕಿ ವಸೂಲಿಗಿಳಿದರು. ಎದುರಿಗೇ ಇದ್ದ ಮಸೀದಿಯನ್ನು ತೋರಿಸಿ 'ನಾವೇನು ಕಮ್ಮಿ?' ಎಂದು ಕಂಡಕಂಡ ಅಂಗಡಿಗಳಿಂದ ಐದೋ ಹತ್ತೋ ಸಾವಿರದಂತೆ ಕಿತ್ತರು. ಪ್ರತಿ ವರ್ಷ ಗಣೇಶೋತ್ಸವಕ್ಕೆಂದು ಗಾಡ್ರೇಜ್ ಬೀರು, ಚಿನ್ನದ ಒಡವೆ, ಬೈಕು ಇತ್ಯಾದಿ ಲಾಟರಿ ಸ್ಕೀಮ್ ಬೇರೆ ಶುರು ಹಚ್ಚಿಕೊಂಡರು. ಕಾಣಿಕೆ ಹುಂಡಿಗೇ ಕನ್ನ ಹಾಕತೊಡಗಿದರು.

ದುಡ್ಡು ಯಾಪಾಟಿ ಜಮೆಯಾಯಿತೆಂದರೆ, ಹೊಡೆದ ಕೊಳ್ಳೆಯಲ್ಲೇ ಪುಡಾರಿ ರಾಮಕೃಷ್ಣ ಕಾರ್ಪೋರೇಷನ್ ಚುನಾವಣೆಗೆ ಕಾಂಗ್ರೆಸ್ ಟಿಕೆಟ್ಟು ಗಿಟ್ಟಿಸಿ ಗೆದ್ದುಬಿಟ್ಟ. ಫುಟ್‌ಪಾತಿನಲ್ಲಿ ಸೊಪ್ಪು ಮಾರಿಕೊಂಡಿದ್ದ ಮನೋಹರ್ ಪಲ್ಲವಿ ಟಾಕೀಸ್ ಪಕ್ಕ ಮೂರಂತಸ್ತಿನ ಬಂಗಲೆ ಕಟ್ಟಿಸಿಕೊಂಡ. ಇನ್ನು ಹಳೇಕಳ್ಳ ಆಂಜನರೆಡ್ಡಿ ತಾನೇ ಏನು ಕಮ್ಮಿ? ಸೇವಾ ದಳಕ್ಕೆ ಗುಡ್‌ಬೈ ಹೇಳಿದ್ದೇ ಹೊಚ್ಚ ಹೊಸದೊಂದು ಕಾರ್ ಖರೀದಿಸಿ ಫುಲ್‌ಟೈಂ ವಸೂಲಿಗಿಳಿದುಬಿಟ್ಟ. ತಮಾಷೆಯೆಂದರೆ 1984 ರಲ್ಲಿ ಶಂಕುಸ್ಥಾಪನೆಗೊಂಡಿದ್ದ ಫುಟ್‌ಪಾತ್ ದೇವಾಲಯ 2004 ನೇ ಇಸವಿ ಬಂದರೂ ಪೂರ್ತಿಯಾಗಲೇ ಇಲ್ಲ. ದೇವಸ್ಥಾನಕ್ಕೆಂದು ದುಡ್ಡು ಕೊಟ್ಟೂ ಕೊಟ್ಟು ಸುಸ್ತಾದ ಮಾರ್ಕೆಟ್ ವ್ಯಾಪಾರಿಗಳು ಬರುಬರುತ್ತ ಕಾಸು ಕೊಡುವುದನ್ನೇ ನಿಲ್ಲಿಸಿಬಿಟ್ಟರು. ಧರ್ಮರಾಯಸ್ವಾಮಿ ವಾರ್ಡಿನಿಂದ ಗೆಲ್ಲುತ್ತಿದ್ದ ರಾಮಕೃಷ್ಣನನ್ನೂ ಸೋಲಿಸಿ ಬಿಟ್ಟರು.

ಯಾವತ್ತು ಫುಟ್‌ಪಾತ್ ಗಣೇಶನ ಹೆಸರಲ್ಲಿ ದುಡ್ಡು ಹುಟ್ಟೋಲ್ಲ ಎಂಬುದು ಖಾತರಿಯಾಯ್ತೋ ಹುಂಡಿಕಳ್ಳರ ಗ್ಯಾಂಗು ರಾಜಕಾರಣಿಗಳಿಂದ ಚಂದಾ ಎತ್ತುವ ದಂಧೆಗಿಳಿಯಿತು. ಅದಕ್ಕೆ ಐಡಿಯಾ ಕೊಟ್ಟಿದ್ದು ಬಿ.ಎಂ. ರಾಮು ಎಂಬ ಮಹೊಬ್ಬ ಕಾಂಗ್ರೆಸ್ ಪುಡಾರಿ. ಸಾಲದ್ದಕ್ಕೆ ಮಾರ್ಕೆಟ್ ಫುಟ್‌ಪಾತ್ ಆಕ್ರಮಿಸಿ ಬೀಡಾ ಅಂಗಡಿಯಿಟ್ಟಿದ್ದ ಬಾಬು, ಬ್ರೋಕರ್ ಸಂಜೀವ ಮುಂತಾದ ರೋಲ್‌ಕಾಲ್ ಗಿರಾಕಿಗಳು ದೇವಸ್ಥಾನದ ಉದ್ಧಾರಕ್ಕೆ ನಿಂತರು. ಪ್ರತಿ ಸಂಜೆಯಾದರೆ ಹೊಡೆದ ಕೊಳ್ಳೆಯಲ್ಲಿ ಮಾರ್ಕೆಟ್ಟಿನ ಕಳಿಂಗ ಬಾರಲ್ಲಿ ಕೂತು ಎಣ್ಣೆ ಹೊಡೆಯುವುದೇ ಹುಂಡಿಕಳ್ಳರ ಕಾಯಕವಾಯಿತು.

ಮಾರ್ಕೆಟ್ ದೇವಿ ಚಾಮರಾಜಪೇಟೆಗೆ ಶಾಸಕನಾಗಿದ್ದಷ್ಟೂ ದಿನ ವಸೂಲಿ ಚೆನ್ನಾಗೇ ಇತ್ತು. ಜಮೀರ್ ಅಹ್ಮದ್ ಶಾಸಕನಾಗಿ ಗೆದ್ದದ್ದೇ ತಡ ವಸೂಲಿ ಪಡೆಯುತ್ತಿದ್ದ ಮಾಜಿ ಕೌನ್ಸಿಲರ್ ರಾಮಕೃಷ್ಣಪ್ಪ, ಬ್ರೋಕರ್ ಸಂಜೀವ ಮತ್ತು ಬೀಡಿ ಅಂಗಡಿಬಾಬು ಜಾತ್ಯತೀತ ದಳಕ್ಕೆ ಜಂಪಾದರು. ದೇವಿ ಇರುವ ತನಕ ದೇವಸ್ಥಾನ ಉದ್ಧಾರವಾಗಲಿಲ್ಲ. ಓರ್ವ ಮುಸ್ಲಿಂ ಆಗಿ ತಾನೇ ನಿಂತು ದೇವಸ್ಥಾನ ಕಟ್ಟಿಸಿಕೊಟ್ಟರೆ ಹಿಂದೂಗಳು ತನಗೊಲಿಯುತ್ತಾರೆಂದೇ ಲೆಕ್ಕ ಹಾಕಿದ ಶಾಸಕ ಜಮೀರ್ ಉದ್ಭವ ಗಣಪತಿಗೆಂದು ಹತ್ತು ಲಕ್ಷ ಕೊಟ್ಟರು. ಫುಟ್‌ಪಾತ್ ಗಣಪತಿಗೆ ಇಪ್ಪತ್ತೆರಡು ವರ್ಷಗಳ ನಂತರ ಮುಕ್ತಿ ಸಿಕ್ಕಿತ್ತು. ತನ್ನ ಧಣಿ ಮುಖ್ಯಮಂತ್ರಿ ಕುಮಾರಸ್ವಾಮಿಯನ್ನೇ ಕರೆಸಿ ದೇವಸ್ಥಾನವನ್ನು ಉದ್ಘಾಟಿಸುವುದು ಎಮ್ಮೆಲ್ಲೇ ಜಮೀರ್ ಲೆಕ್ಕಾಚಾರ. ಅದಕ್ಕೆಂದು ಏಪ್ರಿಲ್ ಮೂವತ್ತನೇ ತಾರೀಖಿಗೆ ಮುಹೂರ್ತವಿಟ್ಟರು. ಆದರೆ ಹುಂಡಿ ಕಳ್ಳರ ಲೆಕ್ಕಾಚಾರವೇ ಬೇರೆಯಾಗಿತ್ತು. ಹೇಗೂ ಎಮ್ಮೆಲ್ಲೇ ಜಮೀರ್ ಸಾಹೇಬರೇ ಬೆನ್ನಿಗಿದ್ದಾರೆಂದ ಮೇಲೆ ಜನ ಯಾವ ಲೆಕ್ಕ? ಎದುರಿಗೇ ಇರುವ ಪುರಾತನ


ರಾಮಕೃಷ್ಣಪ್ಪನ ಹುಂಡಿ ಕಳ್ಳರ ಗ್ಯಾಂಗ್


ಉದ್ಭವ ಗಣಪತಿ ದೇವಸ್ಥಾನ

ರಾ. ಸೋಮನಾಥ್

ಶೌಚಾಲಯವನ್ನು ಕೆಡವಿ ಬಿಟ್ಟರೆ ದೇವಸ್ಥಾನದ ಎದುರು ವಿಶಾಲ ಜಾಗ ಸಿಕ್ಕಂತಾಗುತ್ತದೆ. ಮುಂದೊಮ್ಮೆ ಅದನ್ನೇ ಬಾಡಿಗೆಗೆ ಬಿಡಬಹುದು. ಅಂಗಡಿಯನ್ನೂ ಕಟ್ಟಿಸಬಹುದು. ಖಮಾಯಿ ಸಲೀಸು ಎಂದು ಲೆಕ್ಕ ಹಾಕಿದ ಹುಂಡಿಕಳ್ಳರು ಪಾಲಿಕೆಯ ಭ್ರಷ್ಟ ಇಂಜಿನಿಯರ್ ಬಿ.ಟಿ. ರಮೇಶನನ್ನು ಬುಟ್ಟಿಗೆ ಹಾಕಿಕೊಂಡಿದ್ದಾರೆ..

ಎಂಥಾ ವಿಪರ್ಯಾಸವೆಂದರೆ ಕೆ.ಆರ್. ಮಾರುಕಟ್ಟೆ ಎದುರಿಗಿದ್ದ ಪುರಾತನ ಶೌಚಾಲಯದಲ್ಲಿ ಏಳು ಮಹಿಳೆಯರ ಟಾಯ್ಲೆಟ್ಟುಗಳಿದ್ದವು. ಅಷ್ಟೇ ಸಂಖ್ಯೆಯಲ್ಲಿ ಪುರುಷರ ಮೂತ್ರಿಗಳಿದ್ದವು. ಪಕ್ಕದಲ್ಲೇ ಮಾರ್ಕೆಟ್ ಬಸ್‌ಸ್ಟ್ಯಾಂಡ್. ಎದುರಿಗೆ ವಿಕ್ಟೋರಿಯಾ ಆಸ್ಪತ್ರೆ. ಕೆ.ಆರ್. ಮಾರುಕಟ್ಟೆ, ತರಕಾರಿ ಮಂಡಿ, ಮಟನ್ ಮಾರ್ಕೆಟ್, ಸಪೋಟಾ ಮಂಡಿ, ಬಾಳೇಕಾಯಿ ಮಂಡಿ, ಕಬ್ಬಿನ ಮಂಡಿ, ಸೊಪ್ಪಿನ ಮಂಡಿ. ಹೀಗೆ ಪ್ರತಿನಿತ್ಯ ಸಾವಿರಾರು ಜನಕ್ಕೆಂದು ಇದ್ದದ್ದು ಇದೊಂದೇ ಶೌಚಾಲಯ. ಬಹುಶಃ ಜನಕ್ಕೇನಾದರೂ ಇದನ್ನು ನೆಲಸಮಗೊಳಿಸುತ್ತಾರೆಂದು ಮೊದಲೇ ಗೊತ್ತಿದ್ದರೆ ಪ್ರತಿಭಟಿಸುತ್ತಿದ್ದರು. ಸಣ್ಣದೊಂದು ಸುಳಿವು ಕೂಡ ಇಲ್ಲದೇ ಏಪ್ರಿಲ್ ಇಪ್ಪತ್ತೇಳರ ರಾತ್ರಿ ನೂರಕ್ಕೂ ಹೆಚ್ಚಿದ್ದ ಪೋಲೀಸರ ಜೊತೆ ಬಂದ ಪಾಲಿಕೆ ಇಂಜಿನಿಯರ್ ಬಿ.ಟಿ. ರಮೇಶ್ ನೋಡು ನೋಡುತ್ತಲೇ ಶೌಚಾಲಯವನ್ನು ಧ್ವಂಸ ಗೊಳಿಸಿದ್ದಾನೆ. ಮರುದಿನದ ಹೊತ್ತಿಗೆ ಮಣ್ಣು ತುಂಬಿಸಿ ಹಿಂದೆ ಶೌಚಾಲಯವಿದ್ದದ್ದನ್ನೇ ನಾಪತ್ತೆ ಮಾಡಿಬಿಟ್ಟಿದ್ದಾರೆ.

ಸದ್ಯ ಶೌಚಾಲಯವಿದ್ದ ಫುಟ್‌ಪಾತ್ ಜಾಗದಲ್ಲಿ ಫುಟ್‌ಪಾತ್ ಗಣೇಶನಿಗೆಂದು ಯಜ್ಞ ಕುಂಡಗಳಿವೆ. ಏಪ್ರಿಲ್ ಮೂವತ್ತರ ಬೆಳಗ್ಗೆ ಮುಖ್ಯಮಂತ್ರಿ ಕುಮಾರಸ್ವಾಮಿ ಮತ್ತು ಎಮ್ಮೆಲ್ಲೆ ಜಮೀರ್ ಒಟ್ಟೊಟ್ಟಿಗೇ ಬಂದು ದೇವಾಲಯ ಉದ್ಘಾಟಿಸಿದ್ದಾರೆ. ದುರಂತವೆಂದರೆ ಇಡೀ ಮಾರ್ಕೆಟ್ ಸುತ್ತಮುತ್ತ ಒಂದೇ ಒಂದು ಶೌಚಾಲಯವಿಲ್ಲ. ಮಾರುಕಟ್ಟೆಗೆ ಬಂದ ಹೆಂಗಸರು, ವ್ಯಾಪಾರಸ್ಥರು ಗಣೇಶನ ಹೆಸರೆತ್ತಿದರೆ ಸಾಕು ಮೂತ್ರ ಹುಡುಕುತ್ತಿದ್ದಾರೆ. ಮೊದಲು ಮಸೀದಿಗಾಗಿ ಫುಟ್‌ಪಾತ್ ಬಲಿಯಾಯಿತು. ಈಗ ಅಳಿದುಳಿದ ಫುಟ್‌ಪಾತು ಮತ್ತು ಪಬ್ಲಿಕ್ ಟಾಯ್ಲೆಟ್ಟನ್ನು ದೇವಾಲಯ ನುಂಗಿ ಹಾಕಿದೆ. ಇದಕ್ಕೆ ಪಾಲಿಕೆಯ ಖದೀಮರೇ ನಿಂತು ಕುಮ್ಮಕ್ಕು ಕೊಟ್ಟಿದ್ದಾರೆಂದರೆ ಬೆಂಗಳೂರಿಗೆ ಭವಿಷ್ಯವುಂಟೆ?


ಹೊಲೆಮಾದಿಗರೆಂದರೆ ಪಾಲಿಕೆಗೂ ಮೈಲಿಗೆ?

ದೇವರ ಹೆಸರಲ್ಲಿ ಫುಟ್‌ಪಾತ್ ನುಂಗಿದ್ದು, ಕಂಡಕಂಡಲ್ಲಿ ವಸೂಲಿ ಮಾಡಿದ್ದು, ಕೊನೆಗೆ ಸಾರ್ವಜನಿಕ ಶೌಚಾಲಯವನ್ನೇ ಕಬಳಿಸಿದ್ದು ಸಾಲದೆಂಬಂತೆ ಹುಂಡಿಕಳ್ಳರು ಮತ್ತೊಂದು ಅನಾಚಾರಕ್ಕೆ ಕೈಯಿಕ್ಕಿದ್ದಾರೆ. ಅದು ಗೋವಿಂದಪ್ಪ ಎಂಬ ದಲಿತನ ಮೇಲೆಸಗಿದ ದೌರ್ಜನ್ಯ.

ಈ ಗೋವಿಂದಪ್ಪ ಕಳೆದ ಮೂವತ್ತೈದು ವರ್ಷಗಳಿಂದ ಸಾರ್ವಜನಿಕ ಶೌಚಾಲಯವನ್ನು ನೋಡಿಕೊಂಡಿದ್ದ. ಆತನ ಪತ್ನಿ ರಾಣಿಯಮ್ಮ ಹೆಂಗಸರ ಟಾಯ್ಲೆಟ್ ತೊಳೆದುಕೊಂಡಿದ್ದಳು. ಶೌಚಾಲಯಕ್ಕೆ ಹೋಗಿ ಬಂದವರು ನಾಲ್ಕಾಣೆಯೋ ಎಂಟಾಣೆಯೋ ಕೊಟ್ಟರಷ್ಟೇ ಈ ವೃದ್ಧ ದಂಪತಿಗಳ ಬದುಕು ಸಾಗುತ್ತಿತ್ತು. ಸಾಲದ್ದಕ್ಕೆ ಹನ್ನೆರಡು ಮಂದಿ ಮಕ್ಕಳು. ಅವರಲ್ಲಿ ನಾಲ್ವರು ಹೆಣ್ಣುಮಕ್ಕಳು. ಕಳೆದ ಮೂವತ್ತೈದು ವರ್ಷಗಳಿಂದ ಶೌಚಾಲಯಕ್ಕೆ ಹೊಂದಿಕೊಂಡಿದ್ದ ನೀರಿನ ಟ್ಯಾಂಕನ್ನೂ ನಿಭಾಯಿಸುತ್ತಾ ಅದರ ಕೆಳಗಿದ್ದ ಪುಟ್ಟ ಕೋಣೆಯಲ್ಲಿ ವಾಸವಾಗಿದ್ದ ಗೋವಿಂದಪ್ಪನಿಗೆ ಸದ್ಯ ಫುಟ್‌ಪಾತೇ ಮನೆ.


ಬೀದಿಗೆ ಬಿದ್ದ ದಲಿತ ಗೋವಿಂದಪ್ಪನ ಕುಟುಂಬ

ಏಪ್ರಿಲ್ 28ರ ಬೆಳಿಗ್ಗೆ ಪಾಲಿಕೆ ಇಂಜಿನಿಯರ್ ಬಿ.ಟಿ. ರಮೇಶ್ ಮತ್ತು ದೇವಸ್ಥಾನದ ಟ್ರಸ್ಟಿ ರಾಮಕೃಷ್ಣ, ಬ್ರೋಕರ್ ಕೋದಂಡ, ಬೀಡಿ ಅಂಗಡಿ ಬಾಬು, ಚೀಟರ್ ಸಂಜೀವ ಮುಂತಾದವರು ಗೋವಿಂದಪ್ಪನನ್ನೂ, ಆತನ ಮಡದಿ, ಹೆಣ್ಣು ಮಕ್ಕಳನ್ನೂ ನೆರೆದ ಜನರ ಎದುರಿಗೇ ಹೊರದಬ್ಬಿದ್ದಾರೆ. ಅವರಿದ್ದ ಕೋಣೆಗೆ ಬುಲ್ಡೋಜರ್ ನುಗ್ಗಿಸಿದ್ದಾರೆ. ಹಿಂದಿದ್ದ ಶೌಚಾಲಯವನ್ನೇ ನಂಬಿ ಬದುಕಿದ್ದ ರಾಣಿಯಮ್ಮ ತನ್ನನ್ನು ಬೀದಿಪಾಲು ಮಾಡದಂತೆ ಕಂಡಕಂಡವರ ಕಾಲಿಗೆ ಬಿದ್ದು ಕಣ್ಣೀರಿಡುತ್ತಿದ್ದರೆ ದೇವಸ್ಥಾನದ ವಂಚಕರು 'ಹೊಡೀರಿ.... ನನ್ನ ಮಕ್ಕಳನ್ನ ಆಚೆ ಹಾಕ್ರೀ' ಎಂದು ಪೋಲೀಸರನ್ನು ದಬಾಯಿಸುತ್ತಿದ್ದರು.


ಜ್ಯೋತಿ ರಾಮಲಿಂಗಂ


35 ವರ್ಷ ಶೌಚಾಲಯ ತೊಳೆದುಕೊಂಡಿದ್ದವರಿಗೆ ಬೇರೆ ಮನೆ ನೋಡಿಕೊಳ್ಳಲು ಯಕಶ್ಚಿತ್ ನೋಟೀಸು ಹಾಳಾಗಲಿ ಸಣ್ಣದೊಂದು ಕಾಲಾವಕಾಶವನ್ನೂ ಕೊಡಲಿಲ್ಲ. ಏಕೆ ಗೊತ್ತೆ? ದೇವಸ್ಥಾನದ ಕುಂಭಾಭಿಷೇಕವಾಗುವ ವೇಳೆ ದೇವಾಲಯದ ಆವರಣದಲ್ಲೆಲ್ಲೂ ಹೊಲೆಮಾದಿಗರಿರಕೂಡದೆಂದೂ ಹಾಗೊಮ್ಮೆ ಇದ್ದಿದ್ದೇ ಆದರೆ ಉದ್ಭವ ಮೂರ್ತಿಗೆ ಮೈಲಿಗೆಯಾಗಿ ಪ್ರಾಣ ಪ್ರತಿಷ್ಠಾಪನೆ ಸಾಧ್ಯವಿಲ್ಲವೆಂದು ಪುರೋಹಿತರು ಹೇಳಿದ್ದರಂತೆ!

ಇಂತಲ್ಲಿ ದೇವರಲ್ಲ ದೆವ್ವವಷ್ಟೇ ಇರಲು ಸಾಧ್ಯ. ಹುಂಡಿಕಳ್ಳರ ಮಾತು ಕೇಳಿದ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಬಹಿರಂಗವಾಗಿ ಅಸ್ಪೃಶ್ಯತೆ ಆಚರಿಸಿದರಲ್ಲ ಅವರಿಗೇನು ಶಿಕ್ಷೆ? ಬೀದಿಗೆ ಬಿದ್ದ ಮೋಚಿ ಗೋವಿಂದಪ್ಪನ ಮೇಲಾದ ದೌರ್ಜನ್ಯದ ವಿರುದ್ಧ ದಲಿತ ಕ್ರಿಯಾ ಸಮಿತಿಯ ರವೀಂದ್ರ ಹೋರಾಟಕ್ಕೆ ಕರೆ ಕೊಟ್ಟಿದ್ದಾರೆ. ಬಹುಜನ ಸಮಾಜ ಪಕ್ಷದ ನಾಯಕ ಮಾರಸಂದ್ರ ಮುನಿಯಪ್ಪ ಕೂಡ ಪಾಲಿಕೆಯ ಅಸ್ಪೃಶ್ಯತೆಯ ವಿರುದ್ಧ ಬೀದಿಗಿಳಿದಿದ್ದಾರೆ.ಕಾರ್ಪೋರೇಷನ್ ಅಧಿಕಾರಿಗಳ ದುರುಳತನಕ್ಕೆ ಶಿಕ್ಷೆಯಾಗಲೇಬೇಕು.

ಮನೆ ತುಂಬಾ ಪುಸ್ತಕಗಳಿದ್ದರೆ, ಒಂದು ಉತ್ತಮವಾದ ಹೂದೋಟವಿದ್ದಂತೆ -ಆಂಡ್ರೂಲಾಗ್

ಚಿಕ್ಕಮಗಳೂರು: ದಕ್ಷ ಅಧಿಕಾರಿಗಳಿಗಿಲ್ಲಿ ಉಳಿವಿಲ್ಲ!

ಚಿಕ್ಕಮಗಳೂರು ಜಿಲ್ಲೆಗೂ ದಕ್ಷ ಅಧಿಕಾರಿಗಳಿಗೂ ಈ ಜಿಲ್ಲೆ ರಚನೆಯಾದ ಸಮಯದಿಂದಲೂ ಆಗಿಬರುತ್ತಿಲ್ಲ. ಎಚ್.ಎಲ್. ನಾಗೇಗೌಡರು ಈ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದಾಗ ಎಂದಿನಂತೆ ತಮ್ಮ ದಕ್ಷತೆ ಪ್ರದರ್ಶಿಸಿದರು. ಆ ಕೂಡಲೇ ಅವರ ವರ್ಗಾವಣೆ ಸಂಭವಿಸಿತ್ತು. ಅವರು ಪತ್ತೆಹಚ್ಚಿ ನೋಡಿದಾಗ ತಮ್ಮವರೇ ತಮ್ಮ ವರ್ಗಾವಣೆಯ ಹಿಂದಿದ್ದರು ಎಂಬುದು ಗೊತ್ತಾಯಿತು. ಕೆರಳಿದ ನಾಗೇಗೌಡರು "ನೀವು ನಾಳೆ ಹೋಗೋನ್ನ ಇವತ್ತು ಕಳಿಸಿದಿರಿ ಅಷ್ಟೆ. ನಿಮಗೆ ಮೀಸೆ ಇದ್ದರೆ ನಾನಿಲ್ಲೇ ಖಾಯಂ ಆಗಿ ಇರುವಂತೆ ಮಾಡಿ" ಎಂದು ಸವಾಲು ಹಾಕಿದ್ದರು.



ಹರ್ಷ ಗುಪ್ತಾ

ಚಿಕ್ಕಮಗಳೂರಲ್ಲಿ ನಾಗೇಗೌಡರು ಮಾಡಿದ್ದೇನು ಎಂಬುದರ ಬಗ್ಗೆ ಅವರು ದಾಖಲಿಸಿರುವುದನ್ನೇ ಓದಿ:

"ಚಿಕ್ಕಮಗಳೂರು ಜಿಲ್ಲೆ ಕಾಫಿಗೆ ತೌರುಮನೆ. ದಟ್ಟವಾದ ಕಾಡು, ಕಣಿವೆ, ಕಂದರಗಳ ಬಹು ಸುಂದರವಾದ ಜಿಲ್ಲೆ. ಅಷ್ಟೇ ಸೋಮಾರಿತನದ ಜಿಲ್ಲೆಯೂ ಆಗಿತ್ತು. ಕಾಫಿ ತೋಟದ ಮಾಲೀಕರು ಅವರ ಬಂಗಲೆಗಳಲ್ಲಿದ್ದುಕೊಂಡು ಕೂಲಿಗಳಿಂದ ಕೆಲಸ ಮಾಡಿಸಿಕೊಂಡು ಅವರ ಪಾಡಿಗೆ ಅವರು ಇದ್ದು ಬಿಡುತ್ತಿದ್ದರು. ಚಿಕ್ಕಮಗಳೂರು ಪಟ್ಟಣವೂ ಸಹ ಯಾವ ಚಟುವಟಿಕೆಗಳಿಲ್ಲದ ಊರಾಗಿತ್ತು. ಆದರೆ ದಟ್ಟವಾದ ಕಾಡಿನೊಳಗೆ ಮರಗಡುಕರ ಕೆಲಸ ಸಾಗಿತ್ತು. ಆ ಕಾಡಿನೊಳಗೆ ಏನು ನಡೆಯುತ್ತಿತ್ತು, ಏನು ನಡೆಯುತ್ತಿರಲಿಲ್ಲ ಎಂದು ಹೇಳುವಂತಿಲ್ಲ. ಭೂಮಿ ಹುಟ್ಟಿದಂದಿನಿಂದ ಬೆಳೆದು ಬಂದ ಕಾಡಿನ ನಿರ್ನಾಮ ಸತತವಾಗಿ ಸಾಗಿತ್ತು, ಈಗಲೂ ಸಾಗುತ್ತಿದೆ. ಬೆಲೆ ಬಾಳುವ ಗಂಧದ ಮರ, ಸಾಗುವಾನಿ, ಬೀಟೆ ಮುಂತಾದ ನಮ್ಮ ಸಂಪತ್ತು ನಿರ್ನಾಮವಾಗುತ್ತಿತ್ತು.

ಇದರಲ್ಲಿ ಕೇರಳದ ಕಳ್ಳ ಖದೀಮರದೇ ಮೇಲುಗೈ. ಜೊತೆಗೆ ನಮ್ಮವರದೂ ಒಂದು ಕೈ. ಕೇರಳದ ಜನ ಏನೂ ಕಾಣದವರಂತೆ ಬಂದು ಕಾಡಿನ ಮಧ್ಯೆ ನೆಲೆಸಿ ಒಂದು ಗುಡಿಸಲು ಕಟ್ಟುವುದು, ಅಕ್ಕಪಕ್ಕದ ಮರಗಳಿಗೆ ರಾತ್ರಿ ಬೆಂಕಿ ಹಚ್ಚುವುದು, ಅವೇ ಸುಟ್ಟು ಹೋದವೆಂದು ಹೇಳುವುದು, ಆ ಜಾಗ ಸಾಗುವಳಿ ಮಾಡುವುದು, ಎಂಥದ್ದೋ ಹುಲ್ಲು ಬೆಳೆಯುತ್ತೇವೆ ಎಂದು ಹೇಳಿ ಟೋಪಿಯೋಕ (ಮರಗೆಣಸು) ಹಾಕಿದ್ದೇವೆಂದು ಹೇಳುವುದು. ಸರ್ಕಾರಕ್ಕೆ ಟೋಪಿ ಹಾಕುವುದು. ಆ ಜಾಗ ಗಿಟ್ಟಿಸಿಕೊಳ್ಳುವುದು. ಆ ಮೇಲೆ ಮರ ಕಡಿದು ಸಾಗಿಸುವುದು. ಇವೆಲ್ಲಾ ಒಂದೇ ಸಮನೆ ನಡೆದು ಬರುತ್ತಾ ಇದ್ದವು. ಇವನ್ನೆಲ್ಲಾ ಕಂಡು ಮನಸ್ಸಿಗೆ ತುಂಬಾ ಕಿರಿಕಿರಿಯಾಗುತ್ತಿತ್ತು. ಶಿವಮೊಗ್ಗ ಜಿಲ್ಲೆಯಲ್ಲೇ ಇಂತಹ ಅಕ್ರಮಗಳನ್ನು ತಡೆಯಲು ಪ್ರಯತ್ನ ಪಟ್ಟಿದ್ದೆ. ಆದರೆ ಅದು ಒಬ್ಬನ ಕೈಯಿಂದ ಆಗುವ ಕೆಲಸವೆ! ಅನೇಕರು ಅವರಿಗೇ ಸಹಾಯ ಮಾಡುತ್ತಿದ್ದರು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಮತ್ತೆ ಆ ಕೆಲಸ ಆರಂಭಿಸಿದೆ. ಹುಚ್ಚನಂತೆ ಕಾಡುಮೇಡುಗಳನ್ನು ಅಲೆದೆ. ಒಂದು ಬಗೆಯ ಭೀತಿ ಹುಟ್ಟಿಸಿದೆ. ನರಸಿಂಹರಾಜಪುರಕ್ಕೆ ಹೆಡ್ ಮುನ್ಶಿಯಾಗಿ ಹೋಗಿದ್ದಾಗ ನೋಡಿದ ಕಾಡು ಈಗ ಇರಲಿಲ್ಲ. ಅಬ್ಬರಿಸಿದೆ. ಆರ್ಭಟಿಸಿದೆ. ನನ್ನ ಅಬ್ಬರ ಕೇಳಿ ಒಬ್ಬ ಸಿರಿಯನ್ ಕ್ರಿಶ್ಚಿಯನ್ ಚಿನ್ನದ ಕೊಡಲಿಯನ್ನೇ ಮಾಡಿಸಿಟ್ಟುಕೊಂಡಿದ್ದನಂತೆ. ದೀಸಿಯಂತಹ ಮನುಷ್ಯನನ್ನು ಅಂಥ ಇಂಥ ಕೊಡಲಿಯಿಂದ ಕಡಿಯಬಾರದು, ಚಿನ್ನದ ಕೊಡಲಿಯಿಂದಲೇ ಕಡಿಯಬೇಕೆಂದು.

ಇತ್ತೀಚಿಗೆ ಮತ್ತೊಮ್ಮೆ ನರಸಿಂಹರಾಜಪುರಕ್ಕೆ ಹೋಗಿದ್ದೆ. ಅವನ ಚಿನ್ನದ ಕೊಡಲಿ ರನ್ನದಂತಹ ಮರಗಳನ್ನು ಕಡಿದು ದಟ್ಟವಾದ ಕಾಡನ್ನು ಕಡಿದು ಬಟ್ಟಬಯಲು ಮಾಡಿತ್ತು. ಬೆಲೆ ಬಾಳುವ ಮರಗಳಿದ್ದ ಕಡೆ, ಬಿರ್ಲಾರವರ ಹರಿಹರ ಪಾಲಿಫೈಬರ್ ಕಾರ್ಖಾನೆಗೆ ಮಾತ್ರ ಉಪಯೋಗವಾಗುವ, ಆದರೆ ರೈತರಿಗೆ ಯಾತಕ್ಕೂ ಬಾರದ ನೀಲಗಿರಿ ಮರಗಳು ಬೆಳೆದಿದ್ದವು. ಕಾಡು ಉಳಿಸುವುದಕ್ಕೆ ನನ್ನ ಶಕ್ತಿಮೀರಿ ಕೆಲಸ ಮಾಡಿದೆನೆಂಬ ತೃಪ್ತಿ ಮಾತ್ರ ನನಗುಂಟು.


ನಾಗೇಗೌಡರು

ಕಾಡು ನಾಡಿನ ಆಸ್ತಿ. ಅದನ್ನು ಉಳಿಸುವ ಆಸಕ್ತಿ ಎಲ್ಲರಿಗೂ ಬರಬೇಕು. ನನ್ನನ್ನು ಚಿನ್ನದ ಕೊಡಲಿಯಿಂದ ಕಡಿಯುವ ಪ್ರಯತ್ನ ಕೈಗೂಡದಿದ್ದರೂ ಇನ್ನೊಬ್ಬ ಕೇರಳೀಯ ಕಬ್ಬಿಣದ ಮಚ್ಚಿನಿಂದ ಕಡಿಯುವ ಪ್ರಯತ್ನ ನಡೆಸಿದ. ಅವನ ಕೈಲಿದ್ದ ಮಚ್ಚನ್ನು ಕಿತ್ತುಕೊಂಡೆ. ಅವನು ನನ್ನ ಮೇಲೆ ಬಿದ್ದು ಮಚ್ಚನ್ನು ಕೈಯಿಂದ ಕಿತ್ತುಕೊಂಡು ಅದನ್ನು ನನ್ನ ಮೇಲೆ ಪ್ರಯೋಗ ಮಾಡುವುದರಲ್ಲಿದ್ದ. ಆತ ಕಾಫಿ ತೋಟದ ಆಳು. ಇಷ್ಟರಲ್ಲಿ ಒಬ್ಬ ತೋಟದ ಮಾಲೀಕನೇ ಬಂದು ನನ್ನ ಪ್ರಾಣ ಉಳಿಸಿದ. ಆದರೆ ನಾನೇ ಆತನನ್ನು ಕಡಿಯಲು ಹೋದೆನೆಂದು ದೂರು ಕೊಟ್ಟ.

ಡಿವಿಜನಲ್ ಕಮಿಷನರ್ ತನಿಖೆಗೆ ಬಂದರು. ನನ್ನನ್ನೇನೂ ಕೇಳಲಿಲ್ಲ, ಅವರೇ ಯಾರನ್ನು ಬೇಕೋ ಅವರನ್ನು ವಿಚಾರಿಸಿಕೊಂಡು ಹೋದರು. ಆಮೇಲೆ ಏನಾಯಿತೋ ಕಾಣೆ. ಈ ಡಿವಿಜನಲ್ ಕಮಿಷನರ್‌ಗೆ ಕನ್ನಡ ಬರುತ್ತಿರಲಿಲ್ಲ, ತಮಿಳು ಅವರ ಮಾತೃಭಾಷೆ. ಕನ್ನಡ ಕಲಿಯುತ್ತಿದ್ದ ಅವರು "ಹಣ", "ಹೆಣ" ಇವೆರಡಕ್ಕೂ ವ್ಯತ್ಯಾಸ ಮಾಡುತ್ತಿರಲಿಲ್ಲ. ತಾಲ್ಲೂಕ್ ಬೋರ್ಡ್ ಮೆಂಬರುಗಳು ಅದಕ್ಕೆ ಹಣ ಬೇಕು, ಇದಕ್ಕೆ ಹಣಬೇಕು ಎಂದರೆ, ಇವರು "ಗಜಾನೆಲಿ ಹೆಣ ಇತ್ತರೆ ತಾನೆ ಕೊಟಲು ಸಾತ್ಯ" ಎನ್ನುತ್ತಿದ್ದರು. ತಮಿಳಲ್ಲಿ "ಖ" ಇಲ್ಲವಂತೆ. ಆದ್ದರಿಂದ ಖಜಾನೆ ಗಜಾನೆ ಆಗಿತ್ತು. ನಮಗೆಲ್ಲ ನಗುವೊ ನಗು...."


ಮಧುಕರ್ ಶೆಟ್ಟಿ

ಹೀಗೆ, ದಾಖಲಿಸಿರುವ ಎಚ್.ಎಲ್. ನಾಗೇಗೌಡರು, ಚಿಕ್ಕಮಗಳೂರಿನ ಪಟ್ಟಭದ್ರ ಹಿತಾಸಕ್ತರು ಮತ್ತು ಅವರು ಹೇಳಿದಂತೆ ಕೇಳುವ ಸರ್ಕಾರದ ಒತ್ತಡದ ಫಲವಾಗಿ ಮಂಗಳೂರಿಗೆ ವರ್ಗವಾದರು.

ಈ ಪ್ರಕರಣ ನಾಗೇಗೌಡರಿಗೇ ಕೊನೆಯಾಗಿಲ್ಲ, ಇತ್ತೀಚಿನ ಹರ್ಷಗುಪ್ತ ಮತ್ತು ಮಧುಕರ ಶೆಟ್ಟಿಯವರೆಗೂ ನಡೆದುಕೊಂಡುಬಂದಿದೆ. ಚಿಕ್ಕಮಗಳೂರು ಶ್ರೇಣೀಕೃತ ಸಮಾಜದ ಯಥಾಸ್ಥಿತಿವಾದವನ್ನು ಜೋಪಾನವಾಗಿ ಕಾಯ್ದುಕೊಂಡು ಬಂದಿರುವ ಜಿಲ್ಲೆ. ಇಲ್ಲಿನ ದೊಡ್ಡ ರಾಜಕಾರಣಿಗಳೆಲ್ಲಾ ಪ್ಲಾಂಟರುಗಳು ಎಂಬುದೊಂದು ವಿಶೇಷ. ಆದ್ದರಿಂದ ಇಲ್ಲಿಗೆ ಬರುವ ಅಧಿಕಾರಿಗಳು ಕೂಡ ರಾಜಕಾರಣಿಗಳ ಹಿತಾಸಕ್ತಿಗೆ ಧಕ್ಕೆ ಬರುವಂತಹ ಕೆಲಸಕ್ಕೆ ಕೈ ಹಾಕುವ ಮುನ್ನ ವರ್ಗಾವಣೆಗೆ ತಯಾರಾಗಿರಬೇಕು.

ಈಗ ಬಯಲುಸೀಮೆ ರಾಜಕಾರಣಿಗಳು ಈ ಕೆಲಸ ಕೈಗೆತ್ತಿಕೊಂಡಿದ್ದಾರೆ. ಹಿಂದೊಮ್ಮೆ ಲಕ್ಷ್ಮಯ್ಯ ಎಂಬ ಶಾಸಕ ತನ್ನ ವೈರಿಗಳ ಊರ ಹತ್ತಿರಕ್ಕೋಗಿ ಅವರ ಹೆಂಡತಿಯರನ್ನ ಅವಾಚ್ಯ ಶಬ್ದಗಳಿಂದ ಕರೆದಿದ್ದ. ಇದನ್ನು ಕಂಡ ಪೋಲೀಸ್ ಅಧಿಕಾರಿ ಬಿಪಿನ್ ಗೋಪಾಲಕೃಷ್ಣ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಂಡ ಫಲವಾಗಿ ಹಠ ಹಿಡಿದ ಲಕ್ಷ್ಮಯ್ಯ ದಿನಬೆಳಗಾಗುವುದರಲ್ಲಿ ಬಿಪಿನ್ ಗೋಪಾಲ್‌ಕೃಷ್ಣರನ್ನು ವರ್ಗ ಮಾಡಿಸಿದ್ದ. ಅಂತಹ ಲಕ್ಷ್ಮಯ್ಯನ ಮಕ್ಕಳೀಗ ಕುಮಾರಸ್ವಾಮಿಗೆ ಗಂಟುಬಿದ್ದು ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಗಳಾದ ಹರ್ಷಗುಪ್ತ ಹಾಗೂ ಮಧುಕರ ಶೆಟ್ಟರನ್ನು ವರ್ಗ ಮಾಡಿಸಿದ್ದಾರೆ.

ದಿ. ಲಕ್ಷ್ಮಯ್ಯನ ಮಕ್ಕಳಾದ ಧರ್ಮೇಗೌಡ ಮತ್ತು ಭೋಜೇಗೌಡ ಈಗ ಕುಮಾರಸ್ವಾಮಿಗೆ ಎಡಗೈ ಬಲಗೈನಂತಿದ್ದಾರೆ. ದಳವೇನಾದರೂ ಅಧಿಕಾರಕ್ಕೆ ಬರದೇ ಹೋಗಿದ್ದರೆ ಪಾಪರ್‌ಗಳಾಗಲಿದ್ದ ಈ ಕರಟಕ ಧಮನಕ ಜೋಡಿ ದಳ ಅಧಿಕಾರಕ್ಕೆ ಬಂದ ಕೂಡಲೇ ಕುಮಾರಣ್ಣನಿಗೆ ಹತ್ತಿರವಾದರು. ಮತ್ತೆ ದಂಧೆ ಶುರು ಮಾಡಿಕೊಂಡರು. ಇದರ ಫಲವಾಗಿ ಲೋಕಾಯುಕ್ತ ವೆಂಕಟಾಚಲರು ಭೂನೋಂದಣಿ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡಾಗ, ಆತ ರೆವಿನ್ಯೂ ಮಂತ್ರಿಗಳಿಗೇ ಎರಡು ಲಕ್ಷ ಕೊಟ್ಟು ಬಂದಿರುವೆನೆಂದು ಹೇಳಿ ಅಚ್ಚರಿ ಮೂಡಿಸಿದ್ದ. ಇದರಿಂದ ಕೆರಳಿದ ಎಂ.ಪಿ. ಪ್ರಕಾಶ್ "ಆ ಅಧಿಕಾರಿಯನ್ನು ವಿಚಾರಣೆಗೆಳೆಯಿರಿ. ನಾನು ಆತನ ಮುಖವನ್ನೇ ನೋಡಿಲ್ಲ" ಅಂದರು. ಆದರೆ ಪ್ರಕಾಶ್ ಕೈಯಿಂದ ಅಧಿಕಾರಿಗಳ ವರ್ಗಾವಣೆಗೆ ಸಹಿ ಪಡೆದಿದ್ದ ಲಕ್ಷ್ಮಯ್ಯನ ಮಕ್ಕಳು ಬಾಯಿಬಿಡಲಿಲ್ಲ, ಈಗಲೂ ಬಿಡುತ್ತಿಲ್ಲ.

ಚಿಕ್ಕಮಗಳೂರು ಜಿಲ್ಲಾಧಿಕಾರಿ ಗುಪ್ತ ಮತ್ತು ಜಿಲ್ಲಾ ರಕ್ಷಣಾಧಿಕಾರಿ ಶೆಟ್ಟಿ ತಮ್ಮ ದಕ್ಷತೆಯಿಂದ ಜಿಲ್ಲೆಯ ಎಲ್ಲ ಅಕ್ರಮ ದಂಧೆಗಳಿಗೆ ಕಡಿವಾಣ ಹಾಕಿದ್ದರು. ಅಂದರೆ, ಲಕ್ಷ್ಮಯ್ಯನ ಮಕ್ಕಳ ಆದಾಯದ ಮೂಲಕ್ಕೇ ಕಡಿವಾಣ ಹಾಕಿದ್ದರು. ಯಾವ ಮಾರ್ಗದಿಂದಲಾದರೂ ಹಣ ಮಾಡುವ ದಂಧೆಯವರಾದ ಧರ್ಮೇಗೌಡ ಮತ್ತು ಭೋಜೇಗೌಡ ಕುಮಾರಸ್ವಾಮಿ ಬಳಿ ಚಾಡಿ ಹೇಳಿದರು. ಇವರ ಜೊತೆಗೆ ಶಂಕರಮೂರ್ತಿ ಎಂಬ ಚಡ್ಡಿ ಮಂತ್ರಿಯೂ ಸೇರಿಕೊಂಡ. ಇದೆಲ್ಲದರ ಫಲವಾಗಿ ಕೆಲವೇ ತಿಂಗಳ ಹಿಂದೆ ಬಂದಿದ್ದರೂ ಚಿಕ್ಕಮಗಳೂರು ಜಿಲ್ಲೆ ಜನಗಳ ವಿಶ್ವಾಸ ಗಳಿಸಿದ್ದ ಹರ್ಷಗುಪ್ತ ಮತ್ತು ಮಧುಕರ ಶೆಟ್ಟರ ವರ್ಗಾವಣೆ ನಡೆದು ಹೋಗಿದೆ.

ಇದು ಆರಂಭ ಅಷ್ಟೇ. ಮುಂದೆ ಎಲ್ಲ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಗಳಿಗೆ ಇಂತಹ ಶಿಕ್ಷೆ ಕಾದಿದೆ ಎಂಬುದರಲ್ಲಿ ಅನುಮಾನಗಳೇ ಇಲ್ಲ.

-ವರದಿಗಾರ

ಕಡೆಗೂ ಬಂಡಾಯದವರಿಗೆ ಸಿಕ್ಕ ಡಂಬಾಯ ಪ್ರಶಸ್ತಿಗಳು

ಬಂಡಾಯ ಸಾಹಿತ್ಯ ಸಂಘಟನೆಯಲ್ಲಿದ್ದ ಡಂಬಾಯಗಾರರು ಸರ್ಕಾರ ಕೊಡುವ ಪ್ರಶಸ್ತಿಗಳನ್ನಾಗಲಿ, ಸ್ಥಾನಮಾನಗಳನ್ನಾಗಲಿ ಒಪ್ಪಿಕೊಳ್ಳದೆ ತಿರಸ್ಕರಿಸಬೇಕೆಂಬ ಠರಾವನ್ನು ಬಂಡಾಯದ ಸಭೆಯಲ್ಲಿ ಪಾಸು ಮಾಡಿದ್ದಳು. ಕಹಳೆಗೌಡ ನಾಗವಾರರು, ಆರ್.ವಿ. ಭಂಡಾರಿ ವಗೈರೆಗಳು ಬಳ್ಳಾರಿ ರಣಬಿಸಿಲನ್ನೂ ಲೆಕ್ಕಿಸದೆ ಸರ್ಕಾರಿ ಶಾಲಿನಲ್ಲಿ ಬಂಡಾಯವನ್ನು ಮುಚ್ಚಿಕೊಂಡರಂತಲ್ಲಾ. ಸದರಿ ಡಂಬಾಯಗಾರರು ಪಡೆದಿರುವ ಪ್ರಶಸ್ತಿ ಅವರ ಸಾಹಿತ್ಯಕ್ಕೆ ಸಂದ ಗೌರವವೋ, ಈವರೆಗೂ ಬಗಿದಿರುವ ಬಂಡಾಯದ ಭಾಷಣಕ್ಕೆ ಸಿಕ್ಕ ಪುರಸ್ಕಾರವೋ, ಅಥವಾ ಅವರು ಮಾಡಿಕೊಂಡು ಬಂದ ಇನ್ನಿತರ ಡಂಬಾಯದ ಕೈಂಕರ್ಯಗಳಿಗೋ ಎಂಬುದನ್ನು ಹೊಸ ಬಂಡಾಯದ ತಲೆಮಾರು ಚರ್ಚಿಸುತ್ತ ಕುಳಿತಿದೆಯಂತಲ್ಲಾ, ಈ ಪೈಕಿ "ಕಾಳೇಗೌಡ ನಾಗವಾರರಿಗೆ ಸಿಕ್ಕ ಪ್ರಶಸ್ತಿ ಅರ್ಹವಾಗಿದೆ. ಏಕೆಂದರೆ ಮಹಿಳಾವಾದಿಯಾದ ಅವರಿಗೆ ಗೀತಾ ನಾಗಭೂಷಣರ ಅಧ್ಯಕ್ಷತೆ ಸಮಯದಲ್ಲಿ ಸಿಕ್ಕಿರುವುದು ಸರಿ. ಹಾಗೆಯೇ ಆರ್.ವಿ. ಭಂಡಾರಿಯವರಂತೂ ಈ ಹಿಂದೆಯೇ ಪಡೆಯಬೇಕಿದ್ದವರು. ಉಳಿದವರೂ ಕೂಡ ಮುಂದೆ ಪಡೆಯಬೇಕಿದ್ದವರು. ಅಂದರೆ ಅಂತಹದ್ದೇನನ್ನಾದರೂ ಬರೆದು ಪಡೆಯಬೇಕಿದ್ದವರಿಗೆ ಏನೂ ಬರೆಯದೆ ಸಿಕ್ಕಿದೆ" ಎಂದು ಬಂಡಾಯದ ಹುಡುಗರು ಬಂಡಾಯವೆದ್ದಿದ್ದಾರಂತಲ್ಲಾ, ಥೂತ್ತೇರಿ!!

* * * * * * * * * *

ಈ ಪೈಕಿ ಕಾಳೇಗೌಡರ ಸಾಹಿತ್ಯದ ಬಗ್ಗೆ ಹಗುರವಾಗಿ ಮಾತನಾಡುವುದು ಬೇಡಿ. ದಲಿತ ಹುಡುಗರ ಭುಜ ತಟ್ಟಿ ಬರೆಸುತ್ತ ಬಂದಿದ್ದಾರೆ. ಮುನ್ನುಡಿ ಬರೆದಿದ್ದಾರೆ. ಬರೆಯಬಾರದ ಉದ್ದೇಶಕ್ಕೆ ತಿರುಗಿ ಚಾಸ್ತಿ ಬರೆದಿಲ್ಲ ಅಷ್ಟೇ. ಆದರೆ ಬರೆದ ಎರಡು ಕಥಾ ಸಂಕಲನಗಳನ್ನೇ ಮೂರಾಗಿ ಪ್ರಕಟಿಸಿರುವುದು ಸಾಮಾನ್ಯ ಸಾಧನೆಯೇ? ಆ ಮೂರನೇ ಸಂಕಲನ ಯೂನಿವರ್ಸಿಟಿಗಳಲ್ಲಿ ಪಠ್ಯವಾಗುವಂತೆ ಮಾಡುವುದು ಕಡಿಮೆ ಸಾಧನೆಯೇ? ಇವೆಲ್ಲಾ ಜೀವಮಾನದ ಸಾಧನೆ ವ್ಯಾಪ್ತಿಗೆ ಬರುತ್ತವಾದ್ದರಿಂದ, ಅವರಿಗೆ ಸಂದಿರುವ ಪ್ರಶಸ್ತಿಯನ್ನು ಕನ್ನಡ ನಾಡಿನ ಕಾಳೇಗೌಡಾಭಿಮಾನಿಗಳಲ್ಲದೆ ಅವರನ್ನು ಕಂಡರಾಗದವರೂ ಮೆಚ್ಚಲೇಬೇಕಿದೆಯಂತಲ್ಲಾ, ಅದೂ ಅಲ್ಲದೆ ಅವರು ಜನಪದ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಮಾಡಿದ ಸಾಧನೆ ಕಡಿಮೆಯೇ? ಅವರ ಸಾಧನೆಯ ಪರಿಣಾಮವಾಗಿ ಅವರ ನಂತರ ಬಂದ ರಾಮಚಂದ್ರೇಗೌಡ ಅಕಾಡೆಮಿ ಮಾಡಿದ್ದ ಸಾಲ ತೀರಿಸುವಂತೆ ಮಾಡಿದ್ದು ಕಡಿಮೆಯೇನಲ್ಲ, ಕಾಳೇಗೌಡರು ಬಂಡಾಯಗಾರರಾಗಿ, ದಲಿತ ಹುಡುಗರ ಜೊತೆ ಇದ್ದು ಸದಾ ಒಳ್ಳೆ ಊಟ, ಒಳ್ಳೆ ವಸತಿ, ಒಳ್ಳೆ ಜಾಗ, ಒಳ್ಳೆ ಮಾತಿನ ರುಚಿಗೆ ಗಂಟುಬಿದ್ದ ಫಲವಾಗಿ, ಇನ್ನೂ ಹಲವು ಪ್ರಶಸ್ತಿ, ಅಕಾಡೆಮಿ ಅರಸುತ್ತ ಕುಂತಿದ್ದಾರೆಂದು ಒಂದು ಕಾಲದ ಕಾಳೇಗೌಡರ ಶಿಷ್ಯ ಕೋಟಿಯೇ ಪಿಸುಗುಡುತ್ತ ಕುಳಿತಿದೆಯಂತಲ್ಲಾ, ಥೂತ್ತೇರಿ!!



* * * * * * * * * * *

ಇತ್ತ ಈಶ್ವರಪ್ಪನೆಂಬ ಬಿಜೆಪಿ ಬಫೂನ್ ಬಾಯಿಂದ ಕ್ರಾಂತಿಕಾರಿ ಹೇಳಿಕೆಗಳು ಬಿತ್ತರವಾಗುತ್ತಿವೆಯಂತಲ್ಲಾ. "ಈ ಹಿಂದೆ ನಾನು ಅನ್ನ ತಿನ್ನುವಂತಹ ನರಮನುಷ್ಯನಾಗಿದ್ದು ಆರೆಸ್ಸೆಸ್ಸಿನಿಂದ. ಆ ನಂತರ ಅಕ್ಷರ ಕಲಿತು ಮಾತನಾಡುವಂತಾದದ್ದು ಬಿಜೆಪಿಯಿಂದ. ಸ್ನಾನ ಮಾಡುವುದನ್ನು ಕಲಿತದ್ದು ತುಂಗಾ ನದಿ ದೆಸೆಯಿಂದ. ಸಂಧ್ಯಾವಂದನೆ ಕಲಿತದ್ದು ವಿಪ್ರೋತ್ತಮರ ಮಕ್ಕಳ ಸಹವಾಸದಿಂದ. ಇಲ್ಲವಾದರೆ ಗೊಣ್ಣೆ ಸುರುಕ ಠಗರಿನಂತೆ ಜೀವನ ಸಾಗಿಸಿ ಯಾರಾದರೂ ಕಟುಕನ ಕೈ ಸೇರುತ್ತಿದ್ದೆ" ಎಂದೆಲ್ಲ ಮಾತನಾಡುತ್ತಿರುವ ಈಶ್ವರಪ್ಪ, ಈಚೆಗೆ ಮಠಗಳು ಪಂಕ್ತಿಭೇದ ತಡೆಯಬೇಕೆಂದು ಠೇಂಕಾರ ಮಾಡಿದ್ದಾರಂತಲ್ಲಾ, ಈ ಕೂಗು ಪೇಜಾವರ ಶ್ರೀಗಳನ್ನು ತಲುಪಿ ಅವರು ಅಸಹನೆಯಿಂದ ಗೊಣಗಿ, "ಮಠಗಳು ಪಂಕ್ತಿಭೇದ ಭೋಜನ ಹೇಗೆ ತಡೆಯಲು ಸಾಧ್ಯ!? ನಾನು ಈಶ್ವರಪ್ಪನ ಜೊತೆ ಕುಳಿತು ಊಟ ಮಾಡುವುದು ಸಾಧ್ಯವಾ? ಕೃಷ್ಣ ಬದುಕಿದ್ದರೆ ನಾವು ಅವನ ಜೊತೆಯಲ್ಲಿ ಕುಳಿತು ಊಟ ಮಾಡುತ್ತಿರಲಿಲ್ಲ ಎಂಬುದು ಈ ಕುರುಬನಿಗೇನು ಗೊತ್ತು" ಎಂದು ಇನ್ನೂ ಹೇಳಿಲ್ಲವಂತಲ್ಲಾ, ಆದರೆ ಈಶ್ವರಪ್ಪನಿಗೆ ಉಡುಪಿಯಲ್ಲಿ ಅಗ್ರಪಂಕ್ತಿಯಲ್ಲಿ ಅವಕಾಶ ಸಿಗದಾಗಲೂ ಸಿಟ್ಟಾದ ಉದಾಹರಣೆಯಿಲ್ಲ, ಈಗ ಇದ್ದಕ್ಕಿದ್ದಂತೆ ಪೇಜಾವರರನ್ನು ಹಿಂದೆ ತಳ್ಳಿ ಮುನ್ನುಗ್ಗುತ್ತಿರುವ ರಾಘವೇಶ್ವರ ಮಠದ ಆವರಣದಲ್ಲಿ "ಬ್ರಾಹ್ಮಣರ ಭೋಜನ ಸಾಗುತ್ತಿದೆ ಸಹಕರಿಸಿ" ಎಂಬ ಬೋರ್ಡು ಓದಿದಾಗಿನಿಂದಲೂ, ಮಠಗಳಲ್ಲಿ ಸಹಪಂಕ್ತಿ ಭೋಜನದ ಕ್ರಾಂತಿ ಕಹಳೆಯನ್ನು ಮೊಳಗಿಸುತ್ತಿದ್ದಾರಂತಲ್ಲಾ, ಥೂತ್ತೇರಿ!!

* * * * * * * * * * *

ಬೆಂಗಳೂರು ಅರಮನೆ ಮೈದಾನದಲ್ಲಿ ಸೇರಿದ್ದ ಅಹಿಂದದ ಲೀಡರುಗಳು ತಮ್ಮ ಇಂತಹ ಸ್ಥಿತಿಗೆ ಕಾರಣರಾದ ದೇವೇಗೌಡರನ್ನು ಎಂದಿನಂತೆ ದೊಡ್ಡ ಗಂಟಲಲ್ಲಿ ಹಿಗ್ಗಾಮುಗ್ಗಾ ಬೈದರೂ ದೇವೇಗೌಡರ ಮನೆಯಿಂದ ಯಾವ ಪ್ರತ್ಯುತ್ತರವೂ ಬರದಿರುವುದು ಕರ್ನಾಟಕದ ಜನತೆಗೆ ಸೋಜಿಗವನ್ನುಂಟು ಮಾಡಿದೆಯಂತಲ್ಲಾ, ಈ ಬಗ್ಗೆ ನಮಗೆ ಬಂದಿರುವ ಮಾಹಿತಿಗಳ ಪ್ರಕಾರ ಆ ಖೂಳರು, ನೀಚರು ಮತ್ತು ಅಧಮರಿಗೆ ದೇವೇಗೌಡರಿಂದ ಯಾವ ಉತ್ತರವೂ ದೊರಕುವುದಿಲ್ಲವಂತಲ್ಲಾ. ತಮ್ಮನ್ನು ಟೀಕೆ ಮಾಡಿದವರಿಗೆ ಅದೇ ಮಟ್ಟದ ಜನರಿಂದ ಉತ್ತರ ಕೊಡಿಸುತ್ತಾರಂತಲ್ಲಾ, ಈ ಪೈಕಿ ತುಸು ಮರ್ಯಾದೆಯಿಂದ ಉತ್ತರಿಸುವುದಾದರೆ ದತ್ತ ಉತ್ತರಿಸುತ್ತಾನಂತೆ. ಮರ್ಯಾದೆ ಬಿಟ್ಟು ಉತ್ತರಿಸುವುದಾದರೆ ಚೆನ್ನಿಗಪ್ಪ, ತೀರ ಮಾನಗೆಟ್ಟಂತೆ ಉತ್ತರಿಸುವುದಾದರೆ ಡಿ.ಟಿ. ಜಯಕುಮಾರ.... ಹೀಗೆ ತಮ್ಮ ಮಂದಿಯಲ್ಲಿ ಸಾಕಿಕೊಂಡಿರುವ ಮಿಕಗಳಿಂದಲೇ ಮೃಗಗಳಿಗೆ ತಕ್ಕ ಉತ್ತರ ಕೊಡಿಸುವಂತಹ ತೀರ್ಮಾನ ಮಾಡಿರುವ ಗೌಡರು, ಇನ್ನು ಮುಂದೆ ಅಹಿಂದ, ಕೊಹಿಂದ, ಇಂತಹ ಯಾವ ಹಿಂದಗಳಿಗೂ ಉತ್ತರಿಸುವುದಿಲ್ಲವೆಂದು ಶಪಥ ಮಾಡಿದ್ದಾರಂತಲ್ಲಾ, ಇದಲ್ಲವೆ ರಾಜಕಾರಣ, ಥೂತ್ತೇರಿ!!!

-ಯಾಹೂ



ಇದೇ ಏಪ್ರಿಲ್ 24ಕ್ಕೆ ಅಪ್ಪಾಜಿಯವರ 74ನೇ ಹುಟ್ಟುಹಬ್ಬ. ನನ್ನ ಜೀವನದ ಬಹುಮುಖ್ಯ ಅಂಗವಾಗಿದ್ದ ಅವರ ಬಗ್ಗೆ ಹೇಳುತ್ತಾ ನನ್ನ ಆತ್ಮಕತೆ ಪ್ರಾರಂಭಿಸಿದರೆ, ಅದು ನಾನು ಅವರಿಗೆ ನೀಡುವ ಹುಟ್ಟುಹಬ್ಬದ ಉಡುಗೊರೆ ಅಂದುಕೊಂಡಿದ್ದೆ. ಆದರೆ ನನ್ನ ಈ ಚಿಕ್ಕ ಆಸೆಯೂ ಈಡೇರಲಿಲ್ಲ. ಇದನ್ನು ನೋಡುವುದಕ್ಕೆ ಮುನ್ನವೇ ಅಪ್ಪಾಜಿ ಹೊರಟು ಹೋದರು. ಯಾವ ಸುದ್ದಿಯನ್ನು ನನ್ನ ಜೀವಮಾನದಲ್ಲಿ ಕೇಳಲೇಬಾರದು ಅಂದುಕೊಂಡಿದ್ದೆನೋ ಆ ಸುದ್ದಿ ನನ್ನ ಕಿವಿಗಳಿಗೆ ಅಪ್ಪಳಿಸಿದ್ದು ನಾನು ಹಂಪಿಯಲ್ಲಿ 'ಕುಮಾರರಾಮ' ಸಿನಿಮಾದ ಶೂಟಿಂಗ್‌ನಲ್ಲಿದ್ದಾಗ. ಆ ಕ್ಷಣ ಆಕಾಶವೇ ನನ್ನ ತಲೆ ಮೇಲೆ ಕಳಚಿಬಿದ್ದಂತಾಯಿತು, ನಾನು ನಿಂತಿದ್ದ ಭೂಮಿಯೇ ನಡುಗಿ ದಂತಾಯಿತು. ನನ್ನ ಪ್ರೀತಿಯ ಅಪ್ಪಾಜಿ ನಮ್ಮನ್ನು, ತಮ್ಮ ಅಪಾರ ಅಭಿಮಾನಿ ದೇವರುಗಳನ್ನು ಬಿಟ್ಟು ಹೊರಟು ಹೋಗಿದ್ದರು.

ಛೇ, ನನ್ನ ದುರಾದೃಷ್ಟ ನೋಡಿ. ಯಾರಿಗಾಗಿ ನನ್ನ ಈ ಆತ್ಮಕತೆಯನ್ನು ಬರೆಯಲು ಹೊರಟ್ಟಿದ್ದೆನೊ ಆ ಆತ್ಮವೇ ಇವತ್ತು ನಮ್ಮ ಜೊತೆ ಇಲ್ಲ. ಇಂತಹ ಸಂದರ್ಭದಲ್ಲಿ ಏನನ್ನು ಹೇಳಲಿ, ಹೇಗೆ ಪ್ರಾರಂಭಿಸಲಿ, ಯಾವುದನ್ನು ನೆನಪಿಸಿಕೊಳ್ಳಲಿ. ಒಂದೂ ಗೊತ್ತಾಗುತ್ತಿಲ್ಲ. ನೆನಪಿನ ಅಂಗಳದಲ್ಲಿನ ಅಪ್ಪಾಜಿ ಜೊತೆ ಕಳೆದ ಸಂತೋಷದ ಗಳಿಗೆಗಳನ್ನು ನೆನೆದು ಆನಂದಿಸಲೋ, ಆ ಕ್ಷಣಗಳು ಈಗ ಬರೀ ನೆನಪುಗಳು ಮಾತ್ರ ಎಂದು ದುಃಖಿಸಲೋ, ಒಂದೂ ತೋಚುತ್ತಿಲ್ಲ. ಯಾವುದನ್ನು ಆನಂದದಿಂದ ಪ್ರಾರಂಭಿಸಬೇಕು ಅಂದುಕೊಂಡಿದ್ದೆನೋ ಅಲ್ಲದ ಕಾರಣ ನನ್ನ ಈ ದುಃಖವನ್ನು ಬಣ್ಣಿಸುವ ಪದಗಳು ನನ್ನಲ್ಲಿಲ್ಲ.



ಚಿಕ್ಕವನಾಗಿದ್ದಾಗ ರಾಜ್-ಪಾರ್ವತಮ್ಮನವರೊಂದಿಗೆ ಶಿವರಾಜ್‌ಕುಮಾರ್

ಸುಮಾರು ಒಂದು ತಿಂಗಳ ಹಿಂದೆ ನನ್ನ ಆತ್ಮಕತೆ ಬರೆಯಲು 'ಲಂಕೇಶ್' ವಾರಪತ್ರಿಕೆಯ ಸದಾಶಿವ ಶೆಣೈರವರು ಕೇಳಿದಾಗ ನನಗೆ ಒಂಥರಾ ಅನ್ನಿಸಿತ್ತು. ಏಕೆಂದರೆ ಆತ್ಮಕತೆ ಬರೆಯುವ ವಯಸ್ಸು ನನ್ನದಲ್ಲ. ಅಥವಾ ಆತ್ಮಕತೆ ಬರೆಯುವಷ್ಟು ದೊಡ್ಡ ಸಾಧನೆಯನ್ನೂ ನಾನು ಮಾಡಿಲ್ಲ. ಏನೋ ಹತ್ತು ಮತ್ತೊಂದು ವರ್ಷಗಳಲ್ಲಿ ಸುಮಾರು ನೂರೆಂಟು ಚಿತ್ರಗಳಲ್ಲಿ ನಟಿಸಿದ್ದೇನೆ ಎಂಬುದನ್ನು ಬಿಟ್ಟರೆ ಬೇರೆ ಇನ್ನೇನು ಮಹಾ ಸಾಧನೆಯನ್ನು ನಾನು ಮಾಡಿದ್ದೇನೆ? ಈ ಪ್ರಶ್ನೆಗಳಿಗೆ ಉತ್ತರ ನನ್ನಲ್ಲಿ ಇಲ್ಲದಿದ್ದರೂ ಒಪ್ಪಿಕೊಂಡೆ.

ಇದಕ್ಕೆ ಒಂದು ಪುಟ್ಟ ಕಾರಣವೂ ಇತ್ತು. ನನ್ನ ಅಭಿಮಾನಿಗಳಿಗೆ ನನ್ನ ಬಾಲ್ಯದ ಬಗ್ಗೆ, ನನ್ನ ಸ್ಕೂಲ್ ಮತ್ತು ಕಾಲೇಜಿನ ದಿನಗಳ ಬಗ್ಗೆ ಅಪಾರ ಕುತೂಹಲವಿದೆ. ಇದನ್ನು ಯಾಕೆ ಹೇಳುತ್ತಿದ್ದೇನೆ ಅಂದರೆ, ನಾನು ರಾಜ್ಯದ ಯಾವುದೇ ಮೂಲೆಯಲ್ಲಿ ಶೂಟಿಂಗಿಗೆ ಹೋದಾಗ, ಜನ ನನ್ನನ್ನು ಈ ಬಗ್ಗೆ ಕೇಳುತ್ತಲೇ ಇರುತ್ತಾರೆ. ಮುಂದೆ ಯಾವತ್ತಾದರೂ ಒಂದು ದಿನ ಅವಕಾಶ ಸಿಕ್ಕಾಗ ಇದನ್ನೆಲ್ಲ ಹೇಳಿದರಾಯಿತು ಅಂದುಕೊಂಡಿದ್ದೆ. ಆದರೆ ಅದನ್ನು ಈಗಲೇ ಹೇಳಲು ನಿರ್ಧರಿಸಿದ್ದಕ್ಕೆ ಮತ್ತೆ ಅಪ್ಪಾಜಿಯವರೇ ಕಾರಣ.

ಸಾಂತ್ವನಗೊಳಿಸುತ್ತಾ ಬೆಂಗಳೂರಿಗೆ ಕರೆತಂದಳು. ಇದಾದ ನಂತರ ಬೆಂಗಳೂರಿನಲ್ಲಿ ಮಾತ್ರವಲ್ಲ, ಇಡೀ ಕರ್ನಾಟಕದಲ್ಲೇ ಏನೇನಾಯಿತು ಅಂತ ಎಲ್ಲರಿಗೂ ಗೊತ್ತು.

ಅವತ್ತು ಸಮಸ್ತ ಕನ್ನಡಿಗರು ತೋರಿಸಿದ ಅನುಕಂಪ, ವ್ಯಕ್ತಪಡಿಸಿದ ಪ್ರೀತಿ, ತಮ್ಮ ಹತ್ತಿರದವರನ್ನೇ ಕಳೆದುಕೊಂಡಂತೆ ಅನುಭವಿಸಿದ ನೋವು ಇದನ್ನೆಲ್ಲ ನೋಡಿ ನಾನು ಮೂಕನಾದೆ. ನನಗೆ ಗೊತ್ತು, ಅಪ್ಪಾಜಿ

ನಿರೂಪಣೆ: ಸದಾಶಿವ ಶೆಣೈ

ಯವರ ಬಗ್ಗೆ ಜನರಲ್ಲಿ ಇದ್ದ ಅಭಿಮಾನ ಅಪಾರವಾದದ್ದು ಎಂದು. ನನ್ನ ಮತ್ತು ನಮ್ಮ ಕುಟುಂಬದ ಅತ್ಯಂತ ನೋವಿನ ಕ್ಷಣಗಳಲ್ಲಿ ನಮಗೆ ಧೈರ್ಯ ತುಂಬಿದ ಸಮಸ್ತ ಕನ್ನಡಿಗರಿಗೆ ನಾನು ಈ ಸಂದರ್ಭದಲ್ಲಿ ಹೃದಯ ಪೂರ್ವಕ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ನಿಮ್ಮ ಋಣವನ್ನು ಭರಿಸಲು ನನ್ನಿಂದ ಖಂಡಿತ ಸಾಧ್ಯವಿಲ್ಲ. ನಿಮ್ಮ ಈ ಪ್ರೀತಿಯ ಭಾರದ ಎದುರು ನಾನು ಸಣ್ಣವ ಅನ್ನಿಸುತ್ತಿದೆ.

ಅಂದು ಹೊರ ರಾಜ್ಯದವರು ಅಪ್ಪಾಜಿ ಕನ್ನಡಿಗರ ಮೇಲೆ ಇಷ್ಟೊಂದು ಪ್ರಭಾವ ಬೀರಿದ್ದು ಹೇಗೆ ಎಂದು ಪ್ರಶ್ನಿಸುತ್ತಿದ್ದದ್ದನ್ನು ಟಿವಿಗಳಲ್ಲಿ ನೋಡಿದೆ. ಅಪ್ಪಾಜಿಯವರು ಕನ್ನಡಿಗರ ಆತ್ಮದ, ಅಂತರಂಗದ ಭಾಗವಾಗಿದ್ದರು ಎಂದು ಅವರಿಗೆ ಆಗಲೇ ಗೊತ್ತಾಗಿದ್ದು.

ಇಂತಹ ಪ್ರಭಾವಿ ತಂದೆಯನ್ನು ಪಡೆದಿದ್ದ ನಾವು



ಈ ದೇಹದಿಂದ ದೂರವಾದೆ ಏಕೆ ಆತ್ಮನೆ!

ಅದನ್ನು ದುಃಖ, ನೋವಿನ ಮಡುವಿನಲ್ಲಿ ಆರಂಭಿಸುತ್ತಿದ್ದೇನೆ.

ಯಾವ ಸುದ್ದಿಯನ್ನು ನನ್ನ ಜೀವಮಾನದಲ್ಲಿ ಕೇಳಲೇಬಾರದು ಅಂದುಕೊಂಡಿದ್ದೆನೋ ಆ ಸುದ್ದಿ ನನ್ನ ಕಿವಿಗಳಿಗೆ ಅಪ್ಪಳಿಸಿದ್ದು ನಾನು ಹಂಪಿಯಲ್ಲಿ 'ಕುಮಾರರಾಮ' ಸಿನಿಮಾದ ಶೂಟಿಂಗ್‌ನಲ್ಲಿದ್ದಾಗ. ಆ ಕ್ಷಣ ಆಕಾಶವೇ ನನ್ನ ತಲೆ ಮೇಲೆ ಕಳಚಿ ಬಿದ್ದಂತಾಯಿತು, ನಾನು ನಿಂತಿದ್ದ ಭೂಮಿಯೇ ನಡುಗಿದಂತಾಯಿತು. ನನ್ನ ಪ್ರೀತಿಯ ಅಪ್ಪಾಜಿ ನಮ್ಮನ್ನು, ತಮ್ಮ ಅಪಾರ ಅಭಿಮಾನಿ ದೇವರುಗಳನ್ನು ಬಿಟ್ಟು ಹೊರಟು ಹೋಗಿದ್ದರು.

ಅಪ್ಪಾಜಿ ನಮಗೆಲ್ಲಾ ಸ್ಫೂರ್ತಿಯ ಸೆಲೆಯಾಗಿದ್ದರು. ಅವರೇ ನನ್ನ ಗುರು, ಗೆಳೆಯ, ಮಾರ್ಗದರ್ಶಕ, ಫಿಲಾಸಫರ್ ಎಲ್ಲಾ. ಅಪ್ಪಾಜಿ ಎಂಬ ಆಲದಮರದ ಕೆಳಗೆ ಬೆಳೆದವರು, ಕುಣಿದಾಡಿದವರು ನಾವು. ಈಗ ಆ ಆಲದಮರವೇ ಇಲ್ಲ. ಒಂದು ರೀತಿಯ ಶೂನ್ಯ ನಮ್ಮನ್ನೆಲ್ಲ ಕಾಡುತ್ತಿದೆ. ಅಪ್ಪಾಜಿಯವರ ಮಗನಾಗಿ ಹುಟ್ಟಿದ್ದು ನನ್ನ ಏಳೇಳು ಜನ್ಮದ ಪುಣ್ಯ ಎಂದು ಭಾವಿಸಿರುವ ನಾನು ಇವತ್ತು ಅವರನ್ನು ಕಳೆದುಕೊಂಡ ನೋವಿನಲ್ಲಿ ಮುಳುಗಿಹೋಗಿದ್ದೇನೆ. ನಾನು ಸಾಹಿತಿ



ಕಳೆದ ವರ್ಷದ ಹುಟ್ಟುಹಬ್ಬದಲ್ಲಿ ರಾಜ್‌ಗೆ ಸಿಹಿ ತಿನ್ನಿಸುತ್ತಿರುವ ಶಿವರಾಜ್

ಅದೇನೆಂದರೆ, ಇದೇ ಏಪ್ರಿಲ್ 24ಕ್ಕೆ ಅಪ್ಪಾಜಿಯವರ 74ನೇ ಹುಟ್ಟುಹಬ್ಬ, ನನ್ನ ಜೀವನದ ಬಹುಮುಖ್ಯ ಅಂಗವಾಗಿದ್ದ ಅವರ ಬಗ್ಗೆ ಹೇಳುತ್ತಾ ನನ್ನ ಆತ್ಮಕತೆ ಪ್ರಾರಂಭಿಸಿದರೆ, ಅದು ನಾನು ಅವರಿಗೆ ನೀಡುವ ಹುಟ್ಟುಹಬ್ಬದ ಉಡುಗೊರೆ ಅಂದುಕೊಂಡಿದ್ದೆ. ಆದರೆ ನನ್ನ ಈ ಚಿಕ್ಕ ಆಸೆಯೂ ಈಡೇರಲಿಲ್ಲ. ಇದನ್ನು ನೋಡುವುದಕ್ಕೆ ಮುನ್ನವೇ ಅಪ್ಪಾಜಿ ಹೊರಟು ಹೋದರು.

ನನ್ನ ಮನಃಸ್ಥಿತಿ ಈಗ ಹೇಗಿದೆ ಎಂದರೆ, ನನ್ನ ಜೀವನದಲ್ಲೇ ಮೊದಲ ಬಾರಿಗೆ ಒಂದು ರೀತಿಯ ಜಿಗುಪ್ಸೆ ನನ್ನನ್ನು ಕಾಡುತ್ತಿದೆ. ಈ ಬಣ್ಣದ ಲೋಕ, ಈ ಹಣ-ಸಂಪತ್ತು, ಈ ತಾರಾ ಮೌಲ್ಯ ಇದ್ಯಾವುದರ ಬಗ್ಗೆಯೂ ನನ್ನಲ್ಲೀಗ ಒಂದಿಷ್ಟೂ ಆಸಕ್ತಿ ಇಲ್ಲ. ನನ್ನ ಅಪ್ಪಾಜಿ ನನ್ನ ಜೊತೆ ಇಲ್ಲ ಅಂದ ಮೇಲೆ ಇದೆಲ್ಲ ಇದ್ದೂ ಏನು ಸುಖ ಅನ್ನಿಸುತ್ತಿದೆ.

ಅಪ್ಪಾಜಿ ಇನ್ನಿಲ್ಲ ಅಂತ ಗೊತ್ತಾದಾಗ ನಾನು ಶಾಕ್ ಆಗಿ ಕೂತೆ. ನನ್ನ ಪತ್ನಿ ಗೀತಾ ನನ್ನನ್ನು

ಸುಖವಾಗಿ, ಆರಾಮಾಗಿ, ಹಣದ ಸುಪ್ಪತ್ತಿಗೆಯಲ್ಲಿ ಬೆಳೆದೆವು ಎಂದು ನೀವು ಭಾವಿಸಿದ್ದರೆ ಅದು ತಪ್ಪಾಗುತ್ತದೆ. ಹೌದು, ನಾನು ಕಾಲೇಜು ಸೇರುವ ಹೊತ್ತಿಗೆ ಅಪ್ಪಾಜಿ ದೊಡ್ಡ ಸ್ಟಾರ್ ಆಗಿದ್ದರು. ಆದರೂ ನನಗೆ ನನ್ನ ಕಸಿನ್‌ಗಳಿಗಿಂತ ಹೆಚ್ಚು ಪಾಕೆಟ್ ಮನಿಯನ್ನೇನು ಕೊಡುತ್ತಿರಲಿಲ್ಲ. ಅಷ್ಟೇ ಅಲ್ಲ, ನಾನೂ ಕೂಡ ಎಲ್ಲರಂತೆ ಬಸ್‌ನಲ್ಲೇ ಕಾಲೇಜಿಗೆ ಹೋಗುತ್ತಿದ್ದೆ. ಇದರಿಂದ ನಾವೆಲ್ಲಾ ಜನರ ನಡುವೆಯೇ ಬೆಳೆದೆವು ಅನ್ನಿಸುತ್ತೆ. ಸಾಮಾನ್ಯ ಜನರಂತೆ, ಸಾಮಾನ್ಯ ಜನರ ನೋವು, ನಲಿವುಗಳನ್ನು ನೋಡಿಕೊಂಡೇ ನಾವೆಲ್ಲ ಬೆಳೆದದ್ದು.

ಎಲ್ಲರಿಗೂ ಗೊತ್ತಿರುವಂತೆ ಅಪ್ಪಾಜಿಯವರು ತಮ್ಮ ಜೀವನದ ಉದ್ದಕ್ಕೂ ಸರಳತೆಯನ್ನು ಪಾಲಿಸಿಕೊಂಡು ಬಂದವರು. ಆ ಸರಳತೆಯನ್ನು ನಮಗೂ ಕಲಿಸಿದರು. ಅವರು ಶೂಟಿಂಗ್‌ನಲ್ಲಿ ಎಷ್ಟೇ ಬಿಜಿ ಆಗಿದ್ದರೂ ಎಂದೂ ಮಕ್ಕಳನ್ನು, ಅಮ್ಮನನ್ನು, ತಮ್ಮ ಒಡಹುಟ್ಟಿದವರನ್ನು ಕಡೆಗಣಿಸಿದವರೇ ಅಲ್ಲ, ಬದಲಾಗಿ ಎಲ್ಲರೂ ಒಟ್ಟಿಗೆ ಊಟ ಮಾಡಬೇಕೆಂದೇ ಹೇಳುತ್ತಿದರು. ಹಾಗೆ ಊಟ ಮಾಡುವಾಗ ಎಲ್ಲರೊಂದಿಗೆ ಮಾತನಾಡುತ್ತ, ತಮಾಷೆ ಮಾಡುತ್ತಾ ಆನಂದಿಸುತ್ತಿದ್ದರು.

ಇವತ್ತು ನಾನು ಈ ಎತ್ತರಕ್ಕೆ ಬೆಳೆದಿದ್ದರೆ ಅದಕ್ಕೆಲ್ಲಾ ನನ್ನ ಅಪ್ಪಾಜಿಯೇ ಕಾರಣ. ಅವರು ತೋರಿಸಿದ ಪ್ರೀತಿಯ ಒರತೆ ನನ್ನಲ್ಲಿನ್ನೂ ಬತ್ತಿಹೋಗಿಲ್ಲ, ಅಷ್ಟೇ ಅಲ್ಲ, ಅವರು ನನ್ನಲ್ಲಿ ಬಿತ್ತಿದ ಮೌಲ್ಯಗಳು, ತಿಳಿಸಿದ ಪಾಠಗಳು, ರೂಪಿಸಿದ ಶಿಸ್ತು, ತೋರಿಸಿಕೊಟ್ಟ ಸರಳತೆ ಇವನ್ನೆಲ್ಲ ನನ್ನ ಜೀವನದಲ್ಲಿ ಮರೆಯಲಾಗುವುದಿಲ್ಲ. ಇವೆಲ್ಲವನ್ನು ಅತ್ಯಂತ ಸಂತೋಷ ಮತ್ತು ಹೆಮ್ಮೆಯಿಂದ ನಿಮ್ಮೊಂದಿಗೆ ಹಂಚಿಕೊಳ್ಳಬೇಕು ಅಂತ ನೋಟ್ಸ್ ಮಾಡಿಟ್ಟುಕೊಂಡಿದ್ದೆ. ಆದರೆ ಇವತ್ತು ನಾನು ಸಂತೋಷದ ಬದಲಾಗಿ ದುಃಖದಲ್ಲಿದ್ದೇನೆ. ಆದರೂ 'ಲಂಕೇಶ್' ವಾರಪತ್ರಿಕೆಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಈ ಆತ್ಮಕತೆಯನ್ನು ಆರಂಭಿಸಿದ್ದೇನೆ. ನನ್ನ ಜೀವನದ ಸಂತೋಷ, ಸಂಭ್ರಮ, ನೋವು, ನಲಿವಿನ ಕ್ಷಣಗಳನ್ನು ನಿಮ್ಮ ಮುಂದೆ ಮನಬಿಚ್ಚಿ ತೆರೆದಿಡುತ್ತೇನೆ. ಅಭಿಮಾನಿಗಳೇ ನನ್ನ ದೇವರು ಎಂದು ಅಪ್ಪಾಜಿ ಹೇಳುತ್ತಿದ್ದರು. ಹಾಗೆಯೇ ನಾನು ನನ್ನ ಜೀವನ ಕಥನವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ.

ಈ ನನ್ನ ಆತ್ಮಕಥನವನ್ನು ನನ್ನ ಪ್ರೀತಿಯ ಅಪ್ಪಾಜಿಯವರಿಗೆ ಪ್ರೀತಿ ಪೂರ್ವಕವಾಗಿ ಅರ್ಪಿಸುತ್ತಿದ್ದೇನೆ. ಅಪ್ಪಾಜಿ, ಇದನ್ನು ನೀವು ಅಲ್ಲಿಂದಲೇ ಓದುತ್ತೀರಿ ತಾನೆ???

(ಮುಂದಿನ ವಾರಕ್ಕೆ)

ಕ್ಲಾಸ್ ಆಕ್ಟರ್ ಮಾಸ್ ಹೀರೋ

ಕನ್ನಡಿಗರ ಅಚ್ಚುಮೆಚ್ಚಿನ ನಟ ಶಿವಣ್ಣ ಸಿನಿಮಾಗೆ ಬ್ಬಾಗ ಅವರಿಗೆ ಕೇವಲ ಇಪ್ಪತ್ಮೂರು ವಯಸ್ಸು. ಖಕಡಿಮೆ ಇಪ್ಪತ್ತು ವರ್ಷಗಳ ಹಿಂದಿನ ಮಾತಿದು. ಅವಧಿಯಲ್ಲಿ ರಾಜ್ ನಮ್ಮನ್ನು ಲಿದ್ದಾರೆ. ವಿಷ್ಣು ಅಂಬರೀಷ್ ರ್‌ಮೆಂಟ್ ಹತ್ತಿರತ್ತಿರ ಾರೆ. ಅನಂತ್‌ನಾಗ್ ಹಿರಿಯರ ತ್ರಗಳನ್ನು ಒಪ್ಪಿಕೊಳ್ಳುತ್ತಿದ್ದಾರೆ. ತ್ತೊಂದೆಡೆ ಇವತ್ತಿನ ಕನ್ನಡ ಮಾಗಳಲ್ಲಿ ಪುನೀತ್, ೀಪ್, ದರ್ಶನ್, ಶ್ಯಾಂ, ರಳಿ, ವಿಜಯ ರಾಘವೇಂದ್ರ ಂತಾದ ಹೊಸ ಚಾರ್ಮಿಂಗ್ ಖಗಳು ಕಾಣಿಸಿಕೊಂಡಿವೆ. ಈ ಡು ಜನರೇಷನ್ ಹೀರೋಗಳ ವಿನ ಸೇತುವೆಯಂತೆ 90ರ ಕದ ಅವಧಿಯಲ್ಲಿ ಬೆಳ್ಳಿತೆರೆಯ ಲೆ ಕಾಣಿಸಿಕೊಂಡವರೆ ರಾಜ್‌ಕುಮಾರ್.



ರಾಜ್‌ಕುಮಾರ್ ಕುಟುಂಬ

ಹಳ್ಳಿ ಹುಡುಗನ ಪಾತ್ರದಿಂದ ದು ಡಾನ್ ಗೆಟ್ಟಪ್ಪಿನವರೆಗೂ, ಹುಗಾಟದ ರೋಲ್‌ಗಳಿಂದ ದು ಗಂಭೀರ ಪಾತ್ರಗಳನ್ನೂ ಯಿಸಿ ಸೈ ಎನಿಸಿಕೊಂಡಿರುವ ಶಿವರಾಜ್‌ಗೆ ಸಿನಿಮಾ ನಾಗಬೇಕೆಂಬ ಆಸೆಯೇನು ಮೊದಲಿಂದಲೂ ಲ್ಲ ಎಂದರೆ ನಿಮಗೆ ಆಶ್ಚರ್ಯವಾಗಬಹುದು. 62 ರಲ್ಲಿ ಶಿವಣ್ಣ ಹುಟ್ಟಿದಾಗ ಅಷ್ಟರಲ್ಲಾಗಲೇ ತ ಸಿನಿಮಾ ರಂಗದಲ್ಲಿ ರಾಜ್‌ಕುಮಾರವರ ಸುವರ್ಣ ಗದ ಅಲೆ ಶುರುವಾಗಿತ್ತು.

ಮದ್ರಾಸಿನಲ್ಲಿ ಎಲ್ಲಾ ಸಾಮಾನ್ಯರ ಮಕ್ಕಳಂತೆ ಪರ್‌ಸ್ಟಾರ್ ರಾಜ್‌ರವರ ಹಿರಿಯ ಮಗ ಶಿವಣ್ಣನೂ ನಲ್ಲೇ ಶಾಲೆಗೆ ಹೋಗುತ್ತಿದ್ದ. ಎಲ್ಲಾ ಚಿಕ್ಕ ಮಕ್ಕಳು ು ಕಾಣುವಂತೆ ಶಿವರಾಜ್ ಕೂಡ 'ನಾನೂ ಸಿನಿಮಾ ರೋ ಆಗಬೇಕು, ಕೇಡಿಗಳನ್ನು ಚಚ್ಚಿ ಕೆಡವಿ.... ್ದಿ' ಆಸೆ ಪಟ್ಟಿದ್ದರಾ ಎಂಬುದರ ಬಗ್ಗೆ ಈಗ ಶಿವರಾಜ್‌ಕುಮಾರ್‌ರವರೇ ಹೇಳಬೇಕಿದೆ. ಆದರೆ ರುತಿ ಪಾರ್ವತಮ್ಮ ರಾಜ್‌ಕುಮಾರ್‌ರವರು ಸಿಕೊಂಡಿರುವಂತೆ ಬಹುಶಃ 1974 ರಲ್ಲೆಂದು ುತ್ತದೆ.....

ವಿಜಯ್ ನಿರ್ದೇಶನದ 'ಶ್ರೀನಿವಾಸ ಕಲ್ಯಾಣ' ಮಾದಲ್ಲಿ ಶಿವಣ್ಣನಿಗೊಂದು ಪುಟ್ಟ ಬಾಲಕನ ಪಾತ್ರ ಡುವಂತೆ ಒಪ್ಪಿಸಲಾಗಿತ್ತು. ಆದರೆ ಆದೇನಾಯಿತೋ ೇ ಶಿವಣ್ಣ ಕ್ಯಾಮರಾ ಎದಿರು ಬಂದು ನಿಲ್ಲಲಿಲ್ಲ.

ನಂತರ ಬಿಎಸ್ಸಿ ಓದುತ್ತಿದ್ದಾಗ, ಮುಂದೇನೆಂಬ ಪ್ರಶ್ನೆ ಬಂದಾಗ ಶಿವಣ್ಣ ಸಿನಿಮಾದಲ್ಲೇ ತಮ್ಮ ಕೆರಿಯರ್ ರೂಪಿಸಿಕೊಳ್ಳುವ ನಿರ್ಧಾರ ಮಾಡಿದರು. 1985 ರಲ್ಲಿ 'ಆನಂದ್' ಬಂತು. ಕನ್ನಡ ಬೆಳ್ಳಿತೆರೆಗೊಂದು ಯುವ ಕಳೆ ದಕ್ಕಿತು.

ಶಿವಣ್ಣ ಶಿವರಾಜ್‌ಕುಮಾರ್ ಆಗಿ, ಮಲ್ಲೇಶ್ವರದ ಎಸ್ಸೆಲ್ಸಿ ಹುಡುಗಿ ಸುಧಾರಾಣಿ ಹೀರೋಯಿನ್ ಆಗಿದ್ದ 'ಆನಂದ್'ನನ್ನು ಕನ್ನಡ ಚಿತ್ರ ರಸಿಕರು ಖುಷಿಯಾಗಿ ಬರ ಮಾಡಿಕೊಂಡರು. ಹಾಡು, ಡ್ಯಾನ್ಸ್, ಫೈಟು ಎಲ್ಲದರಲ್ಲೂ ಲವಲವಿಕೆಯಿಂದ ನಟಿಸಿದ ಶಿವರಾಜ್ ಈಗ ಸೆಂಚುರಿ ಬಾರಿಸಿದ್ದಾರೆ. ಇವತ್ತಿಗೂ 'ಆನಂದ್' ಎಲ್ಲರೂ ಕುಳಿತು ನೋಡಬಹುದಾದ ಬೆಸ್ಟ್ ಕಮರ್ಷಿಯಲ್ ಸಿನಿಮಾ. ಅದರ ಬೆನ್ನಿಗೇ 'ರಥಸಪ್ತಮಿ', 'ಮನಮೆಚ್ಚಿದ ಹುಡುಗಿ' ಬಂದವು. ಅವೂ ಸೂಪರ್ ಹಿಟ್ ಆದವು. ಈ ಮೂಲಕ ಕನ್ನಡ ಸಿನಿಮಾಕ್ಕೊಬ್ಬ ಕ್ಲಾಸ್ ಆಕ್ಟರ್ ಹಾಗೂ ಮಾಸ್ ಹೀರೋ ಬಂದಂತಾಯಿತು.

ಪಕ್ಕದ ಮನೆ ಹುಡುಗ ಶಿವು

ಸಿನಿಮಾಗೆ ಕಾಲಿಟ್ಟ ತಕ್ಷಣವೇ ಸಿಕ್ಕ ಯಶಸ್ಸು, ಅದೂ ಹ್ಯಾಟ್ರಿಕ್ ಸಕ್ಸಸ್ ಶಿವರಾಜ್‌ಗೆ ಕನ್ನಡ ಸಿನಿಮಾ ಇಂಡಸ್ಟ್ರಿಯೊಳಗೆ ಭದ್ರ ತಳಹದಿ ಒದಗಿಸಿಕೊಟ್ಟಿತು. ಈ ಇಪ್ಪತ್ತು ವರ್ಷಗಳಲ್ಲಿ ಶಿವಣ್ಣನ ಸಿನಿಮಾ ಕೆರಿಯರ್‌ನ ಏಳು ಬೀಳುಗಳನ್ನು ನೋಡಿದಾಗ ಚೂರೂ ಬದಲಾಗಿರದ ಅವರ ವ್ಯಕ್ತಿತ್ವದ ಒಂದು ವಿಚಾರ ಏನೆಂದರೆ ಶಿಸ್ತು, ಸರಳತೆ ಹಾಗೂ ವಿನಯಗಳು.

ಈ ಮಾತನ್ನು ಸಿನಿಮಾ ಉದ್ಯಮಿಗಳು ಮಾತ್ರವಲ್ಲ ಮಾಮೂಲಿ ಜನ ಸಹ ಆಡುತ್ತಾರೆ.

ಇನ್ನೂ ಕಲಾವಿದನಾಗಿ ವೃತ್ತಿಪರತೆ, ಸಮಯ ಪ್ರಜ್ಞೆಗೆ ಶಿವರಾಜ್ ಇಡೀ ಇಂಡಸ್ಟ್ರಿಯಲ್ಲಿ ಎಲ್ಲರಿಗೂ ಮಾದರಿಯಾಗಿದ್ದಾರೆ. ಬಹುಶಃ ಸೆಟ್‌ನಲ್ಲಿ ಎಲ್ಲರೂ ಗಮನಿಸಿರುವ ಅವರ ಒಂದೇ ಒಂದು ಆಶಿಸ್ತೆಂದರೆ....!

ಲೆಕ್ಕಕ್ಕೆ ಸಿಗದಷ್ಟು ಕಾಫಿ-ಟೀ ಸೇವನೆ! ಶಿವರಾಜ್ ಕುಮಾರ್ ಈಗದನ್ನು ಕಡಿಮೆ ಮಾಡಿರಲೂಬಹುದು.

ಇನ್ನು ಈ ಇಷ್ಟು ವರ್ಷ ಕಾಲ ತನ್ನ ಮೈಕಟ್ಟನ್ನು ಅಚ್ಚುಕಟ್ಟಾಗಿ ಮೈಂಟೇನ್ ಮಾಡಿಕೊಂಡು ಬಂದಿರುವ



ಶಿವರಾಜ್ ಕುಮಾರ್ ಕುಟುಂಬ



ನೆನಪಿನ ಬಿಡಿ ಚಿತ್ರಗಳು

ಡಾ. ರಾಜ್ ಕುರಿತಾದ ಅಚ್ಚುಕಟ್ಟಾದ, ಮನಸ್ಸಿಗೆ ತಾಕುವಂತ ಒಂದಾದರೂ ಪುಸ್ತಕ ಅಥವಾ ಬರಹ ಕನ್ನಡದಲ್ಲಿದೆಯಾ ಎಂದು ಹುಡುಕಿ ನೋಡಿದರೆ ನಿರಾಶೆಯಾಗುತ್ತದೆ. ಅಂತದ್ದೊಂದು ಬರಹ ನಿಜಕ್ಕೂ ಬೇಕಿದೆ.

70ರ ದಶಕದಲ್ಲಿ ಸ್ವತಃ ಡಾ. ರಾಜ್ ಆಗಿನ ಪ್ರಸಿದ್ಧ ಸಿನಿಮಾ ಪತ್ರಿಕೆ 'ವಿಜಯ ಚಿತ್ರ'ದಲ್ಲಿ 'ಕಥಾನಾಯಕನ ಕತೆ' ಎಂಬ ಶೀರ್ಷಿಕೆಯಡಿ ತಮ್ಮ ಬದುಕಿನ ಕತೆ ಹೇಳಿದ್ದರು. ಆದರೆ ಅದು ಅಪೂರ್ಣವಾಗಿ ನಿಂತು ಹೋಗಿತ್ತು.

ಅದಾದ ನಂತರ ರಾಜ್ ಬಗ್ಗೆ ಜಗನ್ನಾಥ ರಾವ್ ಬಹುಳೆ, ಅ.ನಾ. ಪ್ರಹ್ಲಾದ ರಾವ್, ಹಾರೋಹಳ್ಳಿ ಗುರುಮೂರ್ತಿ ಕೆಲ ಪುಸ್ತಕ, ಅಧ್ಯಯನ ಬರಹ ಪ್ರಕಟಿಸಿದ್ದಾರೆ.


ಇವೆಲ್ಲಕ್ಕಿಂತಾ ಚೆನ್ನಾಗಿರುವ, ಕುತೂಹಲಕಾರಿ ನಿರೂಪಣೆ ಈಗ ಬರುತ್ತಿರುವುದು ಕನ್ನಡ ಪ್ರಭದಲ್ಲಿ, ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್‌ರವರ ನೆನಪಿನ ಮಾತುಗಳು, ರಾಜ್, ಸಿನಿಮಾ ಉದ್ಯಮ, ಕುಟುಂಬದ ಎಲ್ಲಾ ವಿಚಾರಗಳೂ ಅಲ್ಲಿ ಮನೋಜ್ಞವಾಗಿ ಮೂಡಿಬರುತ್ತಿವೆ. ಇದಕ್ಕೀಗ ಜೊತೆಯಾಗುತ್ತಿರುವುದು 'ಲಂಕೇಶ್'ನಲ್ಲಿ ಶಿವರಾಜ್‌ಕುಮಾರ್ ಹೇಳಲಿರುವ ತಮ್ಮ ಜೀವನದ ಕತೆ. ಸಹಜವಾಗೇ ಇದೂ ಸಹ ರಾಜ್ ಮತ್ತವರ ಕುಟುಂಬದ ಸುತ್ತಲೇ ಅನಾವರಣಗೊಳ್ಳಲಿದೆ.

ಶಿವರಾಜ್ ಹೆಸರಲ್ಲಿ ಒಂದು ಪತ್ರಿಕೆ

ನಮ್ಮ ಬಳಗದ ಗೆಳೆಯ ರಾ. ಪ್ರವೀಣ್ ತ್ತಿದ್ದ ಪತ್ರಿಕೆ ಅದು. ಹೆಸರು 'ಹ್ಯಾಟ್ರಿಕ್ ರೋ ಶಿವರಾಜ್‌ಕುಮಾರ್'.

ಡಾ. ರಾಜ್ ಹಾಗೂ ಶಿವರಾಜ್ ಸಾರರ ಪಕ್ಕಾ ಅಭಿಮಾನಿಯಾದ, ಅದಕ್ಕೂ ಾಗಿ ಕನ್ನಡದ ಬಗ್ಗೆ ಹೃದಯದ ಾ ಪ್ರೀತಿ ಇಟ್ಟುಕೊಂಡಿರುವ ಪ್ರವೀಣ್ ಲ್ಲಿ ಈ ಮಾಸ ಪತ್ರಿಕೆ ಶುರು ದ್ದರು. ಆದರೆ ಅದು ಅಷ್ಟು ಕ್ಲಿಕ್ ... ಕೊನೆಗೆ ಕೆಲ ಕಾಲ 'ಹಾಯ್ ಬೆಂಗಳೂರ್'.





'ಲಂಕೇಶ್'ನಲ್ಲಿದ್ದ ಪ್ರವೀಣ್ ಈಗ ...

ಶಿವರಾಜ್ ಶಾಲಾ-ಕಾಲೇಜು ದಿನಗಳಿಂದಲೂ ಕ್ರೀಡಾ ಪ್ರೇಮಿಯಾಗಿದ್ದವರು. ಕ್ರಿಕೆಟ್, ಟೆನಿಸ್, ಬೆವರಿಳಿಸುವ ಷಟಲ್ ಕಾಕ್ ಅವರ ಪ್ರಿಯವಾದ ಆಟಗಳು. ಶಿವರಾಜರ ಅತ್ತೆಯ ಮಗ ಅರ್ಥಾತ್ ಡಾ. ರಾಜ್‌ರ ತಂಗಿ ಶಾರದಮ್ಮನವರ ಮಗ ನಟ ಬಾಲರಾಜ್ ಬಾಲ್ಯದಿಂದಲೂ ರಾಜ್ ಮನೆಯಲ್ಲೇ ಬೆಳೆದವರು. ಬಾಲರಾಜ್ ಹಾಗೂ ಶಿವರಾಜ್ ಹೆಚ್ಚು ಕಡಿಮೆ ಒಂದೇ ವಯಸ್ಸಿನವರು. ಒಟ್ಟಿಗೆ ಕ್ರಿಕೆಟ್ ಆಡಿ ಬೆಳೆದವರು. ಬಾಲರಾಜ್ ಒಂದೆಡೆ ಹೇಳಿರುವಂತೆ ಶಿವರಾಜ್ ತನ್ನ ಕಾಲೇಜು ದಿನಗಳಲ್ಲಿ ಒಳ್ಳೇ ಆಲ್‌ರೌಂಡರ್ ಆಗಿದ್ದರಂತೆ.

ಆ ದೃಷ್ಟಿಯಿಂದ ಹೇಳಬೇಕೆಂದರೆ ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಈಗಲೂ ನಮ್ಮ ಪಕ್ಕದ ಮನೆ ಹುಡುಗ ನಂತೆ.... ಅಹಂ, ಧಿಮಾಕು ಏನೊಂದೂ ಇರದ ಸಾಮಾನ್ಯನಂತೆ ಇದ್ದು ಬಿಡಬಲ್ಲಾತ.

ಈಗ್ಗೆ ಒಂದು ವರ್ಷದ ಹಿಂದಿನ ಒಂದು ಘಟನೆ ಬಗ್ಗೆ ಹೇಳಬೇಕೆಂದರೆ, ಪ್ರಖ್ಯಾತ ಕ್ರಿಕೆಟ್ ಆಟಗಾರ ಸ್ಟೈಯರ್ ಕಿರ್ಮಾನಿ ಪ್ರತಿ ವರ್ಷ ಬೆಂಗಳೂ... ಸಂ ಹುಡುಗರಿಗಾಗೇ ಒಂದು ಕ್ರಿಕೆಟ್ ಟೂರ್ನಿಮೆಂಟ್ ...

ಹೋಗಿದ್ದರು. ಶಿವರಾಜ್ ಬಂದಾಗ ಕ್ರಿಕೆಟ್ ಹುಡುಗರ ಖುಷಿ ಹೇಳತೀರದು. ಕೈ ಕುಲುಕುವವರು, ಅಪ್ಪಿಕೊಳ್ಳುವವರು...

ಶಿವರಾಜ್‌ಕುಮಾರ್ ಆ ಹುಡುಗರ ಗಲೀಜು ಬಟ್ಟೆ, ಕೊಳಕು ಕೈ ಏನೊಂದಕ್ಕೂ ಮುಖ ಸಿಂಡರಿಸದೆ, ಬೇಜಾರು ಮಾಡಿಕೊಳ್ಳದೆ ಅವರೊಂದಿಗೆ ಬೆರೆತರು. ನಕ್ಕು ಮಾತಾಡಿಸಿ, ಕೈ ಕುಲುಕಿ ಬೆನ್ನು ತಟ್ಟಿ ಹೋದರು.

ಇದನ್ನೆಲ್ಲ ನೋಡುತ್ತಿದ್ದ ಕೆಲ ಪತ್ರಕರ್ತರಿಗೆ, ಸೂಕ್ಷ್ಮಜ್ಞರಿಗೆ ಅವತ್ತೇ ಇನ್ನೂ ಸ್ಪಷ್ಟವಾಗಿ ಕಾಣಿಸಿದ್ದು ಶಿವಣ್ಣನ ಹಂಬಲ್‌ನೆಸ್. ಅಭಿಮಾನ, ಪ್ರೀತಿ, ತೋರಿಸುವ ಮುಗ್ಧ ಜನರ ಜೊತೆ ಬೆರೆತು ಅದರಿಂದ ಸಿಗುವ ಖುಷಿಯನ್ನು ಶಿವರಾಜ್‌ಕುಮಾರ್ ಎಂದೂ ಮಿಸ್ ಮಾಡಿಕೊಳ್ಳುವುದಿಲ್ಲ.

ಯಾವ ಇಮೇಜಿನ ಹ್ಯಾಂಗೋವರ್‌ಗಳಿಲ್ಲದೆ, ಯಾರ ಜೊತೆಗಾದರೂ ಸರಿ ಆಕ್ಟ್ ಮಾಡುತ್ತೇನೆ ಎನ್ನುವ ಶಿವರಾಜ್‌ಕುಮಾರ್ ಮೊದಲಿಗೆ ಸಿನಿಮಾ ನಟನಾಗುವ ನಿರ್ಧಾರ ಮಾಡಲು ಕೊಂಚ ತಡ ಮಾಡಿರಬಹುದು. ಆದರೆ ಅವರಿಗೆ ಯಶಸ್ಸು ಸಿಗುವುದು ...

"ಉನ್ನತ ಶಿಕ್ಷಣದಲ್ಲಿ ಅದರಲ್ಲೂ ವೈದ್ಯಕೀಯ, IIT, IIMಗಳಂಥ ಕಡೆ ಮೀಸಲಾತಿ ನೀಡಿ, ಪ್ರತಿಭಾವಂತರ ಜೊತೆ SC-ST ಮತ್ತು OBC ಗಳನ್ನು ಸೇರಿಸುವುದರಿಂದ ಈ ದೇಶದ ಭವಿಷ್ಯ ಮತ್ತು ನಮ್ಮ ಭವಿಷ್ಯವೂ ಹಾಳಾಗುತ್ತದೆ"

-ಮೀಸಲಾತಿ ವಿರೋಧಿ ಹೋರಾಟದ ನೇತೃತ್ವ ವಹಿಸಿದ್ದ ವಿದ್ಯಾರ್ಥಿನಿ.

"ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ನೀಡಿದರೆ ಈ ದೇಶದ ಕೈಗಾರಿಕೆಗಳ ಸ್ಪರ್ಧಾತ್ಮಕತೆಯೇ ಹಾಳಾಗುತ್ತದೆ. ಹಾಗೂ ದೇಶದ ಆರ್ಥಿಕ ಪ್ರಗತಿಯೇ ಕುಂಠಿತವಾಗುತ್ತದೆ"

-CII ಅಧ್ಯಕ್ಷ.

"....ಆದ್ದರಿಂದಲೇ SC-ST ಮತ್ತು OBC ಗಳಿಗೆ ಹುದ್ದೆಗಳನ್ನು ಮೀಸಲಿಡುವುದು ಅವರಿಗೆ ನೀಡುತ್ತಿರುವ ರಿಯಾಯಿತಿಗಳೂ ಅಲ್ಲ ಅಥವಾ ಅವರಿಗೆ ಕೊಡುತ್ತಿರುವ ವಿಶೇಷ ಸೌಲಭ್ಯಗಳೂ ಅಲ್ಲ, ಬದಲಿಗೆ ಆ ಮೂಲಕ ಅವರಿಗೆ ನೀಡಲಾಗಿರುವ ಮೂಲಭೂತ ಹಕ್ಕುಗಳನ್ನು ಗುರುತಿಸಿದಂತಾಗುತ್ತದೆ ಅಷ್ಟೆ.."

-ಜಸ್ಟೀಸ್ ಚಿನ್ನಪ್ಪ ರೆಡ್ಡಿ

ಕಳೆದ ವಾರ ಮಾನವ ಸಂಪನ್ಮೂಲ ಇಲಾಖೆಯ ಮಂತ್ರಿ ಅರ್ಜುನ್ ಸಿಂಗ್ ಉನ್ನತ ಶಿಕ್ಷಣದಲ್ಲಿ ಅದರಲ್ಲೂ ನಿರ್ದಿಷ್ಟವಾಗಿ IIT, IIM,AIIMSS ನಂತಹ ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆಂದು(OBC) ಶೇ.22.5 ರಷ್ಟು ಸೀಟುಗಳನ್ನು ಮೀಸಲಿಡುವ ಪ್ರಸ್ತಾಪವನ್ನು ಮುಂದಿಟ್ಟದ್ದೇ ಬಂತು. ಇದ್ದಕ್ಕಿದ್ದಂತೆ ಮತ್ತೊಮ್ಮೆ ಈ ಭಾರತವೆಂಬ ದೇಶದ ನಾಗರಿಕತೆಯ ಎಲ್ಲಾ ವಿಕೃತಿಗಳು ಜಾತಿ ವಿದ್ವೇಷವಾಗಿ ಕಾರಿಕೊಳ್ಳುತ್ತಿವೆ. ಮೇಲ್ಜಾತಿ 'ಪ್ರತಿಭಾವಂತರ' ಮೇಲ್ಜಾತಿ ದುರಭಿಮಾನ, ಅಸಹನೆ ಮತ್ತು ದುರಹಂಕಾರಗಳು ಅಮಾನವೀಯ ಹಾಗೂ ಅನಾಗರಿಕ ಜನಾಂಗೀಯ ದ್ವೇಷವಾಗಿ ರಾಜಧಾನಿಗಳ ಬೀದಿಗಳಲ್ಲಿ ಪ್ರಕಟಗೊಳ್ಳಲು ಪ್ರಾರಂಭಿಸಿವೆ.

ಈ ಮೀಸಲಾತಿ ಪ್ರಸ್ತಾಪದ ಹಿಂದೆ ಆಡಳಿತರೂಢ ಕಾಂಗ್ರೆಸ್ಸಿಗೆ ನಿಜಕ್ಕೂ ಸಾಮಾಜಿಕ ನ್ಯಾಯದ ಕಾಳಜಿ ಇದೆ ಎಂಬುದನ್ನು ಒಂದು ದಶಕದ ಹಿಂದೆಯಷ್ಟೇ ಮಂಡಲ್ ವಿರೋಧಿ ಗಲಭೆಗಳಲ್ಲಿ ಮತ್ತು ಅದರ ಪರಿಣಾಮಕಾರಿ ಅನುಷ್ಠಾನವನ್ನು ತಡೆಹಿಡಿಯುವಲ್ಲಿ ಕಾಂಗ್ರೆಸ್ಸಿನ ಪಾತ್ರದ ನೆನಪಿರುವ ಯಾರೊಬ್ಬರೂ ನಂಬುವುದಿಲ್ಲ.

ಅದಕ್ಕೆ ತಕ್ಕ ಹಾಗೆ ಈ ಪ್ರಸ್ತಾಪ ಪತ್ರಿಕೆಗಳಲ್ಲಿ ಪ್ರಕಟವಾದ ಮರುದಿನದಿಂದಲೇ ಅದನ್ನು ವಿರೋಧಿಸಿ ಯು.ಪಿ.ಎ. ಮಂತ್ರಿಮಂಡಳದ ಹಲವಾರು ಸದಸ್ಯರೇ ಹೇಳಿಕೆ ನೀಡಿದರು. ವಿಜ್ಞಾನ ಮಂತ್ರಿ ಕಪಿಲ್ ಸಿಬಾಲ್ ಯಾವ ಕಾರಣಕ್ಕೂ ಈ ಪ್ರಸ್ತಾಪ ಜಾರಿಗೆ ತರುವುದಿಲ್ಲವೆಂದು ಹೇಳಿಕೆ ನೀಡಿ ಇದರಿಂದ ಭಾರತದ ಉದ್ಯಮಗಳ ಸ್ಪರ್ಧಾತ್ಮಕತೆಯೇ ಕುಂಠಿತವಾಗುತ್ತದೆಂದು ಉದ್ಯಮಿಗಳ ಜೊತೆ ಧ್ವನಿಗೂಡಿಸಿದರು. ಪ್ರಧಾನಿ ಮನಮೋಹನ್ ಸಿಂಗ್ ಜರ್ಮನಿ ಪ್ರವಾಸಕ್ಕೆ ಹೊರಡುವ ಮುನ್ನ ಯಾರೂ ಈ ಪ್ರಸ್ತಾಪದ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲವೆಂದು ಭರವಸೆ ನೀಡಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ ಈ ಪ್ರಸ್ತಾಪವನ್ನು ಕ್ಯಾಬಿನೆಟ್ ಮುಂದೆ ಚರ್ಚೆಗೆ ತರುವುದಕ್ಕೆ ಮುನ್ನವೇ ಮಾನ್ಯ ಮಂತ್ರಿಗಳು ಅದನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ್ದರಿಂದಲೇ ಈ ಪ್ರಸ್ತಾಪದ ಬಗ್ಗೆ ಸರ್ಕಾರ ಎಷ್ಟು ಗಂಭೀರವಾಗಿತ್ತು ಎಂಬುದು ತಿಳಿಯುತ್ತದೆ.

ಕೊನೆಗೆ ನಾಲ್ಕು ರಾಜ್ಯಗಳಲ್ಲಿ ಚುನಾವಣೆ ಇರುವುದರಿಂದ ಸರ್ಕಾರ ಈ ಬಗೆಯ ಆಶ್ವಾಸನೆ ನೀಡಲಾಗದೆಂದು ಕ್ಯಾಬಿನೆಟ್ ಕಾರ್ಯದರ್ಶಿಯೇ ಈ ಪ್ರಸ್ತಾಪವನ್ನು ಕ್ಯಾಬಿನೆಟ್ ಸಭೆಯ ಕಾರ್ಯಸೂಚಿಯಿಂದ ಅದನ್ನು ಕೈಬಿಟ್ಟರು. ಇದರಿಂದಲೇ ಸರ್ಕಾರದ ಈ ಪ್ರಸ್ತಾಪದ ಹಿಂದಿನ ಅಸಲಿ ಓಟಿನ ರಾಜಕಾರಣದ ಮರ್ಮ ಅರ್ಥವಾಗುತ್ತದೆ. ಅಂತಿಮವಾಗಿ, ಸರ್ಕಾರ ತನ್ನ ಪ್ರಸ್ತಾಪವನ್ನು ಮುಂದೂಡಿದೆ. ಒಂದೆಡೆ ಸಾಮಾಜಿಕ ನ್ಯಾಯವನ್ನು ಆಗ್ರಹಿಸುತ್ತಾ ದೆಹಲಿಯ ಬೀದಿಬೀದಿಗಳಲ್ಲಿ ಲಕ್ಷಾಂತರ ದಲಿತ ದಮನಿತ ಜನತೆ ರ್‍ಯಾಲಿಗಳನ್ನು, ಆಮರಣಾಂತ ಉಪವಾಸಗಳನ್ನು ನಡೆಸಿದರೂ ಕಣ್ಣು ತೆರೆದೂ ನೋಡದ ಸರ್ಕಾರ ದೆಹಲಿಯ ಕೆಲವು ಮೆಡಿಕಲ್ ಕಾಲೇಜುಗಳ ಸಂಪನ್ನ ಕುಲದ ಕೆಲವು ನೂರು ವಿದ್ಯಾರ್ಥಿಗಳು ಬೀದಿಗಿಳಿದು ಪ್ರತಿಭಟಿಸಿದ ಕೂಡಲೇ ಸ್ಪಂದಿಸಿ ತನ್ನ ಮೀಸಲು ಪ್ರಸ್ತಾಪವನ್ನು ಮುಂದೂಡಿದೆ. ದಮನಿತ ಜನತೆಯ ಪ್ರತಿಭಟನೆಗಳನ್ನು ಸಾರ್ವಜನಿಕರ ಶಾಂತಿಭಂಗ ಎಂದು ಮಾತ್ರ ವರದಿ ಮಾಡುವ ಮೇಲ್ಜಾತಿ, ಮೇಲ್ವರ್ಗದ ಹಿತಾಸಕ್ತಿಯನ್ನೇ ಕಾಯುವ ಮಾಧ್ಯಮಗಳೂ ಈ ಕೆಲವು ನೂರು ಮೆಡಿಕಲ್ ವಿದ್ಯಾರ್ಥಿಗಳ ಪ್ರತಿಭಟನೆಯನ್ನು ಬೃಹತ್ ಆಂದೋಲನವೆಂಬಂತೇ ಬಿಂಬಿಸಿದವು. ಇದು ಈ ದೇಶದ ರಾಜಕಾರಣಿಗಳ ಕುಟಿಲತೆಗೆ ಮತ್ತು ದ್ರೋಹಕ್ಕೆ ಮಾತ್ರವಲ್ಲ, ಈ ದೇಶ ಎಷ್ಟೇ ಆಧುನಿಕವಾದರೂ, ಸೂಪರ್ ಪವರ್ ಆದರೂ ಜಾತಿ ಪವರ್ ಹೇಗೆ ಮುಕ್ಕಾಗದೆ ಗಟ್ಟಿಯಾಗುತ್ತಿದೆ ಎಂಬುದಕ್ಕೆ ಮತ್ತೊಂದು ಉದಾಹರಣೆ.

'ಸ್ವಾತಂತ್ರ್ಯ' ಬಂದು 58 ವರ್ಷಗಳೇ ಕಳೆದರೂ ಜಾತಿ ತಾರತಮ್ಯವನ್ನು ಸರಿಪಡಿಸುವ ಯಾವುದೇ ಕ್ರಮಗಳ ಬಗ್ಗೆ ಈ ದೇಶದ ನಾಗರಿಕ ಸಮಾಜ ತೋರುತ್ತಿರುವ ಪ್ರತಿಕ್ರಿಯೆ ನಿರೀಕ್ಷಿತವೇ ಆಗಿದ್ದರೂ ಆಘಾತಕಾರಿಯಾಗಿದೆ. ವಾಸ್ತವವಾಗಿ ಈ ದೇಶದಲ್ಲಿ ನಾಗರಿಕ ಸಮಾಜವೆಂದರೆ ಈಗಲೂ ಕುಲೀನರ ಮತ್ತು ಸಂಪನ್ನರ ಬಳಗವೇ. ಈ ದೇಶದ ಎಲ್ಲಾ ಪ್ರಜೆಗಳಿಗೂ ಸಮಾನ ನಾಗರಿಕತೆಯೇ ಪ್ರಾಪ್ತವಾಗಿಲ್ಲ. ಸಂವಿಧಾನ ಕೊಡಮಾಡಿದರೂ ಅದನ್ನು ಈ ಸಂಪನ್ನ ಸಮಾಜ ಒಪ್ಪಿಕೊಳ್ಳಲು ತಯಾರಿಲ್ಲ, ಅದಕ್ಕೆ ಮುಖ್ಯ ಕಾರಣವೇ ಮನುಷ್ಯರನ್ನು ಮನುಷ್ಯರನ್ನಾಗಿ ಕಾಣಲು ಬಿಡದ ಜಾತಿ ವ್ಯವಸ್ಥೆ ವಾಸ್ತವವಾಗಿ ನಮ್ಮ ಸ್ವಾತಂತ್ರ್ಯೋತ್ತರ ಭಾರತದ ಸಂವಿಧಾನ ದಮನಿತ ಸಮುದಾಯಗಳಿಗೆ ಜಾತಿ ವಿನಾಶ ಮಾಡುವಂತ ಕತ್ತಿಯನ್ನು ಕೊಡಬೇಕಿತ್ತು, ಹಾಗೆ ನೋಡಿದರೆ

ಶಿವಸುಂದರ್

ಏಕೆಂದರೆ ಅವು 'ಸೆಂಟರ್ಸ್ ಆಫ್ ಎಕ್ಸಲೆನ್ಸ್', ಅಂದರೆ ಪ್ರತಿಭಾನ್ವಿತರಿಗಾಗಿ ಮಾತ್ರ ಮೀಸಲಾಗಿರುವ ಶ್ರೇಷ್ಠ ಸಂಸ್ಥೆಗಳು. ಅಲ್ಲಿ ಪ್ರತಿಭೆಗೆ ಬಿಟ್ಟು ಜಾತಿಗೆ ಪ್ರವೇಶವಿಲ್ಲ. ಆದರೆ ಆ ಸಂಸ್ಥೆಗಳಲ್ಲಿ ಜಾತಿ ಇಲ್ಲದ ಪ್ರತಿಭೆಗಳಿಗಾಗಲೀ ಪ್ರವೇಶವಿಲ್ಲವೆಂಬುದೂ ಅಷ್ಟೇ ಸತ್ಯ! ಇಲ್ಲದಿದ್ದರೆ ಶೇ.22.5ರಷ್ಟು ಎಸ್‌ಸಿ-ಎಸ್‌ಟಿ ಮೀಸಲಾತಿ ಇದ್ದರೂ ಈ ಯಾವುದೇ ಸಂಸ್ಥೆಗಳಲ್ಲಿ ಶೇ.85ಕ್ಕೂ ಹೆಚ್ಚು ಮೇಲ್ಜಾತಿ ವಿದ್ಯಾರ್ಥಿಗಳೇ ಇರುವುದು ಏಕೆ? ಅದೂ ಪ್ರತಿ ವರ್ಷ SC-ST ಮತ್ತು OBC ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ಮತ್ತು 'ಪ್ರತಿಭಾವಂತರು' ಪಡೆಯುತ್ತಿರುವ ಅಂಕಗಳ ನಡುವೆ ವ್ಯತ್ಯಾಸವೇ ಇಲ್ಲದಂತಾಗಿರುವಾಗ. (ಉದಾಹರಣೆಗೆ ಕಳೆದ ವರ್ಷ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಪ್ರಥಮ ಪಿ.ಯು. ತರಗತಿಗಳಿಗೆ ಪ್ರವೇಶ ಪಡೆಯಲು ವಿಧಿಸಿದ



ಮೀಸಲಾತಿ: ಮೇಲ್ಜಾತಿ ಮನಸ್ಸುಗಳ ವಿಕೃತಿ

ಮೀಸಲಾತಿ ಪದ್ಧತಿ ತನ್ನನ್ನು ತಾನು ಜಾತಿ ತಾರತಮ್ಯದಿಂದ ರಕ್ಷಿಸಿಕೊಂಡು ಮುಂದೆಬರಲು ವಂಚಿತ ಜಾತಿಗಳಿಗೆ ಮತ್ತು ಸಮುದಾಯಗಳಿಗೆ ಸಂವಿಧಾನವೇ ಕೊಡಮಾಡಿರುವ ಒಂದು ಗುರಾಣಿಯೇ ಹೊರತು ಜಾತಿ ವ್ಯವಸ್ಥೆಯನ್ನೇ ನಾಶ ಪಡಿಸುವ ಕತ್ತಿಯೇನಲ್ಲ. ಆದರೆ ಈ ಗುರಾಣಿಯೂ ಎಷ್ಟು ದುರ್ಬಲವಾಗಿದೆಯೆಂಬುದಕ್ಕೆ ಉನ್ನತ ಶಿಕ್ಷಣದಲ್ಲಿ ಮತ್ತು ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿಯ ಬಗ್ಗೆ ಸಂಪನ್ನ ಸಮಾಜ ತೋರುತ್ತಿರುವ ಪ್ರತಿಕ್ರಿಯೆಗಳು ಹಾಗೂ ಅದನ್ನೇ ನೆಪವಾಗಿಟ್ಟುಕೊಂಡು ಸರ್ಕಾರ ಮಾಡುತ್ತಿರುವ ದ್ರೋಹಗಳೇ ಸಾಕ್ಷಿ.


ಮೀಸಲಾತಿ ಪದ್ಧತಿ ತನ್ನನ್ನು ತಾನು ಜಾತಿ ತಾರತಮ್ಯದಿಂದ ರಕ್ಷಿಸಿಕೊಂಡು ಮುಂದೆಬರಲು ವಂಚಿತ ಜಾತಿಗಳಿಗೆ ಮತ್ತು ಸಮುದಾಯಗಳಿಗೆ ಸಂವಿಧಾನವೇ ಕೊಡಮಾಡಿರುವ ಒಂದು ಗುರಾಣಿಯೇ ಹೊರತು ಜಾತಿ ವ್ಯವಸ್ಥೆಯನ್ನೇ ನಾಶ ಪಡಿಸುವ ಕತ್ತಿಯೇನಲ್ಲ, ಆದರೆ ಈ ಗುರಾಣಿಯೂ ಎಷ್ಟು ದುರ್ಬಲವಾಗಿದೆಯೆಂಬುದಕ್ಕೆ ಉನ್ನತ ಶಿಕ್ಷಣದಲ್ಲಿ ಮತ್ತು ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿಯ ಬಗ್ಗೆ ಸಂಪನ್ನ ಸಮಾಜ ತೋರುತ್ತಿರುವ ಪ್ರತಿಕ್ರಿಯೆಗಳು ಹಾಗೂ ಅದನ್ನೇ ನೆಪವಾಗಿಟ್ಟುಕೊಂಡು ಸರ್ಕಾರ ಮಾಡುತ್ತಿರುವ ದ್ರೋಹಗಳೇ ಸಾಕ್ಷಿ.

ಇತ್ತೀಚೆಗೆ ಭಾರತದ ಸಂವಿಧಾನಕ್ಕೆ 104ನೇ ತಿದ್ದುಪಡಿಯನ್ನು ಮಾಡಲಾಗಿದೆ. ಅದರ ಪ್ರಕಾರ ಖಾಸಗಿ-ಅನುದಾನರಹಿತ ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ SC-ST ಮತ್ತು OBC ವರ್ಗದ ವಿದ್ಯಾರ್ಥಿಗಳಿಗೆ ಶೇ.49.5ರಷ್ಟು ಮೀಸಲಾತಿ ನಿಗದಿ ಪಡಿಸಬೇಕೆಂದು ಕಡ್ಡಾಯ ಮಾಡಲಾಗಿದೆ. ಈ ಮಸೂದೆಯನ್ನು ರಾಜ್ಯಸಭಾ ಮತ್ತು ಲೋಕಸಭಾಗಳೆರಡೂ ಹೆಚ್ಚು ಕಡಿಮೆ ಒಕ್ಕೊರಲಿನಿಂದ ಪಾಸು ಮಾಡಿವೆ. ಹಾಗಿದ್ದಲ್ಲಿ ಅದೇ ತತ್ವವನ್ನು ಸರ್ಕಾರವೇ ಹಣಕೊಟ್ಟು ನಡೆಸುವ ಈ IIT, IIM, AIIMS ಗಳಂತಾ ಕಡೆ ಏಕೆ ಅನ್ವಯಿಸಲು ಹಿಂದೆ ಮುಂದೆ ನೋಡುತ್ತದೆ?

ಕಟ್ ಆಫ್ ಅಂಕ ಜನರಲ್ ಮೆರಿಟ್‌ಗೆ ಶೇ.90 ಆದರೆ SC-ST ವರ್ಗಗಳಿಗೆ ಶೇ.85!).

ಅಂದರೆ ಪ್ರತಿಭೆಯಿಲ್ಲದಿದ್ದರೂ ಜಾತಿಯ ಕಾರಣಕ್ಕಾಗಿ ಉನ್ನತ ಸಂಸ್ಥೆಗಳಲ್ಲಿ ಅವರಿಗೆ ಸೀಟು ಕೊಡಲಾಗುತ್ತದೆಂಬ ವಾದಕ್ಕೆ ಹುರುಳೇ ಇಲ್ಲ. ಇವರು ಹೇಳುವ ಪ್ರತಿಭೆ ನಿಜಕ್ಕೂ ಪ್ರತಿಭೆಯೇ ಎಂಬ ವಾದವನ್ನು ಸದ್ಯಕ್ಕೆ ಪಕ್ಕಕ್ಕೆ ಸರಿಸಿ ನೋಡಿದರೂ ಕೆಳ ಜಾತಿಗಳಿಗೆ ಪ್ರತಿಭೆ ಇರುವುದಿಲ್ಲ ಎಂಬುದು ಮೇಲ್ಜಾತಿ ದುರಭಿಮಾನ ಮತ್ತು ದಮನಿತ ಜಾತಿಗಳ ಬಗೆಗಿರುವ ಅಸಹನೆಯಿಂದ ಹುಟ್ಟುತ್ತಿರುವ ವಾದ ಮಾತ್ರ ಎಂಬುದು ತಿಳಿಯುತ್ತದೆ.

ಈಗ ವಿವಾದದಲ್ಲಿರುವ IIT, IIM, AIIMS ಗಳಲ್ಲಿನ ಮೀಸಲಾತಿ ಪ್ರಶ್ನೆಯನ್ನೇ ನೋಡೋಣ. ಪ್ರತಿವರ್ಷ ಈ ಕೋರ್ಸುಗಳ ಪರೀಕ್ಷೆಯನ್ನು 3,50,000 ವಿದ್ಯಾರ್ಥಿಗಳು ತೆಗೆದುಕೊಳ್ಳುತ್ತಾರೆ. ಮೊಟ್ಟಮೊದಲಿಗೆ ಈ ಪರೀಕ್ಷೆ ತೆಗೆದುಕೊಳ್ಳಬೇಕೆಂದರೆ ಹಿಂದಿನ ಪರೀಕ್ಷೆಯಲ್ಲಿ ಕನಿಷ್ಠ ಶೇ.50ರಷ್ಟು ಅಂಕಗಳನ್ನು ಪಡೆದಿರಲೇ ಬೇಕು. ಈಗ IIM ಗಳ ಮಂಡಳಿಗಳು ಅದನ್ನು ಶೇ.45ಕ್ಕಿಳಿಸಬಹುದೇ ಎಂದು ಪರಿಶೀಲಿಸುತ್ತಿದ್ದಾರೆ ಅಷ್ಟೆ. ನಂತರ ನಡೆಯುವ ಅತ್ಯಂತ ಕಠಿಣ ಪ್ರವೇಶ ಪರಿಕ್ಷೆಯಲ್ಲಿ 3500 ಜನರನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಅಂದರೆ 3.5ಲಕ್ಷ ಪ್ರತಿಭಾವಂತರಲ್ಲಿ ಶೇ.1 ರಷ್ಟು ವಿದ್ಯಾರ್ಥಿಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಅದೆಷ್ಟೇ ಜಾತಿ ಕುತಂತ್ರಗಳು ನಡೆದರೂ ಕಳೆದ ಹಲವಾರು ವರ್ಷಗಳಿಂದ ಆ ಶೇ. 1ರಲ್ಲಿ ಕನಿಷ್ಠ 300 ಜನರಾದರೂ ದಲಿತ ಹಾಗೂ ಹಿಂದುಳಿದ ಜಾತಿಗಳ ಪ್ರತಿಭಾವಂತರೂ ಇದ್ದೇ ಇರುತ್ತಾರೆ.



ಈಗ ಅದರಲ್ಲಿ ಶೇ.49.5ರಷ್ಟು ಮೀಸಲಾತಿ ಕೇಳಿದ ತಕ್ಷಣ ಈ ಕಠಿಣ ಪ್ರತಿಭಾನ್ವೇಷಣೆಯೇನೂ ನಿಲ್ಲುವುದಿಲ್ಲ, ಹಾಗಿದ್ದ ಮೇಲೆ ಮೀಸಲಾತಿ ನೀಡಿದರೆ ಪ್ರತಿಷ್ಠಿತ ಸಂಸ್ಥೆಗಳ ಮಾನ್ಯತೆ ಹಾಳಾಗುತ್ತದೆ ಎಂಬ ಮತ್ತು ಗುಣಮಟ್ಟ, ಸಾಮರ್ಥ್ಯ ಹಾಳಾಗುತ್ತದೆಂಬ ವಾದದಲ್ಲಿ ಜಾತೀಯತೆ ಬಿಟ್ಟರೆ ಬೇರೇನೂ ಇಲ್ಲ, ಇದೇ ಮಾತುಗಳನ್ನು 1981ರ ಪ್ರಕರಣವೊಂದರಲ್ಲಿ ತೀರ್ಪು ಕೊಡುವಾಗ ಜಸ್ಟೀಸ್ ಚಿನ್ನಪ್ಪರೆಡ್ಡಿಯವರು ಹೀಗೆ ಹೇಳಿದ್ದಾರೆ:

"ಮೀಸಲಾತಿಯನ್ನು ಮುಂದುವರೆಸಿದರೆ ಅಥವಾ ಬಡ್ತಿ ಹುದ್ದೆಗಳಿಗೆ ಅದನ್ನು ವಿಸ್ತರಿಸಿದರೆ ಆಯಾ ಹುದ್ದೆಗಳ ಕಾರ್ಯ ಸಾಮರ್ಥ್ಯ ಕಡಿಮೆ ಆಗುತ್ತದೆ ಎಂಬ ವಾದಕ್ಕೆ ಯಾವುದೇ ಅಂಕಿಅಂಶಗಳ ಸಮರ್ಥನೆ ಇಲ್ಲ."

ಹಾಗಿದ್ದ ಮೇಲೆ ಉನ್ನತ ಶಿಕ್ಷಣದಲ್ಲಿ ಮೀಸಲಾ... ಇರಬಾರದೆಂಬ ವಾದದ ಅಸಲಿ ಹೂರಣವೇನು ... ಯು.ಪಿ.ಎ.ಸರ್ಕಾರದ ಮಂತ್ರಿಯೊಬ್ಬರು ಮತ... ಮೀಸಲಾತಿ ವಿರೋಧಿ ಮುಷ್ಕರ ನಿರತರು ಸ್ಪಷ್ಟಪಡಿಸಿದಂ... ಮೀಸಲಾತಿ ನೀಡಿದರೆ ಪ್ರತಿಭೆಗೆ ಅನ್ಯಾಯ ಮಾಡಿದಂತಾಗು... ತ್ತದೆ ಮತ್ತು ಉನ್ನತ ಶಿಕ್ಷಣದಲ್ಲಿಯೂ ಜಾತೀಯ... ತಂದಂತಾಗುತ್ತದೆ ಎಂಬುದು.


ಪ್ರತಿಭೆಯ ಜಾತಿ ಮತ್ತು ಜಾತಿಯ ಪ್ರತಿಭೆ

ಈ ಎರಡು ವಾದಗಳ ಪ್ರಾರಂಭ ಬಿಂದು ಒಂದೇ... ಅವೆರಡೂ ಮೇಲ್ಜಾತಿ ವಿದ್ಯಾರ್ಥಿಗಳೆಂದರೆ ಪ್ರತಿಭಾವಂ... ರೆಂಬ ಮತ್ತು ಕೆಳಜಾತಿ ವಿದ್ಯಾರ್ಥಿಗಳೆಂದರೆ ಪ್ರತಿ... ಇಲ್ಲದವರೆಂಬ ಜಾತಿ ದುರಭಿಮಾನ ತಳಹದಿಯಿಂದಲೇ ಹುಟ್ಟುತ್ತದೆ. ಅದೇ ರೀತಿ ಮೀಸಲಾತಿ ಆಧಾರದ... ಕೆಳಜಾತಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಸಂಸ್ಥೆಗಳಿ... ಬಂದರೆ ಈವರೆಗೆ ಜಾತೀಯತೆಯ ಸೋಂಕಿಲ್ಲದೆ ಪರಿಶುದ್ಧ... ವಾಗಿದ್ದ ಈ ಸಂಸ್ಥೆಗಳಲ್ಲಿ ಜಾತೀಯತೆ ತಲೆದೋರುತ್ತದ... ಎಂಬ ವಾದವೂ ಸಹ. ಈವರೆಗೆ ಈ ಸಂಸ್ಥೆಗಳ... ಮೇಲ್ಜಾತಿ ವಿದ್ಯಾರ್ಥಿಗಳೇ ಇದ್ದರೂ ಆ ಸಂಸ್ಥೆಗಳಿ... ಜಾತೀಯತೆಯ ಸೋಂಕಿರುವುದಿಲ್ಲ, ಆದರೆ ಒಮ್ಮೆ ಕೆಳ ಜಾತಿ ವಿದ್ಯಾರ್ಥಿಗಳು ಪ್ರತಿಭೆಯಿಂದಲೇ ಆ ಸಂಸ್ಥೆಗಳಿ... ಪ್ರವೇಶ ಪಡೆದರೂ ಆ ಸಂಸ್ಥೆಗಳಿಗೆ ಜಾತಿ ಮಾಲಿನ್ಯ ಬಡಿಯುತ್ತದೆ! ಇದು ಜಾತಿ ಅಸಹನೆಯ ತರ್ಕವಲ್ಲದ... ಮತ್ತೇನು?

ವಾಸ್ತವವಾಗಿ ಮೇಲ್ಜಾತಿಯ ಪಟ್ಟಭದ್ರ ಹಿತಾಸಕ್ತಿಗಳ... ಇಂದು ಪ್ರತಿಭೆಯ ಮಾನದಂಡವನ್ನು ಬಳಸಿಕೊಂಡು ಜಾತಿ ತಾರತಮ್ಯವನ್ನು ಮುಂದುವರೆಸುತ್ತಿವೆ. ಏಕೆಂದರೆ ಈವರೆಗೆ ಈ ಪ್ರತಿಭೆ ಎಂಬುದಕ್ಕೆ ಒಂದು ಸಾರ್ವತ್ರಿ... ಅರ್ಥವೇ ನಿಗದಿಯಾಗಿಲ್ಲ, ಮೊದಲು ಇದೇ ಶಕ್ತಿಗಳೇ ಪ್ರತಿಭೆಯೆಂದರೆ ಪರೀಕ್ಷೆಗಳಲ್ಲಿ ತೆಗೆಯುವ ಅಂಕಗಳೆಂದು ನಿಗದಿ ಮಾಡಿದ್ದವು. ಅದು ಆಗಿನ್ನೂ ಕೆಳಜಾತಿಗಳ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಮೀಸಲಾತಿಯ ಮೂಲಕ ಪ್ರವೇಶ ಪಡೆಯುತ್ತಿದ್ದ ಕಾಲ. ಹೀಗಾಗಿ ಕೆಳಜಾತಿಯ ವಿದ್ಯಾರ್ಥಿಗಳು ಅಂಕಗಳಲ್ಲಿ ಮೇಲ್ಜಾತಿ ವಿದ್ಯಾರ್ಥಿಗಳೊಡನೆ ಪೈಪೋಟಿ ನಡೆಸಲು ಶಕ್ಯವಿರಲಿಲ್ಲ.

ಆದರೆ ಮುಂದಿನ ದಶಕಗಳಲ್ಲಿ ಅವರು ಸಮ... ಪೈಪೋಟಿಯನ್ನು ಕೊಡಲು ಪ್ರಾರಂಭಿಸಿದ ಮೇಲೆ ಪ್ರತಿಭೆಯೆಂದರೆ ಅಂಕಗಳು ಮಾತ್ರವಲ್ಲ ಪರ್ಫಾರ್ಮೆನ್ಸ್ -ಕಾರ್ಯಶೀಲತೆ ಎಂದು ವಿವರಿಸಲಾಯಿತು. ಅದನ್ನೂ ಕೆಳಜಾತಿಗಳ ಪ್ರತಿಭೆಗಳು ದಕ್ಕಿಸಿಕೊಂಡ ಮೇಲೆ ಈಗ ಅದನ್ನು- personal potential – ವ್ಯಕ್ತಿಯಲ್ಲಿ ಹುದುಗಿರುವ ಅಂತಃಶಕ್ತಿಯೆಂದು ವಿವರಿಸಲಾಗುತ್ತಿದೆ. ಆದರೆ ಈ ವಿವರಣೆಯಂತೆ ಒಬ್ಬ ವ್ಯಕ್ತಿಯ ಪ್ರತಿಭೆಯನ್ನು ಅಳೆಯಲು ಯಾವುದೇ ವಸ್ತುನಿಷ್ಠ ಮಾನದಂಡಗಳಿಲ್ಲ. ಹೀಗಾಗಿ ಒಬ್ಬ ವ್ಯಕ್ತಿಯ ಪ್ರತಿಭೆ ಏನೆಂಬುದು ಅದನ್ನು ಅಳೆಯುತ್ತಿರುವ ವ್ಯಕ್ತಿಯ ವ್ಯಕ್ತಿನಿಷ್ಠ ಅಭಿಪ್ರಾಯವಾಗಷ್ಟೇ ಉಳಿಯುತ್ತದೆ. ಒಂದು ಜಾತಿ ಅಸಹನೆಯಿಂದ ಕೂಡಿರುವ ಸಮಾಜದಲ್ಲಿ ವ್ಯಕ್ತಿಯ ಪ್ರತಿಭೆಯನ್ನು ಯಾವುದೇ ವಸ್ತುನಿಷ್ಠ ಮಾನದಂಡಗಳಿಲ್ಲದೆ ವ್ಯಕ್ತಿನಿಷ್ಠವಾಗಿ ತೀರ್ಮಾನ ಮಾಡುವಂತಾಗುವ ಪರಿಣಾಮವನ್ನೇ ನಾವೀಗ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕಾಣುತ್ತಿದ್ದೇವೆ.

ಮೇಲಾಗಿ ಈ ಪ್ರತಿಭೆಯೆನ್ನುವುದು ಜಾ... ಹಿನ್ನೆಲೆಯಿಂದಲೋ ಅಥವಾ ಜನ್ಮಜಾತವಾಗಿಯೋ ಬರುವುದಲ್ಲವಲ್ಲ. ಹಾಗಿದ್ದ ಪಕ್ಷದಲ್ಲಿ ಒಂದೇ ಕುಟುಂಬದಲ್ಲಿ ಹುಟ್ಟಿದ ಪ್ರತಿಯೊಂದು ಮಗುವೂ ಪ್ರತಿಭಾವಂತ... ವಾಗಬೇಕಿತ್ತು, ಅಥವಾ ಕೆಳಜಾತಿಯ ಎಲ್ಲರೂ ದಡ್ಡರಾಗಬೇಕಿತ್ತು, ಪ್ರತಿಭೆ ಮತ್ತು ತಿಳುವಳಿಕೆ ಎನ್ನುವುದು ಸಾಮಾಜಿಕ ಮತ್ತು ಬೌದ್ಧಿಕ ಸಂಪನ್ಮೂಲಗಳು ದೊರೆಯುವುದ... ರಿಂದ ದಕ್ಕುತ್ತದೆ. ಆದರೆ ಈ ಸಂಪನ್ಮೂಲಗಳನ್ನು ಪಡೆಯುವ ಅವಕಾಶ ನಮ್ಮ ಸಮಾಜದಲ್ಲಿ ಸಮಾನವಾಗಿ ಎಲ್ಲರಿಗೂ ದಕ್ಕು... ದೆಯೇ? ಇತಿಹಾಸದಲ್ಲಿ ದ... ದೆಯೇ? ಇತರ ದೇಶಗಳಲ್ಲಿ ಆರ್ಥಿಕ ತಾರತಮ್ಯಗಳ ಕಾರಣದಿಂದ ಜನತೆ... ಈ ಸಂಪನ್ಮೂಲಗಳನ್ನು ಪಡೆಯ... ವಲ್ಲಿ ಸಮಾನ ಅವಕಾಶಗಳ... ಇಲ್ಲದಂತಾದರೆ ನಮ್ಮ ದೇಶದ... ಜಾತಿ ಪದ್ಧತಿಯ ಮೂಲಕ ದಮನಿತ ಜಾತಿಗಳನ್ನು ಭೌತಿಕ ಸಂಪನ್ಮೂಲದ ಜೊತೆ ಶಿಕ್ಷಣದಂತ ಬೌದ್ಧಿಕ ಸಂಪನ್ಮೂಲಗಳನ್ನು ಪಡೆಯುವುದ... ರಿಂದಲೂ ವಂಚಿತಗೊಳಿಸಲಾಯಿತು. ಮತ್ತೊಂದೆಡೆ ತಮ್ಮ ಬದುಕಿನ ಹೋರಾಟದಿಂದ ಮತ್ತು ಶ್ರಮ ಹಾಗೂ ಪರಿಶ್ರಮದಿಂದ ಅವರು ಪಡೆದ ಜ್ಞಾನವನ್ನು ಶಿಷ್ಟ ಮತ... ಪರಿಶಿಷ್ಟ, ದೇಸಿ- ಮಾರ್ಗಗಳೆಂಬ ಇತ್ಯಾದಿ ವರ್ಗೀಕರಣ... ಮೂಲಕ ಅಮಾನ್ಯಗೊಳಿಸಲಾಯಿತು.



ನಮ್ಮ ದೇಶದ 1950ರ ಸಂವಿಧಾನ ಈ ದೇಶದ ಎಲ್ಲಾ ಜನರಿಗೂ ಜಾತಿ, ಲಿಂಗ, ವರ್ಗ ತಾರತಮ್ಯಗಳಿಲ್ಲದೆ ಎಲ್ಲಾ ಸಂಪನ್ಮೂಲಗಳನ್ನು ಪಡೆಯಲು ಸಮಾನ ಅವಕಾಶಗಳನ್ನು ಕಲ್ಪಿಸಿಕೊಟ್ಟರೂ ಭೌತಿಕ ಮತ್ತು ಭೌದ್ಧಿಕ ಸಂಪನ್ಮೂಲಗಳ ಮೇಲೆ ಮೇಲ್ಜಾತಿ ಮತ್ತು ಅದರಿಂದಲೇ ಮೇಲ್ವರ್ಗಗಳು ಆಗಿದ್ದ ಶಕ್ತಿಗಳ ಏಕಸ್ವಾಮ್ಯವನ್ನು ಮುರಿಯಲಿಲ್ಲ. ಹೀಗಾಗಿ ಆ ಸಂಪನ್ಮೂಲಗಳನ್ನು ಪಡೆಯುವ ಸಮಾನ ...ಗಳು ಪದಗಳಲ್ಲಿ ಸುವಿಧಾನದಲ್ಲಿದ್ದರೂ ಕೆಳಜಾತಿಗಳಿಗೆ ಪದವೂ ...ಅದರ ಅರ್ಥವೂ ಸಿಕ್ಕಿಲ್ಲ.

...ಗಾಗಿ ಇಂದಿಗೂ ನಮ್ಮ ಜಾತಿ ಆಧಾರಿತ ಸಮಾಜದಲ್ಲಿ ಜಾತಿ ಎಂಬುದು ... ಮತ್ತು ಭೌದ್ಧಿಕ ಸಂಪನ್ಮೂಲಗಳಿಂದ ವಂಚಿತಗೊಳಿಸುವ ಸಾಧನವಾಗಿಯೇ ...ರೂಗುತ್ತಿದೆ. ಆದ್ದರಿಂದಲೇ ಈ ದೇಶದಲ್ಲಿ ಕೇವಲ ಬಡತನ ಮಾತ್ರ ... ವಂಚನೆಗೆ ಕಾರಣವಲ್ಲ, ಬದಲಿಗೆ ಜಾತಿ ಮೂಲಗಳು ಸಹಾ ಅವಕಾಶಗಳನ್ನು ...ತ್ತವೆ. ಆದ್ದರಿಂದಲೇ ಜಾತಿ ಆಧಾರಿತ ಮೀಸಲಾತಿಯೂ ಅತ್ಯಗತ್ಯವಾಗುತ್ತದೆ. ...ದಲ್ಲಿ ಮೀಸಲಾತಿಯೂ ಜಾತಿ ಕಾರಣಕ್ಕೆ ಅಧಿಕಾರದಿಂದ, ಸಂಪತ್ತಿನಿಂದ, ...ದಿಂದ ಮತ್ತು ಶಿಕ್ಷಣದಿಂದ ವಂಚಿತರಾದವರಿಗೆ ಅವೆಲ್ಲವನ್ನೂ ಪಡೆದುಕೊಳ್ಳುವ ...ಕ ಪ್ರಜಾಸತ್ತಾತ್ಮಕ ಸಾಧನವೂ ಆಯಿತು. ಆದ್ದರಿಂದಲೇ ಮೀಸಲಾತಿ ... ಪ್ರತಿಭೆ ಇಲ್ಲದ ಕೆಳಜಾತಿಗಳಿಗೆ ಕೊಡುವ ರಿಯಾಯಿತಿ ಅಲ್ಲ, ... ಅರ್ಹತೆ ಇದ್ದರೂ ಜಾತಿ ಅಸಹನೆಯ ಕಾರಣಕ್ಕಾಗಿಯೇ ಅವಕಾಶಗಳನ್ನು ...ವ ನಾಗರಿಕ ಸಮಾಜಕ್ಕೆ ಪ್ರಭುತ್ವ ವಿಧಿಸಿದ ಪ್ರಜಾಸತ್ತಾತ್ಮಕ ಅಂಕುಶ, ಮೇಲ್ಜಾತಿ ದುರಭಿಮಾನಿ ಪಟ್ಟಭದ್ರ ಹಿತಾಸಕ್ತಿಗಳ ಕಣ್ಣೂರಿಗೂ ಕಾರಣ. ...ು. ಆದ್ದರಿಂದಲೇ ಮೀಸಲಾತಿ ವಿರೋಧದ ಹಿಂದೆ ಮೇಲ್ಜಾತಿ ಮತ್ತು ...ವರ್ಗಗಳ ಪಟ್ಟಭದ್ರ ಹಿತಾಸಕ್ತಿಗಳನ್ನು ಉಳಿಸಿಕೊಳ್ಳುವ ಅಪ್ರಜಾತಾಂತ್ರಿಕ ...ೂ ಇದೆ.

...ರಾಣಿಯೇ ಉರುಳಾಗುತ್ತಿರುವ ಇಂದಿನ ಸಂದರ್ಭ

...ಗಾಗಿ ಜಾತಿ ಆಧಾರದಲ್ಲಿ ಉನ್ನತ ಶಿಕ್ಷಣದಲ್ಲಾಗಲೀ, ಖಾಸಗೀ ಕ್ಷೇತ್ರದಲ್ಲಾಗಲೀ, ...ತಿ ನೀಡುವುದರಿಂದ ಈ ದೇಶದ ಪ್ರಗತಿಯಾಗಲೀ, ಉನ್ನತ ಶಿಕ್ಷಣದ ...ವಾಗಲೀ ಕುಸಿಯುವುದಿಲ್ಲ, ಅಥವಾ ಪ್ರತಿಭೆಯೆಂದರೇನೆಂದು ಈ ...ನೀಡಿರುವ ನಿರ್ವಚನವೇ ಪ್ರತಿಭೆಯೂ ಅಲ್ಲ, ಏಕೆಂದರೆ ಮೀಸಲಾತಿಯ ...ೂ ಇಲ್ಲದೆ ಈ ದೇಶದ ಆಡಳಿತ, ರಕ್ಷಣೆ, ರಾಜಕೀಯ, ಸಮಾಜದ ... ಆರ್ಥಿಕತೆಯ ನಿಯಂತ್ರಣಗಳನ್ನೆಲ್ಲಾ ಮೇಲ್ಜಾತಿ ಮೇಲ್ವವರ್ಗದ ಜನರೇ ...ಕೊಂಡಿದ್ದಾಗಲೂ ಅವರ ಪ್ರತಿಭೆ ಈ ದೇಶವನ್ನು ಬಡತನ ಕಷ್ಟ ...ಗಳಿಂದಾಗಲೀ, ಪರದೇಶಗಳ ದಾಸ್ಯದಿಂದಾಗಲೀ ಕಾಪಾಡಲಾಗಲಿಲ್ಲ, ...8 ವರ್ಷಗಳಿಂದ ಈ ದೇಶದ ಎಲ್ಲಾ ಕ್ಷೇತ್ರಗಳ ನೇತೃತ್ವವನ್ನು ಪ್ರಧಾನವಾಗಿ ...ತಿ ಮತ್ತು ಮೇಲ್ ವರ್ಗಗಳೇ ವಹಿಸಿದ್ದರೂ ಪ್ರಪಂಚದ ಅತಿ ಬಡ ...ಲ್ಲಿ ನಮ್ಮ ದೇಶವೂ ಒಂದಾಗಿರುವುದನ್ನಾಗಲೀ, ಅಥವಾ ಅತಿ ಭ್ರಷ್ಟ ...ಲ್ಲಿ ಎರಡನೇ ದೇಶವಾಗಿರುವುದನ್ನಾಗಲೀ ತಪ್ಪಿಸಲು ಆಗಿಲ್ಲ, ಆದ್ದರಿಂದಲೇ ... ಕೋರ್ಟಿನ ನ್ಯಾಯಾಧೀಶರಾಗಿದ್ದ ಜಸ್ಟೀಸ್ ಕೃಷ್ಣ ಅಯ್ಯರ್ ತಾವು ...ಲ್ಲಿ ಕೊಟ್ಟ ತೀರ್ಮಾನವೊಂದರಲ್ಲಿ ಪ್ರತಿಭೆಯೆಂದರೇನೆಂದು ಹೀಗೆ ...ಸಿದ್ದಾರೆ:

"ಪ್ರತಿಭೆಯೆಂದರೆ ಜನತೆಯ ಕಣ್ಣೀರಿಗೆ ಕರಗುವ ಸ್ಪಂದನಾಶೀಲ ಹೃದಯ, ...ಲಿತ್ವ ಮತ್ತು ಪ್ರಾಮಾಣಿಕ ಬದ್ಧತೆ ಹಾಗೂ ಭೌದ್ಧಿಕ ಪ್ರಾಮಾಣಿಕತೆಗಳೇ ...ಕ್ಸ್‌ಫರ್ಡ್ ಮತ್ತು ಹಾರ್ವರ್ಡ್‌ಗಳಿಂದ ಪಡೆದ ಡಿಗ್ರಿಗಳಲ್ಲ"

...ರೆ ಯಾವ ದಮನಿತ ಜಾತಿಗಳ ಸಂಪೂರ್ಣ ಸಬಲೀಕರಣಕ್ಕೆ, ಸಮುದಾಯಗಳ ... ಮೇಲ್‌ಚಾಲನೆಗೆ ಕಾರಣವಾಗಬೇಕಿದ್ದ ಮೀಸಲಾತಿ ಇಂದು ಕೇವಲ ... ಹಾವಿನಂತಾಗಿದೆ. ಉದಾಹರಣೆಗೆ 22.5 ಕೋಟಿ ದಲಿತರಲ್ಲಿ ಕಳೆದ ...ರ್ಷಗಳಲ್ಲಿ ಮೀಸಲಾತಿಯ ಸೌಲಭ್ಯ ಪಡೆದವರು ಕೇವಲ ಶೇ.1.7ರಷ್ಟು ಅಂದರೆ 30 ಲಕ್ಷ ಜನರು ಮಾತ್ರ. ಅದರಲ್ಲೂ ಇಂದು ಜಾಗತೀಕರಣ ... ಖಾಸಗೀಕರಣವೆಂಬ ಪ್ರಕ್ರಿಯೆಗಳು ಒಂದು ಸಂವಿಧಾನ ವಿರೋಧಿ ...ತಿಯನ್ನೇ ಪ್ರಾರಂಬಿಸಿವೆ.

...ರವೂ ಶಿಕ್ಷಣ ಮತ್ತು ಉದ್ದಿಮೆ ಕ್ಷೇತ್ರಗಳಿಂದ ಸಂಪೂರ್ಣವಾಗಿ ಹಿಂದೆ ...ತ್ತಿದೆ. ಹೀಗಾಗಿ ಸರ್ಕಾರಿ ಕ್ಷೇತ್ರಗಳಲ್ಲಿ ಮೀಸಲಾತಿ ಎಂಬುದೇ ...ನವಾಗುತ್ತಿದೆ. ಅಳಿದುಳಿದಿರುವ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳಲ್ಲೂ ಸಹ ... ದಮನಿತ ಸಮುದಾಯಕ್ಕೆ ಎಟುಕಲಾಗದಷ್ಟು ಎತ್ತರದಲ್ಲಿವೆ. ನವ ...ಕರಣವೆಂಬ ಪಾಶ್ಚಿಮಾತ್ಯ ಬಂಡವಾಳಶಾಹಿ ದಾಳಿಯಿಂದ ಸಂಪನ್ಮೂಲಗಳ, ...ಗಳ ಸಮಾನ ಹಂಚಿಕೆಯ ಮಾತಿರಲಿ ಇರುವ ಸಂಪನ್ಮೂಲಗಳೂ ಈ ... ದಮನಿತ ಜನರಿಗೆ ಅಲಭ್ಯವಾಗತೊಡಗಿವೆ. ಇಂತಹಾ ಸಂದರ್ಭದಲ್ಲಿ ...ತಿಯೆಂಬುದು ಸಮುದಾಯಗಳ ಸಬಲೀಕರಣದ ಬದಲಿಗೆ ದಮನಿತ ...ಯಗಳಲ್ಲಿನ ಕೆಲವೇ ವ್ಯಕ್ತಿಗಳ ಉನ್ನತಿಗೆ ಮಾತ್ರ ಪೂರಕವಾಗುತ್ತಿದೆ. ...ತ್ತಿಲ್ಲದೆ ಹುಟ್ಟುತ್ತಿರುವ ಸ್ವಾರ್ಥ ಮತ್ತು ಸ್ವ ಉನ್ನತಿಯ ಸಂಸ್ಕೃತಿ ಮತ್ತು ...ಮಗಳು, ಮೀಸಲಾತಿಯ ಫಲಾನುಭವಿಗಳನ್ನು ಸಮುದಾಯದಿಂದ ...ಮಾಡುತ್ತಿವೆ. ಮಾತ್ರವಲ್ಲ ಅವರ 'ಪ್ರತಿಭೆ'ಯನ್ನು ದಮನಿತ ಸಮುದಾಯ ...ಶ ಮಾಡುವ ಆರ್ಥಿಕತೆ ಮತ್ತು ರಾಜಕಾರಣಕ್ಕೆ ದಾಳವಾಗಿ ಬಳಸಿಕೊಳ್ಳುತ್ತಿವೆ. ... ಜಾತಿಗಳಲ್ಲಿ ಮೀಸಲಾತಿಯ ಫಲಾನುಭವದಿಂದ ಹುಟ್ಟಿಕೊಂಡಿರುವ ...ವರ್ಗ ಅದನ್ನೇ ಒಂದು ಪಟ್ಟಭದ್ರ ಹಿತಾಸಕ್ತಿಯನ್ನಾಗಿಸಿಕೊಂಡು ಇರುವ ವ್ಯವಸ್ಥೆಯಲ್ಲೇ ತನ್ನ ಸ್ವಾರ್ಥದ ಉನ್ನತಿಗಾಗಿ ಮೀಸಲಾತಿ ರಾಜಕಾರಣವನ್ನು ...ಸ್ತಿವೆ.


... ಇಂದಿನ ಸಂಕೀರ್ಣ ಸಂದರ್ಭದಲ್ಲಿ ಗುರಾಣಿಯೇ ಕ್ರಮೇಣ ...ಬಿಡುತ್ತಿದೆ. ದಮನಿತ ಜಾತಿಗಳಲ್ಲಿನ ಈ ನವ ಬ್ರಾಹ್ಮಣ್ಯ, ಶೋಷಕ ಬ್ರಾಹ್ಮಣ್ಯದೊಂದಿಗೆ ಸೇರಿಕೊಂಡು ಅಮೆರಿಕ ಪ್ರಣೀತ ನವ ...ಹಾದಿಗೆ ... ಕೊಡುಗಿವೆ. ಆ ಮೂಲಕ ದಮನಿತ ಸಮುದಾಯಕ್ಕೆ ಕೆಲವೇ ವ್ಯಕ್ತಿಗಳನ್ನು ಮಾತ್ರ ಮೇಲೆತ್ತುತ್ತಾ ಇಡೀ ದಮನಿತ ...ಗಳನ್ನು ಮಾತ್ರ ಶೋಷಣೆಯನ್ನು ಹೊಸ ವರ್ಣಾಶ್ರಮ ...ವನ್ನು ಮುಂದುವರೆಸುತ್ತಿವೆ. ಮೀಸಲಾತಿ ರಾಜಕಾರಣಿಸುವ ಈ ...ವನ್ನು ಅರ್ಥ ಮಾಡಿಕೊಂಡು [illegible] ರಾಜಕಾರಣದಲ್ಲಿ ...ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಿದೆ.

ಬಿಜೆಪಿಯಲ್ಲಿ ಕರಗಿ ಹೋದ ಕುಮಾರಣ್ಣ!

ಯಾರು ಏನೇ ಹೇಳಿದರೂ ಜನತಾದಳವನ್ನು ಬಿಜೆಪಿ ಇಡಿಯಾಗಿ ನುಂಗತೊಡಗಿದೆ. ದಳದ ಮುಖ್ಯಮಂತ್ರಿಯೇ ಜನತಾದರ್ಶನ ಕಾರ್ಯಕ್ರಮವನ್ನು ರದ್ದು ಮಾಡಿ, ರಾಮಚಂದ್ರಾಪುರ ಮಠದಲ್ಲಿ ಇಡೀ ದಿನವಿದ್ದು, ಚೆಡ್ಡಿ ಕಾರ್ಯಕರ್ತರೂ ನಾಚುವಂತೆ ಹೋಮ, ಹವನ, ಪೂಜೆಗಳಲ್ಲಿ ನಿರತರಾಗಿದ್ದನ್ನು ನೋಡಿದ ದಳದ ಕಾರ್ಯಕರ್ತರಿಗೇ ಇದು ಮನದಟ್ಟಾಗತೊಡಗಿದೆ.

ಮುಖ್ಯಮಂತ್ರಿ ಕುಮಾರಸ್ವಾಮಿಯವರನ್ನು ರಾಮಚಂದ್ರಾಪುರದ ಮಠದ ಕಾರ್ಯಕ್ರಮ ಎಷ್ಟು ವಶೀಕರಣ ಮಾಡಿತ್ತೆಂದರೆ ಅವರಿಗೆ ಹೊಸನಗರ, ಸಾಗರ ತಾಲ್ಲೂಕಿಗೆ ಸಂಪರ್ಕ ಸಾಧನವಾದ ಪಟಗುಪ್ಪ ಸೇತುವೆಯ ಪುನರ್ನಿರ್ಮಾಣದ ಚಾಲನೆಯೂ ಮರೆತು ಹೋಯ್ತು. ಓಲ್ವೋ ಬಸ್ಸಿನಲ್ಲಿ ಡಜನ್ ಶಾಸಕರು ಮತ್ತು ನಾಲ್ವರು ಮಂತ್ರಿಗಳೊಡನೆ ಬಂದಿದ್ದ ಮುಖ್ಯಮಂತ್ರಿಗಳಿಗೆ ಮಠದ ಆವರಣದಲ್ಲಿನ ಹೋಮದ ಧೂಮಲೀಲೆ ಎಷ್ಟು ಪ್ರಭಾವ ಬೀರಿತೆಂದರೆ ಕೂಡಲೇ ರಾಮರಾಜ್ಯ ಸ್ಥಾಪನೆ ಮಾಡಿಬಿಡುವುದಾಗಿ ಘೋಷಿಸಿದರು!

ಮುಖ್ಯಮಂತ್ರಿಯ ಎದುರೇ ಸ್ವಾಮಿಗಳಲ್ಲಿ ಒಬ್ಬ "ಈ ಜಾಗವನ್ನು ಅಯೋಧ್ಯೆ ಮಾಡಿಬಿಡುತ್ತೇನೆ" ಅಂದರೆ, ಮತ್ತಿಬ್ಬರು ನಮ್ಮ ನಡುವಿನ ಜನಾಂಗವನ್ನೇ ಹೀಯಾಳಿಸಿ ಮಾತನಾಡಿದರು. ಪೇಜಾವರ ಶ್ರೀಗಳ ದಿವ್ಯಜ್ಞಾನದ ಪ್ರಕಾರ, "ರಾಕ್ಷಸರನ್ನ ಸಂಹಾರ ಮಾಡಬೇಕಾದರೆ ರಾಮ ವಿಶ್ವರೂಪ ಪಡೆಯಬೇಕಾಯ್ತು. ಆದರೆ ಅಂದು ನಿರ್ನಾಮವಾದ ರಾಕ್ಷಸರು ಇಂದೂ ಕೂಡ ನಮ್ಮ ನಡುವೆ ಸೇರಿಕೊಂಡು ಉಪಟಳ ಕೊಡುತ್ತಿದ್ದಾರೆ. ಅವರನ್ನು ಗುರುತಿಸಿ ಸಂಹಾರ ಮಾಡಬೇಕಾದರೆ, ಇಲ್ಲಿನ ಪ್ರತಿಯೊಬ್ಬರು ರಾಮನ ಸಂಕಲ್ಪ ತೊಡಬೇಕು. ಆಗ ಮಾತ್ರ ನಮ್ಮ ನಡುವಿನ ರಾಕ್ಷಸರ ಸಂಹಾರ ಸಾಧ್ಯ" ಎಂದು ಹೇಳಿ, ಅಲ್ಲಿದ್ದ ಜನಸ್ತೋಮ ತಮ್ಮ ಸುತ್ತಮುತ್ತಲವರನ್ನೇ ಅನುಮಾನ ದಿಂದ ನೋಡುವಂತೆ ವಿಷಬೀಜ ಬಿತ್ತಿದರು.



ಮತ್ತೊಬ್ಬ ಮಂದಮತಿಯಂತಹ ಸ್ವಾಮಿ ಸಂಸ್ಕೃತ, ಇಂಗ್ಲಿಷ್ ಶ್ಲೋಕಗಳನ್ನೆಲ್ಲಾ ಸೇರಿಸಿ ತನ್ನ ವಿದ್ವತ್ ಪ್ರದರ್ಶಿಸಿದ ನಂತರ ಒಂದು ಕತೆ ಹೇಳಿದ: "ಒಮ್ಮೆ ಮೋತಿಲಾಲ್ ನೆಹರೂರನ್ನು ಯಾರೋ ಒಬ್ಬ 'ನೀವು ಮಾಂಸ ಭಕ್ಷಣೆ ಮಾಡುತ್ತೀರಾ' ಎಂದನಂತೆ. ಅದಕ್ಕೆ ಮೋತಿಲಾಲ್ 'ಹೌದು' ಎಂದರಂತೆ. ಕೂಡಲೇ ಆತ 'ಹಾಗಾದರೆ ನೀವು ಗೋಮಾಂಸ ತಿನ್ನುತ್ತೀರಾ' ಎಂದನಂತೆ. ಮೋತಿಲಾಲ್ 'ಗೋಮಾಂಸ ಮುಟ್ಟುವುದಿಲ್ಲ, ಆದರೆ ಗೋಮಾಂಸ ತಿನ್ನುವವನ ಮಾಂಸವನ್ನು ಹುರಿದು ಕೊಟ್ಟರೆ ಖಂಡಿತ ತಿನ್ನಬಲ್ಲೆ' ಎಂದರಂತೆ." ಇಂತಹ ಕತೆ ಹೇಳಿ ಚಪ್ಪಾಳೆ ಗಿಟ್ಟಿಸಿದ ಆ ಸ್ವಾಮಿಯ ಮನಸ್ಸಿನಲ್ಲಿದ್ದ ಮತ್ತು ಪೇಜಾವರರ ಪುರಾಣದ ಕತೆಯಲ್ಲಿದ್ದ ರಾಕ್ಷಸರು ಮುಸ್ಲಿಮರು, ದಲಿತರಲ್ಲದೆ ಬೇರೆ ಇರಲು ಸಾಧ್ಯವೇ?

ನಮ್ಮ ನಡುವೆ ಬಡತನ, ಅಜ್ಞಾನ ಮತ್ತು ಮತಾಂಧತೆಯಿಂದ ಬದುಕುತ್ತಿರುವ ಮುಸ್ಲಿಮರನ್ನು ಕೆಣಕಿ ಕೆಣಕಿ ಮತ್ತಷ್ಟು ಮತಾಂಧರನ್ನಾಗಿ ಮಾಡುತ್ತಿರುವ ಈ ಮಹಾ ಮತಾಂಧರು, ಮುಸ್ಲಿಮರ ನಂತರ ದಲಿತರನ್ನು ಅದೇ ಮಟ್ಟದಲ್ಲಿ ನೋಡುವಂತಹವರು. ಇಲ್ಲದಿದ್ದರೆ ಈ ಮಹಾಸತ್ರದಲ್ಲಿ ಒಬ್ಬನಾದರೂ ಮುಸ್ಲಿಮ್, ದಲಿತ ಅತಿಥಿ ಅಥವಾ ಮಂತ್ರಿ-ಶಾಸಕ ಇರಬೇಕಿತ್ತು. ಜಯಕುಮಾರನನ್ನೋ ಅಥವಾ ಈಶ್ವರಪ್ಪನನ್ನೋ ಹಿಂದುಳಿದವನು, ದಲಿತ ಎಂದು ಗುರುತಿಸಲಾಗುವುದಿಲ್ಲ, ಏಕೆಂದರೆ ಭಟ್ಟಂಗಿಗಳು ಎಲ್ಲಾ ವರ್ಗವನ್ನು ಮೀರಿದವರಾಗಿರುತ್ತಾರೆ. ಭಟ್ಟಂಗಿಗಳ ಇನ್ನೊಂದು ವಿಶೇಷವೆಂದರೆ ಅವರಿಗೆ ನಾಚಿಕೆ, ಮಾನ, ಮರ್ಯಾದೆಗಳಿರುವುದಿಲ್ಲ.

ಕಾರ್ಯಕ್ರಮ ನಿರೂಪಿಸುತ್ತಿದ್ದ ಚೆಡ್ಡಿಯೊಂದು ವಿಜಯ ಕರ್ನಾಟಕ ಪತ್ರಿಕೆ ಸಂಪಾದಕ ವಿಶ್ವೇಶ್ವರ ಭಟ್ಟ ಮಾತನಾಡುವ ಸಮಯ ಬಂದಾಗ "ಸುಂದವಾಗಿರುವ ವಿಶ್ವೇಶ್ವರ ಭಟ್ಟರು ಸುಂದರವಾಗಿ ಮಾತನಾಡುತ್ತಾರೆ" ಎಂದ. ಈ ವಿಕೃತ ಮನಸ್ಸಿನ ನಿರೂಪಕನ ಮಾತಿಗೆ ಆ ಕೂಡಲೇ ಕುಮಾರಸ್ವಾಮಿ, ಜಯಕುಮಾರ್ ಮತ್ತು ಈಶ್ವರಪ್ಪನ ಮುಖದಲ್ಲಾದರೂ ಪ್ರತಿಭಟನೆ ವ್ಯಕ್ತವಾಗಬೇಕಿತ್ತು, ಪಾಪ ಅವರಿಗೆ ಈ ವಿಪ್ರೋತ್ತಮರ ನವ್ಯ ಭಾಷೆ ಅರ್ಥವಾದರೆ ತಾನೆ. ಅದರಲ್ಲೂ ಸಂಪೂರ್ಣವಾಗಿ ತಮ್ಮ ತಲೆಯನ್ನು ಮಹಾಸತ್ರದ ಸೂತ್ರದಾರರಿಗೆ ಒಪ್ಪಿಸಿದ ಫಲವಾಗಿ ತಮ್ಮ ಆಲೋಚನೆಯನ್ನೇ ಕಳೆದುಕೊಂಡಿದ್ದರು.

ಇಲ್ಲವಾದರೆ ಇಪ್ಪತ್ತೈದು ಸಾವಿರ ಕೆ.ಜಿ. ಹಸುವಿನ ತುಪ್ಪವನ್ನು ಬೆಂಕಿಗೆ ಸುರಿದ ಜಾಗದಲ್ಲಿ ಭಯಭಕ್ತಿಯಿಂದ ಹಳದಿ ವಸ್ತ್ರದಾರಿಗಳಾಗಿ ಅಡ್ಡಾಡುತ್ತಿರಲಿಲ್ಲ. ಮಠದವರೇ ಹೇಳುವ ಪ್ರಕಾರ ಈ ರಾಮಾಯಣ ಮಹಾಸತ್ರಕ್ಕೆ ಆಗಿರುವ ಖರ್ಚು ಒಂಭತ್ತು ಕೋಟಿಯಂತೆ. ಆದರೆ ಸಂಗ್ರಹ ಮಾಡಿದ ಹಣದ ಮೊತ್ತವನ್ನು ಯಾರೂ ಬಾಯಿಬಿಡುವುದಿಲ್ಲ.

ಒಬ್ಬ ವಿಕೃತ ಮನಸ್ಸಿನ ಚೆಡ್ಡಿ "ಅಮೀರ್ ಖಾನ್ ನರ್ಮದಾ ಬಚಾವೊ ಆಂದೋಲನಕ್ಕೆ ಬೆಂಬಲಿಸುತ್ತಾನೆ. ಆದರೆ ಕಾಶ್ಮೀರಿ ಪಂಡಿತರು ಇನ್ನೂ ನಿರಾಶ್ರಿತರಾಗಿದ್ದಾರೆ. ಅವರ ಬಗ್ಗೆ ಏಕೆ ಕಾಳಜಿಯಿಲ್ಲ" ಎಂದು ಕೇಳುತ್ತಾನೆ. ನಮ್ಮ ಪ್ರಶ್ನೆಯೂ ಅದೇ: ರಾಮಸತ್ರದ ಒಂಭತ್ತು ಕೋಟಿಯಲ್ಲಿ ಒಂದೈದು ಕೋಟಿಯನ್ನು ತಮ್ಮ ಬಂಧುಬಾಂಧವರಾದ ಕಾಶ್ಮೀರಿ ಪಂಡಿತರಿಗೆ ಹಂಚಿ, ಹಲವು ಸಾವಿರ ಕೆ.ಜಿ. ತುಪ್ಪದ ಬಾಟಲಿಗಳನ್ನು ಕೊಡಬಹುದಿತ್ತಲ್ಲ ಎಂದು.

ರಾಮಚಂದ್ರಾಪುರದ ಮಠದಲ್ಲಿ ನಡೆದ ಮಹಾಸತ್ರದಲ್ಲಿ ಮೆರೆದ ವಿಪ್ರೋತ್ತಮರೆಲ್ಲಾ ಅರೆಬೆತ್ತಲೆಯಾಗಿದ್ದು ಉಳಿದ ಜನಗಳಿಗಿಂತ ಬೇರೆಯಾಗಿಯೇ ಗುರುತಿಸಿಕೊಂಡರು, ಬೇರೆಯಾಗಿಯೇ ಉಂಡರು. ಸ್ವತಃ ಮುಖ್ಯಮಂತ್ರಿಯೇ ಓರ್ವ ಸಾಮಾನ್ಯ ಕಾರ್ಯಕರ್ತನಂತೆ ಓಡಾಡಿದ್ದು ಅವರಿಗೆ ಎಲ್ಲಿಲ್ಲದ ಸ್ಫೂರ್ತಿ ತಂದುಕೊಟ್ಟಿತ್ತು. ಬಿಜೆಪಿ ಮುಖ್ಯಮಂತ್ರಿಯೇ ಬಂದಿದ್ದರೂ ಇಷ್ಟರಮಟ್ಟಿಗೆ ಭಾಗವಹಿಸಲು ಅಂಜಿಕೊಳ್ಳುತ್ತಿದ್ದನೋ ಏನೋ. ಆದರೆ ಕುಮಾರಸ್ವಾಮಿ "ಈ ನೆಲ ನನಗೆ ಬಹಳ ಸಂತಸ ನೀಡಿದೆ" ಎಂದು ಘೋಷಿಸಿದ್ದಲ್ಲದೆ ವಿಪ್ರೋತ್ತಮರೇ ಬರೆದು ಕೊಟ್ಟ ಭಾಷಣವನ್ನು ಓದಿದರು. ಅದೂ ಸಾಲದೆಂಬಂತೆ ಲಿಖಿತ ಭಾಷಣವನ್ನೂ ಮೀರಿಸಿ ಮಾತನಾಡಿದರು. ಅಲ್ಲಿಗೆ ಬಂದಿದ್ದ ದಳದವರು ಅಂತೂ ನಮ್ಮ ಮುಖ್ಯಮಂತ್ರಿ ಬಿಜೆಪಿ ಮುಖ್ಯಮಂತ್ರಿಯಾಗಿ ಹೋದರು ಎಂದು ದಿಲ್ಲಾಗಿದ್ದರು. ವಿಶೇಷವೆಂದರೆ ಈ ಮಹಾಸತ್ರಕ್ಕೆ ಯಡಿಯೂರಪ್ಪನಿಗೆ ಆಹ್ವಾನವಿರಲಿಲ್ಲ!

ಹಾಗೆ ನೋಡಿದರೆ ಚೆಡ್ಡಿ ಡಿಸಿಎಂ ಯಡ್ಡಿಗಿಂತ ಕುಮಾರಸ್ವಾಮಿ ಚೆಡ್ಡಿಗಳ ಸಿಎಂ ಆಗುವತ್ತ ಸಾಗಿರುವುದು ದಳದವರ ಅರಿವಿಗೆ ಬರತೊಡಗಿದೆ. ಕುಮಾರಸ್ವಾಮಿ ಸುತ್ತ ಮುತ್ತಿಕೊಂಡಿರುವ ಚೆಡ್ಡಿಗಳನ್ನು ಬೇಧಿಸಿ ಹತ್ತಿರ ಸುಳಿಯಲಾರದ ದಳದ ಕಾರ್ಯಕರ್ತರು ಎಷ್ಟು ನಿರುತ್ಸಾಹಗೊಂಡಿದ್ದಾರೆಂದರೆ, ಶಿವಮೊಗ್ಗದಲ್ಲಿ ನಡೆದ ಮುಖ್ಯಮಂತ್ರಿ ಸಭೆಯಲ್ಲಿ ಖಾಲಿ ಕುರ್ಚಿಗಳಿರುವಂತೆ ನೋಡಿಕೊಂಡರು. ಏಕೆಂದರೆ ಅಷ್ಟರ ಮಟ್ಟಿಗೆ ಬಿಜೆಪಿ ಜನಗಳು ಮುಖ್ಯಮಂತ್ರಿ ಸುತ್ತ ಮುತ್ತಿಕೊಂಡು ದಳದವರಿಗೆ ಜಾಗವಿಲ್ಲದಂತೆ ಮಾಡಿದ್ದರು.

ಸರ್ಕಾರವನ್ನು ಹೀರಿಕೊಂಡು ಬೆಳೆಯುವ ಶಕ್ತಿ ಬಿಜೆಪಿಗಳಿಗೆ ಮಾತ್ರ ಇರುವುದರಿಂದ ದಳದ ಬಟಾವಡೆ ಕಾರ್ಯಕರ್ತರು ಒಂದು ರೀತಿಯಲ್ಲಿ ನಿಷ್ಕ್ರಿಯರಾಗಿ ಹೋಗುತ್ತಿದ್ದಾರೆ. ಆದ್ದರಿಂದ ಶಿವಮೊಗ್ಗ ಜಿಲ್ಲೆಯಲ್ಲಿ "ಕೋಡಗನ ಕೋಳಿ ನುಂಗಿತ್ತಾ ನೋಡವ್ವ ತಂಗಿ" ಎನ್ನುವಂತೆ ದಳವನ್ನು ಬಿಜೆಪಿ ಆಪೋಶನ ತೆಗೆದುಕೊಳ್ಳುತ್ತಿದೆ. ರಾಮಚಂದ್ರಾಪುರ ಮಠದಲ್ಲಿ ನಡೆದ ಮಹಾಸತ್ರಕ್ಕೆ ಬಂದ ಲಕ್ಷಾಂತರ ಜನ ಮುಂದೆ ಬಿಜೆಪಿಗೆ ಓಟು ಮಾಡಬಲ್ಲರೇ ಹೊರತು ಅವರಿಗೆ ಕುಮಾರಸ್ವಾಮಿಯ ದಳಕ್ಕೆ ಓಟು ಮಾಡುವ ಅಗತ್ಯ ಕಂಡುಬರುವುದಿಲ್ಲ! ಇದು ಕುಮಾರಸ್ವಾಮಿಗೆ ಅರ್ಥವಾಗುವ ಹೊತ್ತಿಗೆ ಕಾಲ ಮಿಂಚಿ ಹೋಗಿರುತ್ತದೆ.

-ವರದಿಗಾರ

ರಾಘವನ ಗೋವಿನ ಕತೆ



ರಾಘವೇಶ್ವರ ತಮ್ಮ ಮುಂದಿನ ಆಯುಸ್ಸನ್ನು ಗೋರಕ್ಷಣೆಗೆಂದು ಮೀಸಲಿಟ್ಟಿದ್ದಾರೆ. ಇದಂತೂ ಒಳ್ಳೆಯ ತೀರ್ಮಾನ. ರಾಘವರ ಸಂತತಿಯವರಿಗೆ ಗೋವು ಎಂದರೆ ಹಸು ಮಾತ್ರ. ಅದೂ ಕರಾವಿನ ಹಸು. ಎತ್ತು, ಗೊಡ್ಡು ಹಸ, ಕರ, ಮಣಕ ಇವುಗಳನ್ನು ಕಂಡರೆ ಅವರಿಗೆ ಅಷ್ಟಕ್ಕಷ್ಟೇ. ಕರಾವಿನ ಹಸುವಾದರೆ ಹಾಲು ಕರೆದು, ಮೊಸರು ಮಾಡಿಕೊಂಡು, ಬೆಣ್ಣೆ ತೆಗೆದು, ತುಪ್ಪ ಕಾಯಿಸಿ ಶಿಖಾಮಣಿ ನೆಟ್ಟಗೆ ನಿಲ್ಲುವಂತೆ ಭೋಜನ ಬಾರಿಸಬಹುದು.

ಆದ್ದರಿಂದ ವಿಪ್ರೋತ್ತಮರು ಬಹು ಹಿಂದಿನಿಂದಲೂ ಕರಾವಿನ ಹಸುವನ್ನೇ ಪ್ರೀತಿಸುತ್ತ ಬಂದಿದ್ದಾರೆ. ಶೂದ್ರ ಸಮೂಹದವರು ಗೃಹಗತಿ ಕೇಳಲು, ಮಕ್ಕಳಿಗೆ ಹೆಸರು ಕೇಳಲು ಹೋದಾಗೆಲ್ಲಾ ಇವರು ಗೋದಾನ ಕೇಳಿದ್ದಾರೆ. ಆ ಗೋವು ಕರಾವಿನ ಹಸುವಾಗಿ ರಬೇಕು. ಕ್ರಮೇಣ ಸಿಟಿ ಸೇರಿಕೊಂಡ ಈ ಜೋಯಿಸರು, ಸಿಟಿಯಲ್ಲಿ ಹಾಲು ಸಿಗುವುದರಿಂದ ಬೆಳ್ಳಿ, ಹಸು ಕೇಳತೊಡಗಿದ್ದಾರೆ. ಈಗಲೂ ಈ ಪದ್ಧತಿ ಮುಂದುವರಿದಿದೆ. ಇರಲಿ. ಈ ರಾಘವ ಗೋಸಂರಕ್ಷಣೆ ಮಾಡುವುದೂ ಕೂಡ ಹೊಳೆಯಲ್ಲಿ ಹುಣಸೇಹಣ್ಣು ತೇಯ್ದು ಕೆಲಸದಂತೆ ನಿರರ್ಥಕವಾಗಿ ಕಾಣತೊಡಗಿದೆ. ಏಕೆಂದರೆ ಗೋವುಗಳಿಂದ ಪಡೆಯುವ ತುಪ್ಪವನ್ನು ಈತ ಅನಾಮತ್ತು ಬೆಂಕಿಗೆ ಸುರಿಯುತ್ತಾನೆ. ಅದೂ ಇಪ್ಪತ್ತೈದು ಸಾವಿರ ಕೇಜಿಯನ್ನು.

ಏಕೆ ಎಂದು ಕೇಳಿದರೆ ಈ ತುಪ್ಪದ ವಾಸನೆಯಿಂದ ಹೃದ್ರೋಗಿಗಳು ಸರಿಯಾದರಂತೆ. ಬಿಪಿ, ಶುಗರು, ಮನಃಕ್ಲೇಶ ಎಲ್ಲವೂ ಹತಬಂದಿಗೆ ಬಂದಿದೆಯಂತೆ. ಇದಕ್ಕಿಂತ ಮುಖ್ಯವಾಗಿ ಈಗಾಗಲೇ ಈ ತುಪ್ಪದ ಜರಡಿ ಓಜೋನ್ ತೂತುಗಳನ್ನು ಮುಚ್ಚಲು ಶುರು ಮಾಡಿದೆಯಂತೆ ಎಂದೆಲ್ಲಾ ಹೇಳುತ್ತಾರೆ. ಈ ಬಗ್ಗೆ ವಿವರ ಕೊಡಲೆಂದು ಒಂದಿಷ್ಟು ಢೋಂಗಿ ಜನರನ್ನು [illegible] ಪಂಡಿತರಂತೆಯೇ ಕಾಣುತ್ತಾರೆ.

ರಾಘವರ ಗೋರಕ್ಷಣಾ ಕಾರ್ಯದಲ್ಲಿ ಎಮ್ಮೆಗಳಿಗೆ ಸ್ಥಾನವಿಲ್ಲ. ಹಾಗೆ ನೋಡಿದರೆ, ಎಮ್ಮೆಗಳ ಸಂತತಿ ಗೋವಿಗಿಂತಲೂ ವೇಗವಾಗಿ ನಾಶವಾಗುತ್ತಿದೆ. ಎಮ್ಮೆಯ ಗಂಡುಗರುವನ್ನು ಯಾರೂ ಸಾಕುವುದಿಲ್ಲ. ಇನ್ನು ಹಾಲಿಗಾಗಿ ಸಾಕುವ ಎಮ್ಮೆಗಳ ಬದಲು ಸೀಮೆಹಸು ಬರುತ್ತಿವೆ. ಆದ್ದರಿಂದ ಎಮ್ಮೆ ರಕ್ಷಣೆಯನ್ನು ರಾಘವರು ಯಾರಿಗೆ ಬಿಟ್ಟಿದ್ದಾರೋ ಗೊತ್ತಿಲ್ಲ. ಅಥವಾ ಗೋವನ್ನು ಮಾತೆ ಎನ್ನುವ ಅವರು, ಎಮ್ಮೆಯನ್ನು ಮಾರಿ ಎಂದು ಭಾವಿಸಿದ್ದಾರೋ ಏನೋ.

ತಮ್ಮ ಮಠದಲ್ಲಿ ದಿನವಿಡೀ ಇದ್ದ ಮುಖ್ಯಮಂತ್ರಿಗಳಿಗೆ ರಾಘವೇಶ್ವರ ಗುಜರಾತ್‌ನ ಗೀರ್ ತಳಿ ಹಸುಕರುವನ್ನು ದಾನವಾಗಿ ನೀಡಿದರು. ಇದು ಮುಖ್ಯಮಂತ್ರಿಗಳಿಗೆ ಒಂದು ತಗಳೆಯಾಗಿ ಕಂಡಿರಬೇಕು. ಏಕೆಂದರೆ ಅವರಿಗೀಗ ದನಗಳಿಗಿಂತ ಜನಗಳು ಬೇಕಿದೆ. ಅದರಲ್ಲೂ ದಷ್ಟ ಜನಗಳು! ದನಗಳಿಂದಲೇ ರಾಜಕೀಯ ಮಾಡುವ ಬಿಜೆಪಿಗಳ ಚಾಲಾಕು ಪಾಪ ಈ ಮುಖ್ಯಮಂತ್ರಿಗೆ ಇಲ್ಲ ಬಿಡಿ.

ಗೋರಕ್ಷಣೆ ನೆಪದಲ್ಲಿ ನಮ್ಮ ನಡುವಿನ ದಲಿತ, ಅಲ್ಪಸಂಖ್ಯಾತ [illegible] ವರ್ಗವನ್ನು ಮುಖ್ಯವಾಹಿನಿಯಿಂದ ಬೇರ್ಪಡಿಸುವ [illegible] ಈ ರಾಘವೇಶ್ವರ. ಇಂತಹದ್ದನ್ನೆಲ್ಲ ಹಿಂದೂಗಳು ತಿರಸ್ಕರಿಸಿ, ಭಾರತ ಹಿಂದಿನಿಂದಲೂ ಕಾಯ್ದುಕೊಂಡು ಬಂದ ಮತೀಯ ಸಾಮರಸ್ಯದ [illegible] [illegible] ರಾಮಚಂದ್ರಾಪುರವನ್ನು ಅಯೋಧ್ಯೆ ಮಾಡುತ್ತೇನೆಂದು ಮುಖ್ಯಮಂತ್ರಿ [illegible] [illegible]

ಹುಬ್ಬಳ್ಳಿ

ಕಳೆದ ಶುಕ್ರವಾರ ಸಂಜೆ ಕೋಲ್ಮಿಂಚಿನಂತೆ ಬಂದ ಸುಪ್ರೀಮ್ ಕೋರ್ಟ್ ಹುಕುಂ, ಹುಬ್ಬಳ್ಳಿ ಮೂರು ಸಾವಿರ ಮಠದ ಈಗಿನ ಮಠಾಧಿಪತಿ ಗುರುಸಿದ್ಧ ರಾಜಯೋಗೀಂದ್ರರ ನಿದ್ದೆ ಗೆಡಿಸಿದೆ. ತನ್ನ ಪೀಠ ಅಬಾಧಿತ ಎಂಬ ಬಿಗುವಿನಲ್ಲಿದ್ದ ಗುರುಸಿದ್ಧರು ಥರ ಥರ ನಡುಗುತ್ತಿದ್ದಾರೆ. 2005 ರ ಮಾರ್ಚ್ 11 ರಂದು ಕರ್ನಾಟಕ ಹೈಕೋರ್ಟ್ ತೀರ್ಪು ಬಂದಾಗಿನಿಂದ ಆತಂತ್ರ ಮನೋವ್ಯಾಧಿ ಗುರುಸಿದ್ಧರನ್ನು ಕಾಡತೊಡಗಿತ್ತು. ಆನಂತರ ವಿಚಾರಣೆ ಕೆಲಸವನ್ನು ಮರಳಿ ಹಳೆಯ ಪಂಚಪೀಠಾಧೀಶರ ಪಂಚ ಕಮಿಟಿಗೆ ಒಪ್ಪಿಸಿದ್ದರಿಂದ ಗುರುಸಿದ್ಧ ರಾಜರು ಸ್ವಲ್ಪ ನೆಮ್ಮದಿಯಿಂದ ಉಸಿರಾಡುವಂತಾಗಿತ್ತು.

ನ್ಯಾಯವಾಗಿ ತನಗೆ ದಕ್ಕಬೇಕಾದ ಪೀಠವನ್ನು ದನ್ನ ತೋದರೂ ಬಿಡುವುದಿಲ್ಲವೆಂದು ಗಂಡಗಚ್ಚೆ ಹಾಕಿ ನಿಂತಿರುವ ರುದ್ರಮುನಿಗಳು ಪಂಚ ಕಮಿಟಿಗೆ ನ್ಯಾಯ ನಿರ್ಣಯ ಒಪ್ಪಿಸುವ ವಿಚಾರದ ವಿರುದ್ಧ ಸುಪ್ರೀಂ ಕೋರ್ಟ್ ಕದ ತಟ್ಟಿದರು. ಹೈಕೋರ್ಟ್ ತೀರ್ಪು ಹೊರ ಬಂದು ಎರಡು ತಿಂಗಳ ಒಳಗೆ ರುದ್ರಮುನಿ ಅವರ ಅಪೀಲು ದಿಲ್ಲಿಯಲ್ಲಿ ದಾಖಲಾಗಿತ್ತಾದರೂ ಅದು ವಿಚಾರಣೆಯ ಹಂತಕ್ಕೆ ಬರಲು ಒಂದು ವರ್ಷ ಹಿಡಿಯಿತು. ಹಿಂದೆ ರುದ್ರಮುನಿ ದೇವರ ಕಾಟದಿಂದ ಪಾರಾಗಲು ಗುರುಸಿದ್ಧರಿಗೆ ಅವಸರದಲ್ಲಿ 1999 ರ ಮಾರ್ಚ್ 29 ರಂದು ಪಟ್ಟಾಭಿಷೇಕ ಮಾಡಿದ ದೊಡ್ಡ ಸ್ವಾಮಿ ಗಂಗಾಧರ ರಾಜಯೋಗೀಂದ್ರರು (ಮೂಜಗಂ) 2003 ರ ಮೇನಲ್ಲಿ ಶಿವನ ಪಾದ ಸೇರಿದರು. ಸುಪ್ರೀಂ ಕೋರ್ಟ್‌ನ ಪಂಚ ಕಮಿಟಿ ವಿಚಾರಣೆ ಕಾಲಕ್ಕೆ ದೊಡ್ಡ ಸ್ವಾಮಿ ಗಂಗಾಧರ ರಾಜಯೋಗೀಂದ್ರ ಮತ್ತು ಮರಿಸ್ವಾಮಿ ರುದ್ರ ಮುನಿ ದೇವರ ಬೆಂಬಲಿಗರ ನಡುವೆ ಆದ ಬೀದಿ ಜಗಳವನ್ನು ಹುಬ್ಬಳ್ಳಿ ಧಾರವಾಡ ಜನರು ಇನ್ನೂ ಮರೆತಿಲ್ಲ.

ದೊಡ್ಡ ಸ್ವಾಮಿಯ ವಾರಸುದಾರನಾಗಿ ಪೀಠಾಧಿಪತಿ ಹುದ್ದೆಯಲ್ಲಿ ಇರುವ ಗುರುಸಿದ್ಧ ರಾಜಯೋಗೀಂದ್ರ ಮತ್ತು ರುದ್ರಮುನಿ ದೇವರ ನಡುವೆ ಅದೇ ರೀತಿಯ ಬೀದಿ ಕಾಳಗ ಈಗ ನಡೆಯಲಿಕ್ಕಿಲ್ಲ ಎಂಬ ನಿರೀಕ್ಷೆ ಇದೆ. ಸುಪ್ರೀಂ ಕೋರ್ಟ್ ಹುಕುಂ ಪ್ರಕಾರ ಕಲ್ಕತ್ತಾ ಹೈಕೋರ್ಟ್‌ನ ಮಾಜಿ ನ್ಯಾಯಾಧೀಶರ ಅಶುತೋಷ ಮುಖರ್ಜಿ ಅವರು ಹುಬ್ಬಳ್ಳಿಗೆ ಬಂದು ಮೂರು ಸಾವಿರ ಮಠದ ಪೀಠಾಧ್ಯಕ್ಷ ಹುದ್ದೆ ಸುತ್ತ ಇರುವ ತಂಟೆಯನ್ನು ವಿಚಾರಿಸಿ ಹೋಗಿದ್ದಾರೆ. ಒಂದು ತಿಂಗಳೊಳಗೆ ಸುಪ್ರೀಂಕೋರ್ಟಿನ ನ್ಯಾಯಮೂರ್ತಿಗಳಾದ ಡಿ.ಎನ್. ಕೃಷ್ಣ ಮತ್ತು ತರುಣ ಚಟರ್ಜಿ ಅವರ ತಂಡ ಪೀಠಕ್ಕೆ ವರದಿ ಸಲ್ಲಿಸಬೇಕಿದೆ. ಪಂಚ ಪೀಠಾಧೀಶರ ಕಮಿಟಿಯವರು ಮಾಡಿದ್ದು ಹುಂಬತನ ಎಂಬುದು ಈಗ ಜಗಜ್ಜಾಹಿರಾಗಿದೆ. ಕಾಯ್ದೆ, ನಿಯಮ, ಸೂತ್ರ, ನೀತಿ ಎಲ್ಲವನ್ನು ಗಾಳಿಗೆ ತೂರಿ ಅವಸರದಲ್ಲಿ ವಿಚಾರಣೆ ಮುಗಿಸಿ, ಜಗತ್ತಿನ ಒಂದು ಯಾವುದೋ ಸಣ್ಣ ಮೂಲೆಯಲ್ಲಿದ್ದ ಹಾನಗಲ್ಲ ವಿರಕ್ತ ಮಠದ ಕುಮಾರ ಸ್ವಾಮಿಯನ್ನು ಹುಬ್ಬಳ್ಳಿಗೆ ಎಳೆದು ತಂದು ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿ ಎಂದು ನಾಮಕರಣ ಮಾಡಿ, ಅಂಚಟಗೇರಿ ಓಣಿಯ ಸಂದಿಯಲ್ಲಿರುವ ಮೂರು ಸಾವಿರ ಮಠದ ಜಗದ್ಗುರುವಿನ ಪೀಠಕ್ಕೆ ಬಿಗಿದು ಕಟ್ಟಿ ಜಗಳ ಬಗೆಹರಿಯಿತು ಎಂದು ಸಾರಿ ಪಂಚ ಕಮಿಟಿ ಕೈ ತೊಳೆದುಕೊಂಡಿತ್ತು. ಸುತ್ತೂರು ಸಂಸ್ಥಾನ ಮಠದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ನೇತೃತ್ವದ ಸರಪಂಚ ಕಮಿಟಿಯ ವರ್ತನೆಯನ್ನು ಹೈಕೋರ್ಟ್ ತನ್ನ ತೀರ್ಪಿನಲ್ಲಿ



ಎಳೆಎಳೆಯಾಗಿ ಹೇಳಿದೆ. ಲಕ್ಷಾಂತರ ಮುಗ್ಧ ಭಕ್ತರಿಗೆ ಪೂಜ್ಯಸ್ಥಳವಾದ, ಕೋಟ್ಯಂತರ ರೂಪಾಯಿಗಳ ಆಸ್ತಿಯ ಒಡೆತನ ಪಡೆದಿರುವ ಉತ್ತರ ಕರ್ನಾಟಕದ ಈ ಮಠದ ಉತ್ತರಾಧಿಕಾರಿ ವಿವಾದವನ್ನು 1996 ಆರ್ಬಿಟ್ರೇಷನ್ ಕಾಯ್ದೆಯ ಚೌಕಟ್ಟಿನೊಳಗೆ ವಿಚಾರಿಸಿ ನ್ಯಾಯ ನಿರ್ಣಯ ಕೊಟ್ಟಿದ್ದರೆ ಪಂಚ ಕಮಿಟಿ ಒಳ್ಳೆಯ ಹೆಸರು ಗಳಿಸಬಹುದಿತ್ತು. ಪಂಚ ಕಮಿಟಿಯ ನಿರ್ಣಯಕ್ಕೆ ಕೋರ್ಟ್ ತೀರ್ಪಿನಷ್ಟೇ ವಜನ ಇರುತ್ತಿತ್ತು.

ಪಂಚ ಕಮಿಟಿ ಹಾದಿ ಬಿಟ್ಟು ಏಕಪಕ್ಷೀಯವಾಗಿ ನಡೆದು ಕೊಂಡಿರುವುದು ಹೈಕೋರ್ಟಿನ ತೀರ್ಪಿನಿಂದ ಸ್ಪಷ್ಟವಾಗುತ್ತದೆ. ಕಾಯ್ದೆ ಕಾನೂನಿನ ಮೂಲಾಕ್ಷರದ ಪರಿಚಯ ಇಲ್ಲದ ಅದೇ ಪಂಚ ಕಮಿಟಿಗೆ ಮತ್ತೊಮ್ಮೆ ನ್ಯಾಯ ನಿರ್ಣಯದ ಜವಾಬ್ದಾರಿ ಒಪ್ಪಿಸಿದರೆ ಮೊದಲಿನಂತೆ ಖಂಡಿತ ರಾಡಿಯಾಗುವುದು ಎಂಬ ಮರ್ಮಾರ್ಥ ಸುಪ್ರೀಂ ಕೋರ್ಟ್ ಹುಕುಂನಲ್ಲಿ ಇದೆ. ಉತ್ತರಾಧಿಕಾರಿ ಜಗಳ ಕೇವಲ ರುದ್ರಮುನಿ ದೇವರು ಮತ್ತು ಗುರುಸಿದ್ಧ ರಾಜಯೋಗೀಂದ್ರರ ನಡುವಿನ ಬೀದಿ ಕಚ್ಚಾಟವಲ್ಲ, ಇದರಲ್ಲಿ ಕಾಯ್ದೆ ಕಾನೂನಿನ ಪೇಚು ಅಡಕವಾಗಿದೆ. ಆದ್ದರಿಂದ ಕಾಯ್ದೆ ಬಲ್ಲವರಿಂದ, ನ್ಯಾಯ ನಿರ್ಣಯದ ಅನುಭವ ಹೊಂದಿದವರಿಂದ ಈ ಜಗಳ ಬಗೆಹರಿಸಬೇಕೆಂಬ ಸದಿಚ್ಛೆ ಸುಪ್ರೀಂಕೋರ್ಟಿನ ಹುಕುಮಿನ ತಿರುಳಾಗಿದೆ. ಈ ಹಿನ್ನೆಲೆಯಲ್ಲಿ 1999ರ ವಿಚಾರಣೆಯ ಸಂದರ್ಭ ದಲ್ಲಿ ಆದ ಅನುಚಿತ ಪ್ರಸಂಗಗಳು ನ್ಯಾಯ ಮೂರ್ತಿ ಅಶುತೋಷ ಮುಖರ್ಜಿ ಅವರ ಮುಂದೆ ನಡೆಯಲಾರವು ಎಂಬ ಭರವಸೆ ಇದೆ.

ಜಗಳದ ಮೂಲ

ಜನ್ಮದುದ್ದಕ್ಕೂ ಲಿಂಗಾನಂದ ಅನುಭವಿಸಿ ಲಿಂಗೈಕ್ಯರಾದ ಡಾ. ಗಂಗಾಧರ ರಾಜ ಯೋಗೀಂದ್ರರಿಗೆ ಯಾವುದೋ ಅಪಶಕುನದ ವೇಳೆ ವಾರಸುದಾರನ ನೇಮಕದ ವಿಚಾರ ಹೊಳೆದಿರಬಹುದು ಅಂತಾ ಕಾಣುತ್ತದೆ. ಆದ್ದರಿಂದಲೇ ಉತ್ತರಾಧಿಕಾರಿಯ ಜಗಳ ಹೊತ್ತಿಸಿದ ಬೆಂಕಿ ಸಮಾಧಿಯಲ್ಲೂ ಅವರಿಗೆ ಕಾಟ ಕೊಡುತ್ತಿದೆ. 1991ರ ಅಕ್ಟೋಬರ್‌ನಲ್ಲಿ ಗಂಗಾಧರ ರಾಜಯೋಗೀಂದ್ರರ ಆಶೀರ್ವಾದದ ಬಲದಿಂದ ರುದ್ರಮುನಿ ದೇವರು ಮೂರು ಸಾವಿರ ಮಠದ ಮರಿದೇವರಾಗಿ ಅವತರಿಸಿದರು. ತಾನು ಸರ್ವಸಂಗ ಪರಿತ್ಯಾಗಿ, ಪರಮ ಸನ್ಯಾಸಿ, ಅಪ್ಪಟ ಬ್ರಹ್ಮಚಾರಿ ಎಂದು ಪ್ರಚಾರ ಮಾಡಿಸಿಕೊಂಡಿದ್ದ ಗಂಗಾಧರ ರಾಜ ಯೋಗೀಂದ್ರರಿಗೆ ಒಬ್ಬ ಮನುಷ್ಯನಿಗೆ ಇರಬೇಕಾದಕ್ಕಿಂತ ಹೆಚ್ಚಿನ ಮೋಹ, ವ್ಯಾಮೋಹ, ಪ್ರೇಮ, ಅನುರಾಗ, ಸಿಟ್ಟು, ಈರ್ಷ್ಯೆ, ಹಗೆತನ ಇವೆಲ್ಲಾ ಗುಣಗಳು ಮೆತ್ತಿದ್ದವು. ಆ ಕಾರಣದಿಂದಲೇ ಮಠದ ಅಪರಂಪಾರ ಆಸ್ತಿಗೆ ತಮ್ಮ ಮನೆತನದವನೆ ವಾರಸುದಾರನಾಗಬೇಕು ಎಂಬ ಮಹದಾಸೆಯಿಂದ ರುದ್ರಮುನಿಯವರನ್ನು ಕರೆತಂದು ಮರಿ ಸ್ವಾಮಿಗಳನ್ನಾಗಿ ಮಾಡಿದ್ದರು. ವಾತ್ಸಲ್ಯದ ಸಲಿಗೆಯಿಂದಾಗಿ ರುದ್ರಮುನಿಯವರು ಕೊಂಚ ಹೆಚ್ಚು ಕಡಿಮೆ ನಡೆದುಕೊಂಡಿರಬಹುದು. ಅದು ಗಂಗಾಧರ ರಾಜಯೋಗೀಂದ್ರರರಿಗೆ ಹಿಡಿಸಲಿಲ್ಲ, ತನ್ನ ಮರಿಸ್ವಾಮಿ ವಿರುದ್ಧ ಭಕ್ತರನ್ನು 'ಛೂ' ಬಿಟ್ಟರು. ರುದ್ರಮುನಿಯವರ ಚರಿತ್ರಹರಣಕ್ಕೂ ಮುಂದಾದರು. ಇವರಿಬ್ಬರ ನಡುವೆ ಗುರುಶಿಷ್ಯ ಸಂಬಂಧ, ವಿಶ್ವಾಸ ನಾಲ್ಕು ವರ್ಷದೊಳಗೆ ಮುರಿದು ಹೋಯಿತು. 1995 ರ ಅಕ್ಟೋಬರ್‌ನಲ್ಲಿ ಗಂಗಾಧರ ರಾಜಯೋಗೀಂದ್ರರು ರುದ್ರಮುನಿಯವರನ್ನು ಉತ್ತರಾಧಿಕಾರಿ ಪದವಿಯಿಂದ ವಜಾ ಮಾಡಿದರು.

ಗುರುಶಿಷ್ಯರ ಜಗಳದಿಂದ ನೊಂದ ವೀರಶೈವ ಸಮಾ[illegible] ಮುಂದಾಳುಗಳು ಇಬ್ಬರ ನಡುವಿನ ಜಗಳ ಬಗೆಹ[illegible] ರುದ್ರಮುನಿಯವರನ್ನು ಮರಿಸ್ವಾಮಿ ಪೀಠಕ್ಕೆ ಪು[illegible] ನೇಮಿಸುವಂತೆ ಹಿರಿಯ ಸ್ವಾಮಿ ಗಂಗಾಧರ ಸ್ವಾಮಿ[illegible] ಮನವೊಲಿಸಿದರು. ಉತ್ತರಾಧಿಕಾರಿ ಪೀಠಕ್ಕೆ ಮ[illegible] ಬಂದ ಮೇಲೂ ರುದ್ರಮುನಿಯವರು ಕಿಡಿಗೇಡ[illegible] ನಿಲ್ಲಿಸಲಿಲ್ಲ ಎಂದು ಗಂಗಾಧರ ರಾ[illegible] ಯೋಗೀಂದ್ರರು ಆಗಾಗ ಸಮಾ[illegible] ಮುಂದೆ ತಮ್ಮ ಅಸಮಾಧಾನ ತೋ[illegible] ಕೊಳ್ಳುತ್ತಿದ್ದರು. ಇವರಿಬ್ಬರ ನಡು[illegible] ಸಮಾಜದವರು ಮಾಡಿಸಿದ್ದ ಹೊಂದಾ[illegible] ಬಹಳ ದಿವಸ ತಾಳಲಿಲ್ಲ, ಮುಂದೆ ಮೂರೇ ವರ್ಷ[illegible] ಇವರ ಜಗಳ ಬೀದಿಗೆ ಬಂದಿತು. 1998 ರ ನವೆಂ[illegible] ನಲ್ಲಿ ಗಂಗಾಧರ ರಾಜಯೋಗೀಂದ್ರರು ರುದ್ರಮುನಿ[illegible] ವರನ್ನು ಉತ್ತರಾಧಿಕಾರಿ ಪೀಠದಿಂದ ಎರಡನೇ ಬ[illegible] ವಜಾ ಮಾಡಿದರು.

ಆಗ ಮುಖ್ಯಮಂತ್ರಿ ಆಗಿದ್ದ ಜೆ.ಎಚ್. ಪಟೇ[illegible] ಮಠದ ವಿಷಯದಲ್ಲಿ ಆಸಕ್ತಿ ತೋರಿಸಿದ್ದರಿಂದ [illegible] ವಿಚಾರಿಸಿ ಬಗೆಹರಿಸಲಿಕ್ಕೆ ಪಂಚ ಪೀಠಾಧೀಶರ [illegible] ಕಮಿಟಿ ನೇಮಿಸಬೇಕೆಂಬ ತೀರ್ಮಾನವಾಯಿತು. [illegible] ಕಮಿಟಿ ತೀರ್ಪಿಗೆ ತಲೆ ಬಾಗುವುದಾಗಿ ಹಿರಿಯ ಸ್ವಾ[illegible] ಮತ್ತು ಕಿರಿಯ ಸ್ವಾಮಿ ಇಬ್ಬರು ಮಾತು ಕೊಟ್ಟ[illegible] ಐವರು ಮಠಾಧೀಶರ ಪೈಕಿ ಇಬ್ಬರ ಹೆಸರನ್ನು ರು[illegible] ಮುನಿ ದೇವರು ಸೂಚಿಸಬೇಕಿತ್ತು, ಇನ್ನಿಬ್ಬರ ಹೆಸ[illegible] ಗಂಗಾಧರ ರಾಜಯೋಗೀಂದ್ರರು ಸೂಚಿಸಬೇಕಿ[illegible] ಕಮಿಟಿಯ ಐದನೇ ಸದಸ್ಯರನ್ನು ಮುಖ್ಯಮಂತ್ರಿ[illegible] ನೇಮಿಸಬೇಕಿತ್ತು, ಈ ರೀತಿಯ ಕರಾರನ್ನು ಎರಡೂ [illegible] ಯವರು ಸಮ್ಮತಿಸಿದರು. ಪಂಚ ಕಮಿಟಿಯು ವಿಚಾ[illegible] ನಡೆಸಿ ಒಂದು ತೀರ್ಮಾನಕ್ಕೆ ಬರುವ ಮೊದ[illegible] ರುದ್ರಮುನಿ ದೇವರ ಪ್ರತಿನಿಧಿಗಳಾಗಿದ್ದ ಇಬ್[illegible] ಸ್ವಾಮಿಗಳು ಕಮಿಟಿಗೆ ರಾಜೀನಾಮೆ ಕೊಟ್ಟು ಹೊ[illegible] ಬಂದರು. ಕಮಿಟಿಯಲ್ಲಿ ಉಳಿದ ಮೂವರು ಸದಸ್[illegible] ವಿಚಾರಣೆ ಮುಂದುವರಿಸಿ ತೀರ್ಪು ಕೊಟ್ಟರು. [illegible] ಪ್ರಕಾರ ರುದ್ರಮುನಿ ಸ್ವಾಮಿ ಉತ್ತರಾಧಿಕಾರಿ [illegible] ಕಳೆದುಕೊಂಡರು. ಗಂಗಾಧರ ರಾಜಯೋಗೀಂದ್ರ[illegible] ಪಂಚ ಕಮಿಟಿ ಸೂಚಿಸಿದ ವಾರಸುದಾರರಿಗೆ [illegible] ಕಟ್ಟಬೇಕಾಯಿತು. ಪಂಚರ ಕಮಿಟಿಯ ತೀರ್ಮಾನದ[illegible] ಅನ್ಯಾಯವಾಗಿದೆ ಎಂದು ನಂಬಿದ ರುದ್ರಮುನಿ ದೇವ[illegible] ಹುಬ್ಬಳ್ಳಿಯ ಜಿಲ್ಲಾ ನ್ಯಾಯಾಧೀಶರ ಕೋರ್ಟ್[illegible] 1999 ರ ಏಪ್ರಿಲ್‌ನಲ್ಲಿ ಅಪೀಲು ಸಲ್ಲಿಸಿದ್ದರಿಂದ ಬ[illegible] ಯಲ್ಲಿ ಅಡ್ಡಾದಿಡ್ಡಿ, ದಿಕ್ಕುಗುರಿ ಇಲ್ಲದೆ ಸಾಗಿದ್ದ ಜ[illegible] ಕೋರ್ಟಿನಲ್ಲಿ ಕಾಯ್ದೆ ನಿಯಮಗಳ ಬಿಗಿ ಚೌಕಟ್ಟಿನೊ[illegible] ಬರುವಂತಾಯಿತು. ಈಗ ಸುಪ್ರೀಂಕೋರ್ಟ್ ಹುಕು[illegible] ನಿಂದ ಹಿಗ್ಗಿದ ರುದ್ರಮುನಿ ದೇವರಲ್ಲಿ ಕಾಯ್ದೆ ಸಮರ[illegible] ಗೆದ್ದೆ ತೀರುವ ಛಲ ಹಿಮ್ಮಡಿ ಆಗಿದೆ.

–ಉಮಾಪತಿ ಪಾಟೀ[illegible]


ಈ ಹಳ್ಳಿಗೆ ಹೆಣ್ಣು ಕೊಡುತ್ತಿಲ್ಲ

ದಾವಣಗೆರೆ

ವಯಸ್ಸಿನ ಅಂತರವಿಲ್ಲ, ಚಿಕ್ಕಮಕ್ಕಳಿಂದ ಮುದುಕರವರೆಗೂ ಕೈಕಾಲುಗಳು ಮುರುಟಿ ಹೋಗಿರುವ, ಕೀಲುಗಳು ಬಾವು ಬಂದಿರುವ ಮತ್ತು ತಲೆ, ಹಲ್ಲು, ಸೊಂಟ, ಮಂಡಿ ನೋವಿನಂತಹ ಸಮಸ್ಯೆಗಳು ಈ ಹಳ್ಳಿಯಲ್ಲಿ ಬಹಳ ಸಾಮಾನ್ಯವಾದವುಗಳಾಗಿವೆ. ಪಾತ್ರೆಗಳಲ್ಲಿ ತುಂಬಿದ ನೀರಿನ ಮೇಲೆ ಮಿಂಚುವ ಪೊರೆ ಕಟ್ಟಿಕೊಳ್ಳುತ್ತದೆ. ಬೆಳಿಗ್ಗೆ ಬಿಂದಿಗೆಗೆ ತುಂಬಿದ ನೀರನ್ನು ಸಂಜೆ ಖಾಲಿ ಮಾಡಿ ನೋಡಿದರೆ ಬೊಗಸೆಯಷ್ಟು ಬಿಳಿ ಬಣ್ಣದ ಫ್ಲೋರೈಡ್ ಪೇಸ್ಟು ಸಿಗುತ್ತದೆ. ನೀರು ತುಂಬಿಟ್ಟ ಪಾತ್ರೆಗಳನ್ನು ಬಿಸಿಲಿಗೆ ಒಣಗಿಸಿಟ್ಟು ಬೋರಲು ಮಾಡಿ ಬಡಿದರೆ ಬಿಳಿ ಇಟ್ಟಿಗೆಗಳ ಹಾಗೆ ಫ್ಲೋರೈಡ್ ಗಟ್ಟಿಗಳು ಪಾತ್ರೆಯ ತಳದಿಂದ ಬೀಳುತ್ತವೆ.

ಇರುವ 24 ಬೋರ್‌ವೆಲ್‌ಗಳಲ್ಲಿ ಒಂದೆರೆಡರ ನೀರನ್ನು ಹೊರತುಪಡಿಸಿದರೆ ಇನ್ನುಳಿದವುಗಳ ನೀರನ್ನು ಕುಡಿಯುವುದಿರಲಿ ಶೇಖರಿಸಿಡುವುದಕ್ಕೂ ಯೋಗ್ಯವಾಗಿಲ್ಲ. ನೀರು ಸರಬರಾಜಿಗಾಗಿ ಊರಿನ ತುಂಬಾ ಪೈಪುಗಳಿದ್ದರೂ ಅವೆಲ್ಲವೂ ಫ್ಲೋರೈಡ್ ನೀರಿನಿಂದಾಗಿ ಕಟ್ಟಿಕೊಂಡಿವೆ. ಪೈಪುಗಳನ್ನು ಕತ್ತರಿಸಿ ಕೊಡವಿದರೆ ಪೈಪಿನ ಒಳಭಾಗದ ಗಾತ್ರದಷ್ಟು ಬಿಳಿಬಣ್ಣದ ಫ್ಲೋರೈಡ್ ಕೋಲುಗಳು ಉದುರುತ್ತವೆ! ಕೈಕಾಲು ನೋವೆಂದು ಆಸ್ಪತ್ರೆಗೆ ಹೋದರೆ ಊರ ಹೆಸರು ಹೇಳುವುದಕ್ಕೂ ಮುಂಚೆಯೇ "ನೀವು ಬೆಳ್ಳೂಡಿಯವ್ರಾ?" ಎಂದು ವೈದ್ಯರು ಕೇಳುತ್ತಾರೆ! ನಾಲ್ಕೈದು ಕಿ.ಮೀ. ದೂರದಿಂದ ಕುಡಿಯುವ ನೀರನ್ನು ತರುವ ಇವರು ಆ ನೀರಿನ ಪ್ರತಿ ಹನಿಯನ್ನೂ ಮಿನರಲ್ ವಾಟರ್‌ನಂತೆ ಎಚ್ಚರಿಕೆಯಿಂದ ಬಳಸುತ್ತಾರೆ. ಶುದ್ಧ ಕುಡಿಯುವ ನೀರಿನ ಬವಣೆಯು ಈ ಹಳ್ಳಿಯನ್ನು ಭೀಕರ ಸಂಕಷ್ಟಗಳಿಗೀಡು ಮಾಡಿರುವುದರಿಂದ ಈ ಹಳ್ಳಿಯ ಯುವಕರಿಗೆ ಮದುವೆಯಾಗಲು ಯಾರೂ ಹೆಣ್ಣು ಕೊಡುತ್ತಿಲ್ಲ–ಜನರು ಸಾಮೂಹಿಕವಾಗಿ ಹಳ್ಳಿಯನ್ನು ತೊರೆಯುವ ಪರಿಸ್ಥಿತಿ ಎದುರಾಗಿದೆ.

ದಾವಣಗೆರೆ ಜಿಲ್ಲೆಯ ಕನಿಷ್ಠ 500 ಹಳ್ಳಿಗಳ ಪರಿಸ್ಥಿತಿ ಹೀಗೇ ಇದೆ. ಇವುಗಳಲ್ಲಿ ಭೀಕರತೆಯ ಪರಮಾವಧಿಗೇರಿರುವ ಈ ಹಳ್ಳಿಯನ್ನು ಉದಾಹರಣೆಗಾಗಿ ಹೇಳಲಾಗಿದೆ.


ನೀರಿಗಾಗಿ ಪ್ರತಿಭಟನಾ ಮೆರವಣಿಗೆ

ದಾವಣಗೆರೆಯಿಂದ ಕೇವಲ 25 ಕಿ.ಮೀ. ಹಾಗೂ ಹರಿಹರದಿಂದ 10 ಕಿ.ಮೀ. ದೂರದಲ್ಲಿರುವ, ಹರಿಹರ ತಾಲ್ಲೂಕಿಗೆ ಸೇರಿದ ಈ ಹಳ್ಳಿ ಮಾಜಿ ಮಂತ್ರಿ ಹೆಚ್. ಶಿವಪ್ಪ ಮತ್ತಿತರ ಪ್ರತಿಷ್ಠಿತರ ಹೆಸರುಗಳುಳ್ಳ ನಾಲ್ಕು ಬಡಾವಣೆಗಳ ದೊಡ್ಡ ಹಳ್ಳಿ - ಇದರ ಹೆಸರು 'ಬೆಳ್ಳೂಡಿ'. ಇಲ್ಲಿ 1200 ಮನೆಗಳಿವೆ. ಹತ್ತು ಸಾವಿರಕ್ಕಿಂತಲೂ ಹೆಚ್ಚು ಜನಸಂಖ್ಯೆ ಇದೆ. ವೀಳ್ಯದೆಲೆಯ ವ್ಯಾಪಾರವೇ ಇಲ್ಲಿನ ಮುಖ್ಯ ಕಸುಬು. ದಿನವೊಂದಕ್ಕೆ ಲಕ್ಷಾಂತರ ರೂ. ವೀಳ್ಯದೆಲೆಯ ವಹಿವಾಟು ಈ ಹಳ್ಳಿಯೊಂದರಿಂದಲೇ ನಡೆಯುತ್ತದೆ. ಇತಿಹಾಸ ಪ್ರಸಿದ್ಧವಾದ ಇಲ್ಲಿನ ವೀಳ್ಯದೆಲೆ ವಿದೇಶಗಳಿಗೂ ರಫ್ತಾಗುತ್ತದೆ. 1200 ಲೀಟರ್ ಹಾಲು ಪ್ರತಿನಿತ್ಯ ಈ ಹಳ್ಳಿಯಿಂದ ಹಾಲಿನ ಡೈರಿಗೆ ಸರಬರಾಜಾಗುತ್ತದೆ.

ಈ ಹಳ್ಳಿಯ ಜೀವನಾಧಾರವಾಗಿದ್ದ 'ಸೂಳೆಕೆರೆ ಹಳ್ಳ'ವು ನಾಲ್ಕಾರು ವರ್ಷಗಳಿಂದ ಬತ್ತಿಹೋಗಿರುವುದು ಈ ಜನರೊಂದಿಗಿನ ಕರುಳ ಸಂಬಂಧವೇ ಕಿತ್ತು ಹೋದಂತಾಗಿ ಕುಡಿಯುವ ನೀರಿನ ಆಹಾಕಾರವೆದ್ದಿದೆ. 1997-98ರಲ್ಲಿ ಇಲ್ಲಿನ ಬೋರ್‌ವೆಲ್‌ಗಳ ನೀರನ್ನು ಪರೀಕ್ಷೆಗೆ ಕಳಿಸಿದಾಗ ಈ ನೀರಿನಲ್ಲಿ ಫ್ಲೋರೈಡ್ ಅಂಶವಿರುವುದು ಬೆಳಕಿಗೆ ಬಂದಿದೆ. ಅಂದಿನಿಂದ ಇಂದಿನವರೆಗೂ ತಾಲ್ಲೂಕು-ಜಿಲ್ಲಾ ಪಂಚಾಯಿತ್ತಿಗಳಿಗೆ ಶಾಸಕ-ಮಂತ್ರಿಗಳಿಗೆ ನಿರಂತರವಾಗಿ ಮನವಿ ಪತ್ರಗಳನ್ನು ನೀಡಿದ್ದರೂ ಆಶ್ವಾಸನೆಗಳ ಹೊರತಾಗಿ ಕುಡಿಯುವ ನೀರು ಮಾತ್ರ ಸಿಕ್ಕಿಲ್ಲ.

ಬೀದಿಗಳಿದ ಜನ - ಬಾಗಿದ ಜಿಲ್ಲಾ ಪಂಚಾಯ್ತಿ

ಏಳೆಂಟು ವರ್ಷಗಳ ಪರಿಸ್ಥಿತಿಯ ತೀವ್ರತೆಯು ಈ ಹಳ್ಳಿಯ ಜನರನ್ನು ಪಕ್ಷಬೇಧ ಮರೆಸಿ ಐಕ್ಯತೆಯನ್ನುಂಟು ಮಾಡಿದೆ. ಮನವಿಗಳಿಗೆ ಮಾವಿನಕಾಯಿ ಉದುರುವುದಿಲ್ಲವೆಂದು ಮನಗಂಡ ಇವರು ಇದೇ ತಿಂಗಳ 3 ಮತ್ತು 4ರಂದು ಬೆಳ್ಳೂಡಿಯಿಂದ ದಾವಣಗೆರೆಗೆ 25 ಕಿ.ಮೀ. ಕಾಲ್ನಡಿಗೆ ಜಾಥಾವನ್ನು ಮಾಡಿ, ಮಾನವ ಸರಪಳಿಯನ್ನು ನಿರ್ಮಿಸಿ ಪ್ರತಿಭಟನೆ[illegible] ಮೂಲಕ ಕುಡಿಯುವ ನೀರಿಗಾಗಿ ಜಿಲ್ಲಾಧಿಕಾರಿಯ[illegible] ಮತ್ತೊಮ್ಮೆ ಮನವಿ ಮಾಡಿಕೊಂಡು 13ರ[illegible] ಬೆಂಗಳೂರು ಚಲೋ ಹೊರಡಲಿದ್ದೇವೆಂದು ಎಚ[illegible] ದ್ದಾರೆ. 12ರ ಸಂಜೆ ಹೊರಟವರಿಗೆ ರಾಜ್‌ಕುಮಾ[illegible] ನಿಧನದ ಸುದ್ದಿ ತಿಳಿದು ಆ ಕಾರ್ಯಕ್ರಮವ[illegible] ಮುಂದೂಡಿಕೊಂಡಿದ್ದಾರೆ.

ಇದುವರೆಗೂ ನೆಪಗಳನ್ನು ಹೇಳಿ ನುಣ[illegible] ಕೊಳ್ಳುತ್ತಿದ್ದ ಜಿಲ್ಲಾ ಪಂಚಾಯಿತ್ತಿಯು ಪರಿಸ್ಥಿತಿಯ ತೀ[illegible] ಯನ್ನು ಗಮನಿಸಿ ದಿನಾಂಕ 2ರಂದು 75.94 ಕೋ[illegible] ರೂಗಳ 9 ವಿಶೇಷ ಕುಡಿಯುವ ನೀರಿನ ಯೋಜ[illegible] ಳನ್ನು ಪ್ರಕಟಿಸಿದೆ. ತುಂಗಭದ್ರಾ ನದಿಯಿಂದ ಹಾ[illegible] ಭದ್ರಾ ಕಾಲುವೆಯಿಂದ ನೀರು ಸರಬರಾಜು ಮಾಡ[illegible] ಗುತ್ತದೆಂದು ಪ್ರಕಟಣೆ ನೀಡಿದೆ. ಈ ಯೋಜನೆಗ[illegible] ಬೆಳ್ಳೂಡಿ ಗ್ರಾಮವು ಸೇರಿದಂತೆ 130 ಹಳ್ಳಿ[illegible] ಹೆಸರಿದೆ. ಕುಡಿಯುವ ನೀರಿನ ತೀವ್ರ ಕೊರತೆಯ[illegible] ಎದುರಿಸುತ್ತಿರುವ ಜಗಳೂರು ಹಾಗೂ ಹರಪನ[illegible] ತಾಲ್ಲೂಕುಗಳ ಪ್ರಸ್ತಾಪವೇ ಈ ಯೋಜನೆಗಳ[illegible] ಆದರೆ ಕೇವಲ ಒಂದು ಹಳ್ಳಿಯ ಜನರು ತಮಗಾ[illegible] ತ್ತಿದ್ದ ತೊಂದರೆಗಳ ವಿರುದ್ಧ ಬೀದಿಗಿಳಿದು ಜಿ[illegible] ಪಂಚಾಯಿತ್ತಿಯನ್ನು ಮಣಿಸಿದ್ದು ಮಾತ್ರ ಜಿಲ್ಲೆಯ [illegible] ಗ್ರಾಮಗಳೂ ಜಾಗರೂಕರಾಗುವುದಕ್ಕೆ ಮಾದರಿಯಾ[illegible]

ಕುಡಿಯುವ ನೀರಿನ ಕುರಿತ ಈ ಯೋಜನೆಗ[illegible] ಬಾಯಾರಿದ ಜನರಿಗೆ ತಾತ್ಕಾಲಿಕ ಸಂಭ್ರಮವನ್ನು[illegible] ಮಾಡಿವೆಯಾದರೂ, ಈ ಯೋಜನೆಯಲ್ಲಿನ ಕೋ[illegible] ಕೋಟಿ ಹಣವನ್ನು ದಾವಣಗೆರೆ ಜಿಲ್ಲಾ ಪಂಚಾಯಿ[illegible] ಹೆಗ್ಗಣಗಳು ರಾಮ-ಕೃಷ್ಣ ಲೆಕ್ಕ ತೋರಿಸಿ ನುಂಗಿ ಹಾ[illegible] ವುದನ್ನು ತಡೆದು ಸದುಪಯೋಗ ಪಡಿಸಿಕೊಳ್ಳುವು[illegible] ಜನರಿಂದ ಸಾಧ್ಯವೆ? ಈ ಯೋಜನೆಗಳು ಕಾರ್ಯ[illegible] ಗೊಂಡು ಬೆಳ್ಳೂಡಿ ಗ್ರಾಮದ ಯುವಕರಿಗೆ ಮದು[illegible] ಯಾಗಲು ಹೆಣ್ಣುಗಳು ಸಿಗುತ್ತಾರೆಯೆ? ಕಾಲ[illegible] ಉತ್ತರಿಸಬೇಕು.

–ವರದಿಗಾ[illegible]

ಕೋಲುಗಳಿಂದ ಕೈಗಳನ್ನು
ಸರಪಳಿಯಿಂದ ಕಾಲುಗಳನ್ನು
ಎತ್ತರದ ಗೋಡೆಗಳಿಂದ
ನನ್ನ ದೇಹವನ್ನೇನೋ ಬಂಧಿಸುವೆ
ಆದರೆ ಹೇಳು
ನನ್ನ ಮಾತನ್ನು, ಆಲೋಚನೆಯನ್ನು
ಕೊನೆಗೆ ಸಂವೇದನೆಯನ್ನು
ಯಾವ ಸರಂಜಾಮುಗಳಿಂದ ಬಂಧಿಸುವೆ?

ಕಳೆದ ವರ್ಷ ಕುಮಾರ ಸಮತಳರು 'ಜೈಲೆಂಬ ...ಲೋಕದಲ್ಲಿ' ಅಂಕಣವನ್ನು ಮೇಲಿನಂತೆ ಆರಂಭಿಸುತ್ತಾ ...ಜೈಲುಗಳಲ್ಲಿ ಜೀವ ಎಷ್ಟು ಅಗ್ಗ ಎಂಬುದರ ಕುರಿತು ...ವರಿಸುತ್ತಾ ಬಂದಿದ್ದರು. ಅವರ ಅಂಕಣ ಮುಗಿಯುವ ...ಹೊತ್ತಿಗೆ ಬಳ್ಳಾರಿ ಜೈಲಿನ ಅಧಿಕಾರಿಗಳ ನಿರ್ಲಕ್ಷ್ಯದಿಂದ ...ಚಾರಣಾಧೀನ ಖೈದಿ ಚನ್ನಬಸಪ್ಪ ಮೃತನಾಗಿ ಹೋಗಿದ್ದ. ...ದವರ ಜೀವವೆಂಬುದು ಅಗ್ಗ, ಜೈಲೊಳಗದು ಇನ್ನೂ ...ಗ್ಗ ಎಂಬಂತಾಗಿರುವ ಈ ದಿನಗಳಲ್ಲಿ ಅದೇ ಜೈಲಿನಲ್ಲಿದ್ದ ...ಜ್ಜನಿಗೌಡರು ಅಧಿಕಾರಿಗಳ ನಿರ್ಲಕ್ಷ್ಯತನವನ್ನು ...ತಿಭಟಿಸಿ 'ಲಂಕೇಶ್' (28.12.2005 ರ ಸಂಚಿಕೆ)ಗೆ ...ತ್ರ ಬರೆದಿದ್ದರು. ಡಿಸೆಂಬರ್ 20 ರಂದು ಮಾರ್ಕೆಟ್ಟಿನಲ್ಲಿ ...ಭ್ಯವಿದ್ದ ನಮ್ಮ 'ಪತ್ರಿಕೆ' ಓದಿದ ಉಪಲೋಕಾಯುಕ್ತ ...ತ್ರಿ ಬಸವನಗೌಡರು ಪ್ರಕಟಗೊಂಡಿದ್ದ ಉಜ್ಜನಿಗೌಡರ ...ತ್ರವನ್ನೇ ದೂರು ಎಂದು ಪರಿಗಣಿಸಿ, ಮರುದಿನ ...ಂದಲೇ ತನಿಖೆಗೆ ಆದೇಶಿಸಿದ್ದರು.

...ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ಜಡ್ಜ್ ಆರ್. ...ಣೇಶ್‌ರಾವ್ ತನಿಖೆ ಕೈಗೊಂಡು ಈಗ ಉಪಲೋಕಾ...ಯುಕ್ತರಿಗೆ ವರದಿ ಸಲ್ಲಿಸಿದ್ದಾರೆ. ಬಳ್ಳಾರಿ ಸೆಂಟ್ರಲ್ ...ಜೈಲಿನ ಸೂಪರಿಂಡೆಂಟ್ ಜಿ. ವೀರಭದ್ರಯ್ಯ ಮತ್ತು ಆ ...ಜೈಲಿನ ಆರೋಗ್ಯಾಧಿಕಾರಿ ಡಾ. ಚೇತನ್ ವಿರುದ್ಧ ...suo-moto ನೋಟೀಸ್ ಜಾರಿ ಮಾಡಿ ತನಿಖೆ ಮಾಡಿ...ದಾಗ ಇಡೀ ಜೈಲು ವ್ಯವಸ್ಥೆಯಲ್ಲಿನ ಆಸ್ಪತ್ರೆ ವಿಭಾಗ ...ಲ್ಲ ಹಂತಗಳಲ್ಲೂ ಅದಕ್ಷತೆಯಿಂದ ಕೂಡಿರುವುದು ...ಕಂಡುಬಂದಿದೆ.

ಲಾಕಪ್‌ಡೆತ್:

ಉಪಲೋಕಾಯುಕ್ತರ ದಿಟ್ಟ ಕ್ರಮ...



ದಿನಾಂಕ 28.11.2005 ರಂದು ಮುಂಜಾನೆಯೇ ಹಲವಾರು ದಿನಗಳಿಂದ ಚಳಿಜ್ವರದಿಂದ ಬಳಲುತ್ತಿದ್ದ ಚನ್ನಬಸಪ್ಪನ ದೇಹ ಸ್ಥಿತಿ ಗಂಭೀರಗೊಂಡಿದ್ದನ್ನು ಚನ್ನಬಸಪ್ಪನ ಪುತ್ರ ರಾಮಚಂದ್ರಪ್ಪ (ಈತನೂ ಅಲ್ಲೇ ಬಂಧಿಯಾಗಿದ್ದ) ಹಾಗೂ ಇತರ ಖೈದಿಗಳು ವೈದ್ಯ ಡಾ. ಚೇತನ್ ಮತ್ತು ಜೈಲಿನ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ನಿರ್ಲಕ್ಷ್ಯ ಮಾಡಲಾಗಿತ್ತು, ಮಧ್ಯಾಹ್ನ 2.30 ರ ಸುಮಾರಿಗೆ ಚನ್ನಬಸಪ್ಪನ ಸ್ಥಿತಿ ತೀರಾ ಗಂಭೀರವಾದ ವಿಷಯ ಗೊತ್ತಾಗಿಯೂ ಯಾವ ತುರ್ತು ಕ್ರಮ ಕೈಗೊಳ್ಳದೇ ಇದ್ದುದರಿಂದ ಮಧ್ಯಾಹ್ನ 3 ಗಂಟೆ ಸುಮಾರಿಗೆ ಚನ್ನಬಸಪ್ಪ ಮೃತನಾದ.

27.11.2005 ಅಥವಾ 28.11.2005 ರಂದು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಚನ್ನಬಸಪ್ಪ ಮತ್ತು ಇತರ ಹಲವು ರೋಗಿಗಳನ್ನು ಅಡ್ಮಿಟ್ ಮಾಡಲು ಡಾ. ಚೇತನ್ ಜೈಲಿನ ಅಸಿಸ್ಟೆಂಟ್ ಸೂಪರಿಂಡೆಂಟ್ ಎ. ವೀರಭದ್ರಪ್ಪನವರಿಗೆ ಬೇಡಿಕೆ ಸಲ್ಲಿಸುತ್ತಾರೆ. ಎ. ವೀರಭದ್ರಪ್ಪ ರೋಗಿಗಳಿಗೆ ಎಸ್ಕಾರ್ಟ್ ಒದಗಿಸಬೇಕೆಂದು ಜಿಲ್ಲಾ ಸಶಸ್ತ್ರ ಮೀಸಲು ಪಡೆಗೆ ಬೇಡಿಕೆ ಇಡುತ್ತಾರೆ. ಆದರೆ 27.11.2005 ರಂದು ಯಾವ ಖೈದಿಯನ್ನೂ ವಿಮ್ಸ್ ಆಸ್ಪತ್ರೆಗೆ ಸೇರಿಸುವುದಿಲ್ಲ, ಆದರೆ ಮರುದಿನ 28.11.2005 ರಂದು 'ಪ್ರಭಾವಿ' ಚಂದ್ರೇಗೌಡ ಎಂಬ ಖೈದಿಯೊಬ್ಬನಿಗೆ ವಿಶೇಷ ಎಸ್ಕಾರ್ಟ್ (ಒಬ್ಬ ಎಎಸ್‌ಐ, ಒಬ್ಬ ಹೆಡ್‌ಕಾನ್‌ಸ್ಟೇಬಲ್, ಮೂರು ಪೋಲೀಸರು) ಒದಗಿಸಿ ವಿಮ್ಸ್ ಆಸ್ಪತ್ರೆಗೆ ಸೇರಿಸುತ್ತಾರೆ. ಚನ್ನಬಸಪ್ಪ ಸೇರಿದಂತೆ ಇತರ ರೋಗಿಗಳಿಗೆ ಎಸ್ಕಾರ್ಟ್ ಸೌಲಭ್ಯ ನೀಡಲು ಸಶಸ್ತ್ರ ಮೀಸಲು ಪಡೆಯಲ್ಲಿ ಅಂದು ಹೆಚ್ಚಿನ ಸಿಬ್ಬಂದಿ ಲಭ್ಯವಿರಲಿಲ್ಲ ಎಂದು ಸಬೂಬು ನೀಡಲಾಗುತ್ತದೆ. ಇಂತಹ ವೇಳೆಯಲ್ಲಿ ಜೈಲಿನ ಸಿಬ್ಬಂದಿ ಬಳಸಿ ಎಸ್ಕಾರ್ಟ್ ನೀಡಿ, ಆಸ್ಪತ್ರೆಗೆ ಸಾಗಿಸಬೇಕೆಂಬ ನಿಯಮ ಇದೆ. ಡಾ. ಚೇತನ್ ರೋಗಿಯ 'ಗಂಭೀರ ಸ್ಥಿತಿ'ಯ ಕುರಿತು ಬೇಡಿಕೆ ಸಲ್ಲಿಸಲಿಲ್ಲವಾದ್ದರಿಂದ ತಾವು ಎಸ್ಕಾರ್ಟ್ ಒದಗಿಸಲು ಹೋಗಲಿಲ್ಲ ಎಂದು ಜೈಲರ್ ಶಿವಣ್ಣ ಹೇಳುತ್ತಾರೆ. ಹಲವಾರು ಖೈದಿಗಳು, ಜೈಲಲ್ಲೇ ಇರುವ ಚನ್ನಬಸಪ್ಪನ ಸಂಬಂಧಿಗಳು, ಉಜ್ಜನಿಗೌಡರು ಹಾಗೂ ವಿಮ್ಸ್‌ನ ಹಿರಿಯ ವೈದ್ಯರುಗಳನ್ನು, ಆರೋಪಿ ಡಾ. ಚೇತನ್ ಮತ್ತು ಜೈಲು ಸಿಬ್ಬಂದಿಯನ್ನು ವಿಚಾರಣೆ ನಡೆಸಿದ ಗಣೇಶ್ ರಾವ್ ಸಮಿತಿ ಈ ತೀರ್ಮಾನಗಳನ್ನು ಕೈಗೊಂಡಿದೆ:

1. ಡಾ. ಸಿ.ಸಿ. ಚೇತನ್ ಚನ್ನಬಸಪ್ಪನಿಗೆ ಸರಿಯಾದ ಚಿಕಿತ್ಸೆ ನೀಡುವಲ್ಲಿ ನಿರ್ಲಕ್ಷ್ಯ ತೋರಿದ್ದಾರೆ. ಚನ್ನಬಸಪ್ಪನ ಆರೋಗ್ಯ ಸ್ಥಿತಿ ಗಂಭೀರವಿದ್ದಾಗಲೂ ಪರ್ಯಾಯ ತುರ್ತು ಎಸ್ಕಾರ್ಟ್‌ಗೆ ಬೇಡಿಕೆ ಇಡದೇ ತಪ್ಪು ಎಸಗಿದ್ದಾರೆ.

2. ಪರ್ಯಾಯ ತುರ್ತು ಎಸ್ಕಾರ್ಟ್ ಒದಗಿಸಲಾಗದೇ ಹೋದುದರಲ್ಲಿ ಸೂಪರಿಂಡೆಂಟ್ ಜಿ. ವೀರಭದ್ರಯ್ಯ ಮತ್ತು ಅವರ ಕೆಳಗಿನ ಸಿಬ್ಬಂದಿಯ ನಿರ್ಲಕ್ಷ್ಯವೇನೂ ಕಂಡುಬಂದಿಲ್ಲ.

3. ಪ್ರತಿ ವಾರಕ್ಕೆ ಎರಡು ಸಾರಿ ಜಿಲ್ಲಾ ಸರ್ಜನ್‌ಗಳು ಜೈಲಿಗೆ ಭೇಟಿ ನೀಡಿ ಖೈದಿಗಳ ಪರೀಕ್ಷೆ ಮಾಡಬೇಕೆಂಬ ನಿಯಮವಿದೆ. ಆದರೆ 15.11.2000 ರಿಂದ ಯಾವ ಜಿಲ್ಲಾ ಸರ್ಜನ್‌ನೂ ಈ ಜೈಲಿಗೆ ಭೇಟಿ ನೀಡದೇ ತಪ್ಪು ಎಸಗಿದ್ದಾರೆ.

4. ಜಿಲ್ಲಾ ಸರ್ಜನ್‌ರು ಜೈಲಿಗೆ ಭೇಟಿ ನೀಡದೇ ಇದ್ದಾಗ್ಯೂ ಯಾವ ಕ್ರಮಗಳನ್ನೂ ತೆಗೆದುಕೊಳ್ಳದೇ ನಿರ್ಲಕ್ಷಿಸಿದ ಸೂಪರಿಂಡೆಂಟ್ ಜಿ. ವೀರಭದ್ರಯ್ಯ ಈ ವಿಷಯದಲ್ಲಿ ತಪ್ಪು ಎಸಗಿದ್ದಾರೆ.

ಈಗ ಈ ಮೇಲಿನ ಆರೋಪಿಗಳ ವಿಚಾರಣೆ ನಡೆದು ಸರ್ಕಾರಕ್ಕೆ ವರದಿ ತಲುಪಲಿದೆ.

* * * * * * * * * *

ಅನ್ಯಾಯದ ವಿರುದ್ಧ ಪ್ರತಿಭಟಿಸಿದ ಉಜ್ಜನಿಗೌಡರ ಪ್ರಯತ್ನಕ್ಕೆ ಇದು ನ್ಯಾಯ ಒದಗಿಸಿದಂತಾಗಿದೆ. ಹಾಗೆಯೇ ಉಜ್ಜನಿಗೌಡರ ಪತ್ರ ಪ್ರಕಟಿಸಿದ ಈ ನಿಮ್ಮ ಪತ್ರಿಕೆಗೂ ಸಮಾಧಾನವಾಗಿದೆ. ಪತ್ರಿಕೆಯಲ್ಲಿನ ಪತ್ರವನ್ನೇ ದೂರನ್ನಾಗಿ ಪರಿಗಣಿಸಿ ವಿಚಾರಣೆ ನಡೆಸಿದ ಉಪಲೋಕಾಯುಕ್ತರ ಕಾರ್ಯಶೈಲಿ ಸ್ವಾಗತಾರ್ಹ.

ಈ ಘಟನೆ ಜೈಲೆಂಬ ನರಕಗಳಲ್ಲಿ ನಿತ್ಯ ಸಾಯುತ್ತಿರುವ ಸಾವಿರಾರು ಚನ್ನಬಸಪ್ಪನಂತಹವರಿಗೆ ಅನ್ಯಾಯವಾಗದಂತೆ ತಡೆಯುವುದಕ್ಕೆ ಪ್ರೇರಣೆಯಾದರೆ ಉಪಲೋಕಾಯುಕ್ತರ, ಪತ್ರಿಕೆಯ ಹಾಗೂ ಉಜ್ಜನಿಗೌಡರ ಶ್ರಮ ಸಾರ್ಥಕವಾದಂತೆ....

-ಮಲ್ಲನಗೌಡರ್

ಹೋಪ್‌ಲೆಸ್ ಕಾರ್ಪೋರೇಟರ್ ಬರ್ನಾಬಸ್!

ಕೆ. ಬರ್ನಾಬಸ್... ಇವನೊಬ್ಬ ಖದೀಮ ಕಾರ್ಪೋರೇಟರ್... ಅದಕ್ಕೂ ಹೆಚ್ಚಾಗಿ ಲ್ಯಾಂಡ್ ಗ್ರ್ಯಾಬರ್. ಇಂತಹವನೀಗ ಸ್ಲಮ್ ಜನರ ನಾಯಕನಂತೆ ಪೋಸು ಕೊಡುತ್ತಾ ರೈಲ್ವೆ ಇಲಾಖೆ, ಕೊಳಚೆ ನಿರ್ಮೂಲನೆ ಮಂಡಳಿಗಳಿಗೆ ಟೋಪಿ ಹಾಗಲು ನೋಡುತ್ತಿದ್ದಾನೆ. ಹಾಗೆಯೇ ಸ್ಲಮ್ ಜನರನ್ನು ಮಳ್ಳು ಮಾಡಿ ದುಡ್ಡೂ ಎತ್ತುತ್ತಿದ್ದಾನೆ.

ಹುಬ್ಬಳ್ಳಿ

ಹುಬ್ಬಳ್ಳಿಯ ರೈಲ್ವೆ ಇಲಾಖೆಗೆ ಸೇರಿದ ಸುಡುಗಾಡ ಚಾಳ ಎಂಬ ಸ್ಲಮ್‌ನಲ್ಲಿ ಸುಮಾರು 350 ಕುಟುಂಬಗಳು ನೆಲೆಗೊಂಡಿದ್ದವು. ತೆಲುಗು, ತಮಿಳು ಮಾತಾಡುವ ರೈಲ್ವೆ ನೌಕರರೇ ಈ ಸ್ಲಮ್ಮಲ್ಲಿ ಅಧಿಕವಾಗಿದ್ದರು. ರೈಲ್ವೆ ಜಾಗ ಕಬಳಿಸಿದ ಕೆಲ ಕಾರ್ಮಿಕರ ಧುರೀಣರೇ ಅಲ್ಲಿ ಸ್ಲಮ್ ನಿರ್ಮಾಣಕ್ಕೆ ಕಾರಣರಾಗಿದ್ದರು. ಪಕ್ಕದಲ್ಲೇ ಇರುವ ರೈಲ್ವೆ ಕ್ವಾರ್ಟರ್ಸ್‌ನ ಮನೆಗಳನ್ನು ಹೊರಗಿನವರಿಗೆ ಬಾಡಿಗೆಗೆ ನೀಡಿ ಸ್ಲಮ್ಮಲ್ಲಿ ನೆಲೆಸಿದವರೂ ಇದ್ದರು. ಹುಬ್ಬಳ್ಳಿಗೆ ನೈರುತ್ಯ ವಲಯದ ಕೇಂದ್ರ ಕಚೇರಿ ಬರುತ್ತಿದ್ದಂತೆ, ರೈಲ್ವೆ ಇಲಾಖೆ ತನಿಖೆ ಕೈಗೊಂಡು ತನ್ನ ಜಾಗವನ್ನು ಹಿಂದಕ್ಕೆ ಪಡೆಯಲು ಆರಂಭಿಸಿತು. ಆಗ ರೈಲ್ವೆ ಜಾಗ ನುಂಗಿದ್ದ ಕೆಲ ಕಾರ್ಮಿಕ ನಾಯಕರು ಕೆಲಸ ಕಳೆದುಕೊಂಡರು.



ಬರ್ನಾಬಸ್

ಇತ್ತೀಚೆಗೆ ಈ ಸುಡುಗಾಡ ಚಾಳ ಸ್ಲಮ್‌ಗೆ ರೈಲ್ವೆ ಇಲಾಖೆ ಬುಲ್ಡೋಜರ್ ನುಗ್ಗಿಸಿತು. ಈ ಮೊದಲೇ ಅಲ್ಲಿನ ನಿವಾಸಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು ಹೇಳಿದ್ದರೂ, ಯಾರೂ ಅತ್ತ ಗಮನ ಹರಿಸಲಿಲ್ಲ. ಆಗ ಎಂಟ್ರಿ ಹೊಡೆದವನೇ ಭೂಗಳ್ಳ ಕಾರ್ಪೋರೇಟರ್ ಕೆ. ಬರ್ನಾಬಸ್. ಸ್ಲಮ್ ನಿವಾಸಿಗಳನ್ನು ಒಂದುಗೂಡಿಸಿದ ಬರ್ನಾಬಸ್, ತನ್ನ ಭೂದಾಹದ ಯೋಜನೆಗಳನ್ನು ಹೆಣೆಯುತ್ತಾ, ರೈಲ್ವೆ ಇಲಾಖೆ ವಿರುದ್ಧ ಪ್ರತಿಭಟಿಸ ತೊಡಗಿದ. ಆದರೆ ಬರ್ನಾಬಸ್ ಸಂಚು ಅರಿತ ರೈಲ್ವೆ ಇಲಾಖೆ ಸ್ಲಮ್ ನಿವಾಸಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡಲು ಒಪ್ಪಿತು.

ಇದರಿಂದ ತನಗೇನೂ ಲಾಭವಿಲ್ಲ ಎಂದರಿತ ಬರ್ನಾಬಸ್ ಮತ್ತೊಂದು ಕಂತ್ರಿ ಪ್ಲಾನು ರೂಪಿಸಿದ. ಕೇಂದ್ರ ಸರ್ಕಾರದ ಐಎಚ್‌ಎಸ್‌ಡಿಪಿ ಯೋಜನೆಯಲ್ಲಿ ಪ್ರತಿ ಕುಟುಂಬಕ್ಕೂ 1 ಲಕ್ಷ ರೂ. ವೆಚ್ಚದ ಮನೆ ಕಟ್ಟಿಸಿ ಕೊಡುವುದಾಗಿ 'ರೈಲು ಬಿಟ್ಟ'. ತನ್ನ ಕಿತಬಿ ಏಜಂಟರಾದ ಸುಭಾಸ್ ...ಕಲಾಲ್ ಹಾಗೂ ಬಿ. ಸುಶೀಲಮ್ಮರ ಮೂಲಕ ಪ್ರತಿ ಕುಟುಂಬದಿಂದ 13 ಸಾವಿರ ರೂಪಾಯಿ ...ಚಂದಾ ಎತ್ತತೊಡಗಿದ. ಈಗ 350 ಕುಟುಂಬಗಳ ಪೈಕಿ 250 ಕುಟುಂಬಗಳು ತಲಾ 13 ಸಾವಿರ ...ರೂಪಾಯಿ ತೆತ್ತು ಪಂಗನಾಮ ಹಾಕಿಸಿಕೊಳ್ಳಲು ರೆಡಿಯಾಗಿವೆ. ಯಲ್ಲಾಪುರ ಗ್ರಾಮದ ಸರ್ವೆ ನಂ. 34/2 ರ 4 ಎಕರೆ ಭೂಮಿ ಖರೀದಿಸಿರುವ ಬರ್ನಾಬಸ್, ಕೊಳಚೆ ಮಂಡಳಿಯವರಿಗೆ ಅಲ್ಲಿಯೇ ...ಮನೆಗಳನ್ನು ನಿರ್ಮಿಸಿ ಎಂದು ಪತ್ರ ಬರೆದಿದ್ದಾನೆ. ಮೊದಲು ಬಸ್ ಕಂಡಕ್ಟರ್‌ನಾಗಿದ್ದ ಬರ್ನಾಬಸ್ ...ಕೆಲಸ ಬಿಟ್ಟು, ಮತ್ತೊಬ್ಬನ ತಲೆ ಸವರಿ ಲ್ಯಾಂಡ್ ಡೀಲ್‌ಗಿಳಿದ. ಹಡಬೆ ಹಣ ಹೆಚ್ಚಾದಂತೆ ...ಬಿಸಿ, 'ದಾದಾ' ಹೇಳಿ, ಮಂಟೂರ ರಸ್ತೆಗೆ ಸೇರಿದ ಬಹುತೇಕ ಹೊಲಗಳನ್ನೆಲ್ಲಾ ಕಡಿಮೆ ದರಕ್ಕೆ ...ಖರೀದಿಸಿ ಲೇಔಟ್ ಮಾಡಿ ಕುಬೇರನಾದ. ಶಾಸಕ ಜಬ್ಬಾರಖಾನ್ ಹೊನ್ನಳ್ಳಿಯ ಸಹಾಯದಿಂದ ...ಕಾಂಗ್ರೆಸ್‌ನಿಂದ ಕಾರ್ಪೋರೇಟರ್ ಆದ ಬರ್ನಾಬಸ್‌ಗೆ ಲ್ಯಾಂಡ್ ಡೀಲಿಂಗ್ ಮತ್ತಷ್ಟು ಸಲೀಸಾಯಿತು.

ಈಗ ರೈಲ್ವೆ ಭೂಮಿ ನುಂಗಲು ಹೋಗಿ ನಿರಾಶನಾಗಿದ್ದಾನೆ. ಸ್ಲಮ್ ನಿವಾಸಿಗಳಿಂದ 13 ಸಾವಿರ ...ವಸೂಲಿ ಮಾಡುತ್ತಾ ವಂಚಿಸುತ್ತಿದ್ದಾನೆ. ಇವನಿಗೆ ಈ ಅಧಿಕಾರ ಕೊಟ್ಟವರಾರು? ಕೊಳಚೆ ನಿರ್ಮೂಲನಾ ...ಮಂಡಳಿ ಸಿದ್ಧಪಡಿಸಿದ ಹೊರಬರುವುದೆ? ಸ್ಲಮ್ ನಿವಾಸಿಗಳಿಗೆ ಪರ್ಯಾಯ ವಸತಿ ವ್ಯವಸ್ಥೆ ಮಾಡುವುದು ...ರೈಲ್ವೆ ಇಲಾಖೆ, ಕೊಳಚೆ ನಿರ್ಮೂಲನಾ ಮಂಡಳಿಗಳ ಕರ್ತವ್ಯ. ಮಧ್ಯದಲ್ಲಿ ಗೋಲ್‌ಮಾಲ್ ...ಮಾಡುತ್ತಿರುವ ಕಾರ್ಪೋರೇಟರ್ ಬರ್ನಾಬಸ್‌ಗೆ ಕೊಳಚೆ ನಿರ್ಮೂಲನಾ ಮಂಡಳಿಯವರು, ಸ್ಲಮ್ ...ನಿವಾಸಿಗಳು ಆದಷ್ಟು ಬೇಗ ಪಾಠ ಕಲಿಸಲಿ.

-ವರದಿಗಾರ

"ಬಾಲಗಂಗಾಧರ ಸ್ವಾಮಿ ಕುವೆಂಪು ಇಂಗ್ಲಿಷ್ ಸ್ಕೂಲ್"

ಇದ್ಯಾವನ ಐಡಿಯಾರಿ?

ಸುಳ್ಳಿನ ಮಾಲೆಯ ಕೊರಳಿಗೆ ಸೂಡಿ
ಕಳ್ಳನೊಬ್ಬನನು ಗುರುವನು ಮಾಡಿ
ಬಡವರ ಹೊನ್ನನು ಕಾಣಿಕೆ ನೀಡಿ
ಧರ್ಮವ ಮೆರೆವರ ನೋಡಯ್ಯ.....

ಮಠಾಧಿಪತಿಗಳ ಕುರಿತು ಕುವೆಂಪುರವರು ಬರೆದ ಮೇಲಿನ ಸಾಲುಗಳನ್ನು ಇಲ್ಲಿ ಪ್ರಸ್ತಾಪಿಸಲೇಬೇಕಿದೆ. ಕುವೆಂಪು ವಿಶ್ವವಿದ್ಯಾಲಯ ವೀಗ ಕುವೆಂಪುಗೇ ಅವಮಾನ ಮಾಡುವಂತಹ ಕೆಲಸಕ್ಕೆ ಕೈ ಹಾಕಿದೆ.

ಕುವೆಂಪು ಅಳಿಯ ಡಾ. ಚಿದಾನಂದಗೌಡರು ಕುಲಪತಿಯಾಗಿದ್ದಾಗ ಈ ಯೋಜನೆ ರೂಪುಗೊಂಡಿತೊ ಅಥವಾ ಈಗ ಡಾ. ಈಡಿ ಪುಟ್ಟಯ್ಯ ಎಂಬ ಪ್ರಭಾರಿ ಕುಲಪತಿಗಳು ಅಧಿಕಾರದಲ್ಲಿರುವ ಈ ವೇಳೆ ಆರಂಭವಾಯಿತೋ ಎಂಬುದು ತಿಳಿಯದ ವಿಷಯ. ಒಟ್ಟಿನಲ್ಲಿ ಕುವೆಂಪುಗೆ ಅವಮಾನವಾಗುತ್ತಿರುವುದು ವಿಷಾದನೀಯ ಸಂಗತಿ.



ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ (ರಿ)
ಬಿ. ಜಿ. ಎಸ್. ಕುವೆಂಪು
ಇಂಗ್ಲೀಷ್ (ಮಧ್ಯಮ) ಶಾಲೆ
(ಸಿ.ಬಿ.ಎಸ್.ಇ.- ಕೇಂದ್ರ ಪಠ್ಯಕ್ರಮ)
ಕುವೆಂಪು ವಿಶ್ವ ವಿದ್ಯಾನಿಲಯ ಆವರಣ
ಶಂಕರಘಟ್ಟ - 577 451

ಇಲ್ಲಿ ತಿಳಿಯಬೇಕಾದ ಮಹತ್ವದ ವಿಷಯ ಏನೆಂದರೆ ಕುವೆಂಪು ವಿ.ವಿ. ಆವರಣದಲ್ಲಿ CBSE ಪಠ್ಯದ ಇಂಗ್ಲಿಷ್ ಮಾಧ್ಯಮ ಶಾಲೆ ಆರಂಭಗೊಳ್ಳುತ್ತಿದೆ.

ಇದು.

"ಓ ಯಾರಾದರೂ ಬನ್ನಿ!
ಎಲ್ಲಿಂದಾದರೂ ಬನ್ನಿ
ಏನಾದರೂ ಮಾಡಿ
ಹೆಣಹೊರೆಯ ಇಂಗ್ಲಿಷಿನಿಂದೆಮ್ಮ ಪಾರು ಮಾಡಿ!"

ಎಂದು ಹೇಳಿದ ಕುವೆಂಪುರವರಿಗೆ ಮಾಡುತ್ತಿರುವ ಮೊದಲ ಅವಮಾನ.

ಹಾಗೆಯೇ ಆರಂಭದಲ್ಲಿ ಬರೆದಿರುವ ಮಠಾಧಿಪತಿಗಳ ಕುರಿತ ಕುವೆಂಪು ನಿಲುವನ್ನು ಅಣಕಿಸುವ ತೀರ್ಮಾನಕ್ಕೆ ಕೈ ಹಾಕಿದೆ ವಿವಿಯ ಪಂಡಿತ-ಪ್ರಭೃತಿಗಳು! ಈ ಶಾಲೆಯ ಹೆಸರು: "ಬಿಜಿಎಸ್ ಕುವೆಂಪು ಇಂಗ್ಲಿಷ್ ಮಾಧ್ಯಮ ಶಾಲೆ" ಅಂತೆ. (ಮಾಧ್ಯಮದ ಬದಲು 'ಮಧ್ಯಮ' ಎಂದು ಬರೆದಿದ್ದಾರೆ ಈ ನೀಚರು). ಇಲ್ಲಿ ಬಿಜಿಎಸ್ ಎಂದರೆ ಬಾಲಗಂಗಾಧರಸ್ವಾಮಿ! ಎಲ್ಲಿಯ ಕುವೆಂಪು? ಎಲ್ಲಿಯ ಟೇಲ್ ಗಂಗಾಧರ ಸ್ವಾಮಿ?

ಸ್ವಾಮಿಗಳನ್ನೂ, ಮೌಢ್ಯಗಳನ್ನೂ ದೂರವಿಟ್ಟು ಬೆಳಕನ್ನೂ, ವೈಚಾರಿಕತೆಯನ್ನೂ ನೀಡಬೇಕಾದ ವಿದ್ಯಾ ದೇಗುಲಗಳೇ ಕುವೆಂಪು ಹೆಸರನ್ನು BGS ಗೆ ಸಂಲಗ್ನಗೊಳಿಸಿದರೆ ಅದಕ್ಕಿಂತ ದುರಂತ ಬೇಕೆ?

ಭದ್ರಾವತಿಯಲ್ಲಿ 'ಬಿಜಿಎಸ್ ಪಬ್ಲಿಕ್ ಸ್ಕೂಲ್' ತೆರೆಯುತ್ತಿರುವ ಶ್ರೀ ಆದಿ ಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ)ಗೆ ಶಿವಮೊಗ್ಗ ವಿ.ವಿ. ಆವರಣದಲ್ಲಿ ಇಂಗ್ಲಿಷ್ ಸ್ಕೂಲ್ ತೆಗೆಯಲು ಅನುಮತಿ ನೀಡಿದ್ದಾರೆ. ಭದ್ರಾವತಿ ಸ್ಕೂಲ್‌ಗೆ ಬೇಕಾದರೆ, ಒಂದು ಕೋಮಿಗಷ್ಟೇ ಸೀಮಿತವಾದ ಆ BGS ಹೆಸರಿಟ್ಟುಕೊಳ್ಳಲಿ. ಆದರೆ ಕುವೆಂಪು ವಿ.ವಿ.ಯಲ್ಲೂ ಅದೇ ಹೆಸರೇಕೆ? ವಿಶ್ವಮಾನವ ಕುವೆಂಪು ಹೆಸರಿನ ಜೊತೆ ಬಾಲಗಂಗಾಧರ ಸ್ವಾಮಿಯ ಹೆಸರು ಜೋಡಿಸುವುದೇ ಮಹಾನ್ ಅಪರಾಧ.

ಅದೆಲ್ಲಕ್ಕಿಂತಲೂ ಘೋರ ಅಪರಾಧವೆಂದರೆ ಸರ್ಕಾರದ ಕುವೆಂಪು ವಿ.ವಿ. ಆವರಣದಲ್ಲಿ ಕೇಂದ್ರೀಯ ಪಠ್ಯದ ಇಂಗ್ಲಿಷ್ ಸ್ಕೂಲ್ ತೆಗೆಯುವ ನಿರ್ಧಾರ ಕೈಗೊಂಡಿದ್ದು. ನಾಡಿನ ಪ್ರಜ್ಞಾವಂತರೆಲ್ಲ ಈ ಸ್ಕೂಲ್ ಸ್ಥಾಪನೆಯನ್ನೇ ವಿರೋಧಿಸಬೇಕಾಗಿದೆ. ಹಾಗೆಯೇ ಟೇಲ್ ಗಂಗಾಧರ ಸ್ವಾಮಿಯ ಹೆಸರನ್ನು ಕುವೆಂಪು ಹೆಸರ ಜೊತೆ ಅಂಟಿಸುವುದನ್ನೂ ವಿರೋಧಿಸಬೇಕಾಗಿದೆ.


ನಾಡಿನ ಪ್ರಗತಿಪರರು ಇತ್ತ ಸ್ವಲ್ಪ ಗಮನಹರಿಸುವರೆಂದು ಆಶಿಸೋಣವೆ?

-ವನವಾಸಿ

ಪುಸ್ತಕಗಳು ಮನರಂಜನೆಗೆ ಮಾತ್ರವಲ್ಲ, ಜ್ಞಾನಾರ್ಜನೆಯ ಸಾಧನವೂ ಹೌದು -ಗಾಂಧೀಜಿ

ಕುವೆಂಪುಗೆ ಸಿಗದ ಕಥೆ

-ಸರ್ಜಾಶಂಕರ ಹರಳೀಮಠ



ನಿಮಗೆ ಇದು ತಮಾಷೆ ಎನಿಸಿ ನೀವು ಜೋರಾಗಿ ನಕ್ಕುಬಿಡಬಹುದು. ಈಗಲೂ ಮೀನು ತಿನ್ನದ ಈ ಬ್ರಾಹ್ಮಣರ ಹುಡುಗನಿಗೆ ಒಣಗು ಮೀನಿನ ವಾಸನೆ ಎಂದರೆ ಅದ್ಯೆಗೆ ಇಷ್ಟವಾಗುತ್ತದೆ ಎಂದು ನೀವು ಯೋಚಿಸಬಹುದು. ನಾನು ಬಿಡಿಸಿ ಹೇಳದಿದ್ದರೆ ನಿಮ ಗಾದರೂ ಹೇಗೆ ತಿಳಿಯುತ್ತದೆ?!

ಹಾಗೆ ನೋಡಿದರೆ ನನಗೆ ಮೊದಮೊದಲು ಆ ಒಣಗು ಮೀನಿನ ವಾಸನೆ ಎಂದರೆ ವಾಕರಿಕೆ ಬರುತ್ತಿತ್ತು. ಆಮೇಲೆ ಆಮೇಲೆ ಅದು ಹೇಗೆ ಇಷ್ಟವಾಯಿತೋ... ಈಗಂತೂ ಒಣಗು ಮೀನಿನ ವಾಸನೆ ಮೂಗಿಗೆ ಬಡಿದಾಗಲೆಲ್ಲಾ ಘಮಘಮಿಸುವ ಹುರಿಗಡಲೆಯ ಪರಿಮಳವನ್ನೇ ಆಘ್ರಾಣಿಸಿದಂತಾಗುವುದು. ಮೀನಿನ ವಾಸನೆಯೊಂದಿಗೆ ಬರುವ ಹುರಿಗಡಲೆಯ ಪರಿಮಳ ನಜೀರ್ ಸಾಬರ ಮನೆಯ ಬುಡಕ್ಕೆ ನನ್ನನ್ನು ಕರೆದುಕೊಂಡು ಹೋಗುವುದು...

ವಿಜಯದಶಮಿಯ ದಿನ ಸಾಹುಕಾರರ ಮನೆಯ ತೋಟದಲ್ಲಿ ಕೊರಗ ಅಡಿಕೆ ಮರ ಹತ್ತಿ ಕೊನೆತೆಗೆದ ಶಾಸ್ತ್ರ ಮಾಡಿದ ವಾರಕ್ಕೆಲ್ಲ ಘಟ್ಟ ಹತ್ತಿ ಬಂದು ಹರುಮನೆ, ಸುಸಿ ತೋಟ, ಹಾರೋಗೊಳಿಗೆ, ಕಡಿದಾಳು, ಕಟ್ಟೆಹಕ್ಕಲುಗಳಿಗೆಲ್ಲ ಸೈಕಲ್ಲಿನಲ್ಲಿಯೇ ಒಂದು ರೌಂಡು ಹೊಡೆದು ತಮಗೆ ಅಡಿಕೆ ಮಾರುವ ರೈತರಿಗೆಲ್ಲ ಅಷ್ಟಿಷ್ಟು ಮುಂಗಡ ಹಣ ಕೊಟ್ಟು ಹೋಗುವ ನಜೀರ್ ಸಾಬರು ಮತ್ತೆ ನಮ್ಮ ಊರಿನಲ್ಲಿ ತಮ್ಮ ಸಂಸಾರ ಸಮೇತ ಬಿಡಾರ ಹೂಡುವುದು ದೀಪಾವಳಿ ಹಬ್ಬದಲ್ಲಿಯೇ.

ನಮ್ಮೂರ ಸಾಹುಕಾರರು ಕೂಲಿಯಾಳುಗಳಿಗೆ ಕಟ್ಟಿಸಿದ ಸಾಲು ಮನೆಗಳ ಖಾಲಿ ಮನೆಗಳಲ್ಲಿ ಸಾಬರ ಸಂಸಾರಗಳು ಉಳಿದುಕೊಳ್ಳುವವು. ಆ ಸಾಲು ಮನೆಗಳಲ್ಲಿ ನಮ್ಮದು ಮೊದಲನೆಯದಾದರೆ, ನಜೀರ ಸಾಬರದು ಕೊನೆಯದು.

ಅದು ಹೇಗೋ ಏನೋ ಮೋಣು, ಜರೀನಾ ಎಲ್ಲಾ ಇವತ್ತು ಬರುತ್ತಾರೆ ಎಂದು ನಮಗೆ ಗೊತ್ತಾಗಿ ಬಿಡುವುದು. ನಾನು, ಸಂಧ್ಯಾ ಸಣ್ಣಕ್ಕ ಬಸ್ ಸ್ಟ್ಯಾಂಡಿಗೆ ಓಡಿ ಹೋಗುವೆವು. ನಾವು ಹೋಗಿ ತುಂಬ ಹೊತ್ತಾದರೂ ಬಸ್ಸು ಬಾರದಿದ್ದಾಗ ನಮಗೆ ಗಾಬರಿ ಯಾಗುವುದು. ಬಸ್ಸು ಎಲ್ಲಾದರು ಹಳ್ಳಕ್ಕೆ ಉರುಳಿ ಬಿತ್ತಾ ಎಂದು ನಾವು ಮಾತನಾಡಿಕೊಳ್ಳುವೆವು. ಕುಶಾವತಿ ಸೇತುವೆ ಮೇಲಿಂದ ಬಸ್ಸು ನಾರ್ವೇ ಹಳ್ಳಕ್ಕೆ ಬಿದ್ದು ಬಸ್ಸಲ್ಲಿದ್ದ ಜನರೆಲ್ಲಾ ತೇಲಿ ಹೋದರೆಂದು ಅಪ್ಪಯ್ಯ ಎಂದೋ ಹೇಳಿದ್ದು ನೆನಪಾಗಿ ಅದನ್ನು ಅಕ್ಕ- ತಂಗಿಗೆ ಹೇಳುವೆನು. ಇದನ್ನು ನೆನೆಸಿಕೊಂಡು ನಮಗೆಲ್ಲಾ ಅಳು ಬರುವಂತಾಗುವುದು. ಆಗ ದೂರದಲ್ಲಿ ಬಸ್ಸು ಬರುವ ಶಬ್ದ ಕೇಳಿ ನಮ್ಮ ಅಳು ಮಾಯವಾಗಿ ಬಸ್ಸು ಬಂದು ನಿಂತಾಗ ಅದರ ಹಿಂದುಗಡೆ ಬಾಗಿಲು ಎಲ್ಲಿಗೆ ಬಂದು ನಿಲ್ಲಬಹುದು ಎಂದು ಲೆಕ್ಕ ಹಾಕುತ್ತಾ ಅಲ್ಲಲ್ಲಿ ನಿಲ್ಲುವೆವು. ನಾವು ಲೆಕ್ಕ ಹಾಕುವಾಗಲೇ ಬಸ್ಸು ಬಂದು ನಿಂತು ಅದರಿಂದ ಮೋಣು, ಜರೀನಾ, ಫರ್ಜಾನ, ಸಫಿಯಾ, ಬೀಬಮ್ಮ, ನಜೀರ್ ಸಾಬರು ಎಲ್ಲಾ ಇಳಿಯುವರು.

ಬೀಬಮ್ಮ ಮಗುವೊಂದನ್ನು ಅವಚಿಕೊಂಡು ಹಿಡಿದಿರುವರು. ಮೋಣುನ ಬಗಲಲ್ಲೂ ಕೈಗಳಲ್ಲೂ ಚಂದ ಚಂದದ ಚೀಲಗಳಿರುವವು. ನಾನು ಮೋಣು ಬಲಗೈಯಲ್ಲಿದ್ದ ಕೆಂಪನೆಯ ಚೀಲವನ್ನು ಹಿಡಿದುಕೊಂಡು ನಜೀರ್ ಸಾಬರ ಹಿಂದೆ ಹೊರಡುವೆನು.

'ಅಲ್ಲೋ ಶಂಕು ಇದೇ ಬಸ್ಸಿಗೆ ಬರ್ತೇವಂತ ನಿಮಗ್ಯಾನಾರೂ ಕಣಸು ಬಿದ್ದಿತ್ತಾ ಮಾರಾಯಾ' ಅಂತ ಸಾಹೇಬರು ಹಿಂತಿರುಗಿ ನಗಾಡುವರು. ಬುರ್ಖಾದೊಳಗಿನ ಬೀಬಮ್ಮ ಮಗುವನ್ನು ಎಡಗೈವೊಂದರಲ್ಲೇ ಹೊಂದಿಸಿ ಕೊಂಡು ಬಲಗೈಯಲ್ಲಿ ಕಣ್ಣ ಮುಂದಿನ ಪರದೆಯನ್ನು ಹಿಂದಕ್ಕೆ ಹಾಕಿಕೊಂಡಾಗ ಸಾಬರ ಮಾತಿಗೆ ಅವರೂ ನಗಾಡುತ್ತಿರುವುದು ಕಾಣುವುದು. ಜರೀನಾ ಸಂಧ್ಯಾಳನ್ನು ನಿಧಾನಕ್ಕೆ ಹೆಜ್ಜೆ ಹಾಕುವಂತೆ ಸಂಜ್ಞೆ ಮಾಡಿದ್ದು ಗಮನಿಸಿ ನಾನು ನಿಧಾನಕ್ಕೆ ಹೆಜ್ಜೆ ಹಾಕುವೆನು. ಜರೀನಾ ಎರಡೂ ಅಂಗೈಗಳನ್ನು ಬಿಡಿಸಿ ಮದರಂಗಿ ಚಿತ್ತಾರವನ್ನು ತೋರಿಸಿ ಬೆರಗುಗೊಂಡ ನಮ್ಮನ್ನು ದಿಟ್ಟಿಸುತ್ತ ಕಣ್ಣರಳಿಸುವಳು.

ಮನೆಗೆ ಹೋದ ತಕ್ಷಣ ಗೋಡೆಯ ಮಧ್ಯದ ತೊಲೆಗೆ ಸೀರೆಯೊಂದನ್ನು ತೊಟ್ಟಿಲಿನಂತೆ ಕಟ್ಟಿ ಮಗುವನ್ನು ಮಲಗಿಸುವ ಬೀಬಮ್ಮ , ಸಾಬರು ತಂದ ಚೀಲವನ್ನು ಬಿಚ್ಚಿ ಅದರಲ್ಲಿದ್ದ ಕೊಬ್ಬರಿ ಮಿಠಾಯಿಗಳನ್ನು ನಮಗೆಲ್ಲಾ ಕೊಡುವರು. ಸೀರೆಯ ತೊಟ್ಟಿಲಲ್ಲಿ ಮಲಗಿದ್ದ ಮಗುವನ್ನು ಒಳಗಿಣಿಕಿ ನೋಡಿದ ಸಂಧ್ಯಾ ಸಣ್ಣಕ್ಕ ಮಿಠಾಯಿ ತಿನ್ನುತ್ತಲೇ 'ಪಾಪು ಎಷ್ಟು ಬೆಳ್ಳಗಿದೆ' ಅಂತಾ ತವ್ಮುಲ್ಲೇ ಮಾತಾಡಿಕೊಳುತ್ತ ಜರೀನ, ಫರ್ಜಾನ, ಸಫಿಯಾರೊಂದಿಗೆ ಅಂಗಳದಲ್ಲಿನ ಸುಬ್ಬನ ಹಲಸಿನ ಮರದ ಬುಡಕ್ಕೆ ಹೋಗಿ ಹೆಬ್ಬಾವಿನಂತೆ ನೆಲದ ಮೇಲೂ ಹರಡಿದ ಅದರ ದೊಡ್ಡ ದೊಡ್ಡ ಬೇರುಗಳ ಕೆಳಗೆ ಅಡಿಗೆ ಆಟ ಶುರು ಮಾಡುವರು. ಬಾಗಿಲತ್ತಲೇ ದೃಷ್ಟಿ ನೆಟ್ಟಿದ್ದ ಮೋಣುವಿಗೆ ನಜೀರ್ ಸಾಬರು ಮನೆಯ ಮುಂದಿನ ಹಡ್ಯೆಗೆ ಹೋಗಿ ಒಂದಷ್ಟು ಕಟ್ಟಿಗೆ ಜಿಗ್ಗನ್ನು ಆರಿಸಿ ತರಲು ಹೇಳುವರು. ಜರೀನ, ಫರ್ಜಾನ, ಸಫಿಯಾರೆಲ್ಲಾ ಆಗಲೇ ಹಲಸಿನ ಮರದ ಬುಡದಲ್ಲಿ ಅಡಿಗೆ ಆಟ ಆಡುವುದನ್ನು ಮನೆಯ ಒಳಗಿನಿಂದಲೇ ಗಮನಿಸಿದ್ದ ಮೋಣು ಅಸಮಾಧಾನ ದಿಂದಲೇ ಹೂಂ ಗುಟ್ಟಿ ಬಾಗಿಲಲ್ಲಿ ನನ್ನ ನೋಡಿ ಖುಷಿಯಾಗಿ ನನ್ನನ್ನು ಕರೆದುಕೊಂಡು ಹಡ್ಡೆಗೆ ಹೋಗುವನು.

ಸರಸರನೆ ಕೈಗೆ ಸಿಕ್ಕ ಕಟ್ಟಿಗೆ ಜಿಗ್ಗನ್ನು ಒಟ್ಟು ಮಾಡಿ ಮೋಣುವಿನ ಮನೆಯ ಹಿತ್ತಲಿಗೆ ಹಾಕಿ ನಾವು ಅಡಿಗೆ ಆಟ ಆಡಲು ಹಲಸಿನ ಮರದ ಬುಡಕ್ಕೆ ಓಡುವೆವು. ಜರೀನಾಳಿಗೆ ನಾಲ್ಕು ಜನ ಅಕ್ಕಂದಿರಿದ್ದು ಅವರ ಜೊತೆ ನಾವೂ ಹೀಗೆ ಆಟವಾಡುತ್ತಿದ್ದೆವೆಂದು ದೊಡ್ಡಕ್ಕ ನಾವು ಆಟವಾಡುವಾಗ ಆ ಕಡೆ ಬಂದರೆ ಹೇಳುವಳು. ಈಗ ಅವರೆಲ್ಲ ಘಟ್ಟದ ಕೆಳಗೆ ಮದುವೆ ಯಾಗಿದ್ದಾರೆಂದು ದೊಡ್ಡಕ್ಕ ಹೋದ ನಂತರ ಜರೀನ ತನ್ನ ಅಕ್ಕಂದಿರ ಮನೆಗಳ ವಿಚಾರವನ್ನು ಹೇಳುವಳು.

ಬಂದ ವಾರಕ್ಕೆಲ್ಲ ಜರೀನ, ಫರ್ಜಾನ, ಸಫಿಯಾ, ಮೋಣು ಎಲ್ಲರನ್ನು ಸಾಬರು ಮಂಗಳೂರಿಗೆ ಬಿಟ್ಟು ಬರುವರು. ಎಷ್ಟು ದಿನಾ ಅಂತಾ ಇಸ್ಕೂಲಿಗೆ ಚಕ್ಕರ್ ಹೊಡೆಯೋದು ಎಂದು ಅವರನ್ನು ಕರೆದುಕೊಂಡು ಹೋಗುವಾಗ ನಮ್ಮನ್ನು ನೋಡಿ ಸಾಬರು ಗೊಣಗುವರು. ನಾವು ಬಸ್ ಸ್ಟ್ಯಾಂಡಿನ ತನಕವೂ ಹೋಗಿ ಬಸ್ಸಿನಲ್ಲಿ ಕುಳಿತ ಅವರಿಗೆ ಟಾಟಾ ಮಾಡುತ್ತಿರುವಾಗಲೇ ಬಸ್ಸು ಹೊರಟು ಹೋದಾಗ ಕಣ್ಣಲ್ಲಿ ನೀರು ಬರುವುದು. ಮನೆಯ ದಾರಿಯಲ್ಲಿ ಎಳ್ಳಮವಾಸ್ಯೆಗೆ ಇನ್ನೆಷ್ಟು ದಿನವೆಂದು ಲೆಕ್ಕ ಹಾಕುವೆವು.

ಎಳ್ಳಮವಾಸ್ಯೆ ಜಾತ್ರೆಗೆ ಒಂದೆರಡು ದಿನಗಳಿರುವಾ
ನಜೀರ ಸಾಬರು ಮಂಗಳೂರಿಗೆ ಹೋಗಿ ಮೋಣ
ಜರೀನ, ಸಫಿಯಾ ಎಲ್ಲರನ್ನು ಕರೆದುಕೊಂಡು ಬರುವು
ಈಗ ಸಾಬರ ಮನೆಯಲ್ಲಿ ಬೆಂಡು ಬತ್ತಾಸು ಮಿಠಾಯಿಗ
ಮೂಟೆಗಳೇ ಇರುವವು. ಅವನ್ನೆಲ್ಲ ಸಾಬರು ಬೆ
ತಕ್ಕಡಿಯಲ್ಲಿ ತೂಕ ಮಾಡಿಕೊಟ್ಟರೆ ಮೋಣು ಚಿಕ್ಕ
ಚೀಲಗಳಿಗೆ ಅವನ್ನು ತುಂಬುವನು. ಆ ಚಿಕ್ಕ
ಚೀಲಗಳನ್ನೆಲ್ಲ ಕಟ್ಟಿ ದೊಡ್ಡದೊಂದು ಗೋಣಿಚೀ
ತುಂಬಿಸಿಕೊಂಡು ಸೈಕಲ್ ಕ್ಯಾರಿಯರ್‌ಗೆ ಕಟ್ಟಿ ಮೋ
ವನ್ನು ಕರೆದುಕೊಂಡು ಸುಸಿತೋಟ, ಹರುಮನೆಗಳಿಗೆ
ತೆರಳುವರು. ನಮಗೆಲ್ಲಾ ಸಾಬರು ಕೊಡುವ ಬೆಂ
ಬತ್ತಾಸು ಮಿಠಾಯಿ ತಿಂದೇ ಹೊಟ್ಟೆ ತುಂಬುವುದ
ಅಡಿಗೆ ಆಟ ಆಡಲು ಬರುವಾಗ ಜರೀ
ಫರ್ಜಾನ, ಸಫಿಯಾ ಲಂಗದ ತುಂಬಾ ಮಿಠಾ
ತಂದು ಸುಬ್ಬನ ಹಲಸಿನ ಮರದ ಬುಡ
ನಾನು ಕೊಯ್ದು ತಂದು ಹರಡಿದ ಮುದುಕನಮ
ಎಲೆಯ ಮೇಲೆ ಇಳಿಸುವರು. ಮೋಣುವಿ
ದೊಗಳೇ ಚಡ್ಡಿಗಳ ದೊಡ್ಡ ಜೇಬುಗಳಲ್ಲಿದ್ದ ಮಿಠಾ
ಗಳನ್ನು ಅದರ ಮೇಲೆ ಸುರುವಿದಾಗ ಮಿಠಾಯಿಗ
ಒಂದು ಸಣ್ಣ ಗುಡ್ಡವೇ ಅಲ್ಲಿ ಸೃಷ್ಟಿಯಾಗುವುದ
ಸ್ನಾನದ ದಿನದ ಮಾರನೆ ದಿನವಾದ ತೇರಿನ ದಿ
ಬೀಬಮ್ಮ ನಮ್ಮಮ್ಮನಿಗೆ ಹೇಳಿ ಅವರ ಮ
ಳೊಂದಿಗೆ ನಮ್ಮನ್ನು ಎಳ್ಳಮವಾಸ್ಯೆ ಜಾತ್ರೆಗೆ ಕರೆದು
ಕೊಂಡು ಹೋಗುವರು.

ತೇರು ಎಳೆಯುವುದು ರಥಬೀದಿಯಲ್ಲಾದರ
ಬಸ್ಸಿಳಿಯುತ್ತಿದ್ದಂತೆ ಕೊಪ್ಪ ಸರ್ಕಲ್ಲಿನಲ್ಲಿಯೇ ರಾ
ರಾಶಿ ಜನ. "ಈ ಜಾತ್ರೇಲಿ ನಾವು ಹಿಂಗೆ ಹೋ
ಎಲ್ಲಾ ದಿಕ್ಕುಪಾಲಾಗ್ತೀವಿ" ಎಂದು ಉದ್ಗಾರ ತೆಗ
ಬೀಬಮ್ಮ ಮೋಣುವಿನ ಕೈಯನ್ನು ನಾ
ಜರೀನಾಳ ಕೈಯನ್ನು ಸಣ್ಣಕ್ಕನು, ಸಂಧ್ಯಾಳ ಕೈಯ
ಫರ್ಜಾನಳಿಗೂ ಹಿಡಿದುಕೊಳ್ಳಲು ಹೇಳಿ ಜೇನ
ಳನ್ನು ಎದೆಗವಚಿಕೊಂಡು ಬಲಗೈಯಲ್ಲಿ ಸಫಿಯಾಳ
ಹಿಡಿದುಕೊಂಡು ಪೇಟೆಯಲ್ಲಿ ಮುಂದೆ ಮುಂ
ನಡೆಯುವರು. ರಥ ಬೀದಿಯ ಎರಡೂ ಬದಿ ಮಾರಾಟಕ್ಕೆ
ರಾಶಿ ರಾಶಿ ಬೆಂಡು ಬತ್ತಾಸು ಮಿಠಾಯಿಗಳನ್ನು ನೋ
ನಮಗೆ ಆಸೆಯೇ ಹುಟ್ಟದು. ನಜೀರ್ ಸಾಬರ ಮನೆಯ
ಇದಕ್ಕಿಂತ ಜಾಸ್ತಿಯಿದೆ ಎಂದು ನಾನು ಮನಸ್ಸಿನಲ್ಲಿಯೇ
ಅಂದುಕೊಳುತ್ತ ಬೇರೆ ಅಂಗಡಿಗಳತ್ತ ದೃಷ್ಟಿ ಹರಿಸುವೆ

ನಾನು ಹೈಸ್ಕೂಲಿಗೆ ಹೋಗಲಾರಂಭಿಸಿದ ವರ್ಷ
ಸಾಬರು ಮೋಣುವನ್ನು ಶಾಲೆ ಬಿಡಿಸಿ ತಮ್ಮೊಂದಿ
ಕರೆದುಕೊಂಡು ಬಂದರು. ಮೋಣುವು ಸಾಬರೊಂದಿ
ಅಡಿಕೆ ವ್ಯಾಪಾರಕ್ಕೆ ಹಳ್ಳಿಗಳಿಗೆ ತಿರುಗಲಾರಂಭಿಸಿದನ
ನಾನು ಬೆಳಿಗ್ಗೆ ಎದ್ದು ಆ ಚಳಿಯಲ್ಲಿ ಚೆಂಬು ಹಿಡಿ
ಗುಡ್ಡಕ್ಕೆ ಹೋಗುವಾಗ ಮೋಣು ತನ್ನ ಅಪ್ಪಯ್ಯನ ಹಿ
ಸೈಕಲ್ಲನ್ನು ದೂಡಿಕೊಂಡು ಹಿಂಬಾಲಿಸುವನು. ತಲೆಯ
ಬಿಳಿಯ ಟವೆಲ್ಲಿನಿಂದ ಬಿಗಿಯಾಗಿ ಕಟ್ಟಿಕೊಂಡಿರು
ಸಾಬರು, ಬಿಳಿಯ ಅಂಗಿ, ಪಟ್ಟೆ ಪಟ್ಟೆ ಲುಂ
ಉಟ್ಟುಕೊಂಡು ಹೆಗಲ ಮೇಲೆ ಚೆತ್ತದ ತಕ್ಕಡಿಯ
ನೇತಾಕಿಕೊಂಡು ತಕ್ಕಡಿಯ ಹಿಡಿಯನ್ನು ಎಡಗೈಯಿಂ

ಸಬಲ ಜಾಗತೀಕರಣಕ್ಕೆ ದುರ್ಬಲ ವಿರೋಧ



ಆರ್ಥಿಕ ಉದಾರೀಕರಣ, ಗ್ಯಾಟ್, ಡೆಂಕಲ್ ಪ್ರಸ್ತಾವಗಳಿಂದ ಎರಡು ದಶಕಗಳ ಹಿಂದೆ ಅಡಿಯಿಟ್ಟ ಜಾಗತೀಕರಣದ ಪ್ರಕ್ರಿಯೆ ಇಂದು ಯಾವ ಪ್ರತಿರೋಧಕ್ಕೂ ಜಗ್ಗದೆ ಮುಂದಡಿಯಿಡುತ್ತಲೇ ಇದೆ. ನವ ವಸಾಹತುವಾದ ಎನ್ನಲಾಗುವ ಜಾಗತೀಕರಣದ ಸ್ವರೂಪ, ಉದ್ದೇಶ ಮತ್ತು ಇದು ಸಾಗಿರುವ ದಾರಿಯ ಬಗ್ಗೆ ಹದಿನೈದು ಚಿಂತಕರು ಬರೆದ ಲೇಖನಗಳನ್ನು ಈ ಪುಸ್ತಕದಲ್ಲಿ ಸಂಕಲಿಸಲಾಗಿದೆ. ಇವುಗಳಲ್ಲಿ ಎರಡು ಅನುವಾದಿತ ಲೇಖನಗಳು. ಜಾಗತೀಕರಣಕ್ಕೆ ಪರ್ಯಾಯ ಸಾಧ್ಯತೆಯನ್ನು ಹುಡುಕಾಡುತ್ತಾ ಸಾಹಿತ್ಯ ಸಂಸ್ಕೃತಿ, ಸಾಮಾಜಿಕ ಪ್ರಗತಿ, ಜಾನಪದ ಸಂಬಂಧಗಳು, ದಲಿತ, ರೈತ ಹಾಗೂ ಜೈವಿಕ ವೈವಿಧ್ಯತೆ, ಆರೋಗ್ಯ ನೀತಿ, ಉದ್ಯೋಗ, ಸಮೂಹ ಮಾಧ್ಯಮಗಳು ಮುಂತಾದ ಕ್ಷೇತ್ರಗಳನ್ನು ಮುಖಾಮುಖಿಯಾಗಿ ಇಟ್ಟುಕೊಂಡು ಇಲ್ಲಿ ಚಿಂತನೆ ನಡೆಸಲಾಗಿದೆ.



ಜಾಗತೀಕರಣವು ವಸಾಹತುಶಾಹಿ ಮೂಲದ ಕಲ್ಪನೆ. ಇದಕ್ಕೂ ಮೊದಲು ಕೈಗಾರಿಕೀಕರಣವು ಪ್ರತ್ಯೇಕವಾದ ಚಟುವಟಿಕೆಯಾಗಿ ಆರಂಭಗೊಂಡಿತ್ತಾದರೂ ಅದೀಗ ಜಾಗತೀಕರಣದ ಅಂಗಕ್ರಿಯೆಯೇ ಆಗಿದೆ. ಆದ್ದರಿಂದ ಜಾಗತೀಕರಣದ ಜಾರುಬಂಡೆ ಉರುಳಿ ಬರುತ್ತಿರುವಾಗ ಏನೆಲ್ಲಾ ಉತ್ಪಾತಗಳನ್ನು ಉಂಟುಮಾಡುತ್ತದೆ ಎಂದು ಊಹಿಸಲಾಗದು. ಮೊದಲು ಆರ್ಥಿಕ ಸುಧಾರಣೆಯ ಹೆಸರಿನಲ್ಲಿ ಕಾಲಿಟ್ಟ ಜಾಗತೀಕರಣವು ಈಗ ಅಮೆರಿಕ ಪ್ರೇರಿತ ಆರ್ಥಿಕ ಭಯೋತ್ಪಾದಕತೆಯಾಗಿ ಮಾರ್ಪಟ್ಟಿದೆ. ಇದು ಅರ್ಥಶಾಸ್ತ್ರದ ಪರಿಭಾಷೆಯಲ್ಲಿರುವುದರಿಂದ ಇದಕ್ಕೆ ಮನುಷ್ಯ ಸಂಬಂಧದ ಮುಲಾಜು ಇಲ್ಲ. ಹೀಗೆ ಜಾಗತೀಕರಣದ ಆರಂಭಿಕ ಸಂದರ್ಭದಲ್ಲಿ ಕಾಣಿಸಲಾದ ಸಂಗತಿಗಳು ಇವು : 1) ಜಾಗತೀಕರಣವನ್ನು ನಿಜವಾಗಿ ಯಾರೂ ನಿಯಂತ್ರಿಸುವುದಿಲ್ಲ. 2) ಇದು ಸಾಂಸ್ಕೃತಿಕ ಆದರ್ಶಗಳ ಪರವಾಗಿಯೂ ಇಲ್ಲ, ವಿರೋಧವಾಗಿಯೂ ಇಲ್ಲ. 3) ಇದು ರಾಷ್ಟ್ರೀಯತೆಯ ಪ್ರಜ್ಞೆಯನ್ನೂ ಮೀರಿದ್ದು. 4) ಜಾಗತೀಕರಣವು ಸಾಹಿತ್ಯ-ಸಂಸ್ಕೃತಿಗಳ ನುಡಿಕಟ್ಟನಲ್ಲಿ ಯೋಚಿಸದೆ ಸರಕು ಸಂಸ್ಕೃತಿಯ ಪರಿಭಾಷೆಯಲ್ಲಿ ಯೋಚಿಸುತ್ತದೆ. 5) ಇದಕ್ಕೆ ನಿರ್ದಿಷ್ಟವಾದ ಆರ್ಥಿಕ ಗುರಿಯಿದೆ. 6) ಕ್ರಾಂತಿಕಾರಕವಾಗಿದ್ದರೂ ಕೂಡ ಇದು ಸಮಾಜವಾದಿಯಲ್ಲ. 9) ಇದು ಬಹಿರ್ಮುಖವಾದ ಆರ್ಥಿಕ ನೀತಿ. 8) ಮಾರ್ಕ್ಸ್‌ವಾದದಂತೆ ಈ ಆರ್ಥಿಕ ಸುಧಾರಣೆ ಕೂಡ ಲೌಕಿಕವಾದ ನೆಲೆಯಲ್ಲಿ ಹುಟ್ಟಿಕೊಂಡಿದೆ. 9) ಇದರಲ್ಲಿ ರಾಷ್ಟ್ರವನ್ನು ತಟಸ್ಥೀಕರಿಸುವ ವಕ್ರ ಉದ್ದೇಶ ಇರದಿದ್ದರೂ ಕೂಡ ಇದರಿಂದ ರಾಷ್ಟ್ರೀಯ ಆರ್ಥಿಕ ನೀತಿ ಮತ್ತು ಆಚರಣೆಗಳು ಜಾಗತಿಕ ಆರ್ಥಿಕತೆಯ ಅವಶ್ಯಕತೆಗಳಿಗೆ ಸರಿಹೊಂದುತ್ತ ಮಧ್ಯವರ್ತಿಗಳಂತೆ ಬದಲಾಗಬಹುದು. 10) ವಿದೇಶಿ ಕಂಪನಿಗಳಂತೆ ಸ್ವದೇಶಿ ಕಂಪನಿಗಳೂ ಇದರಲ್ಲಿ ಭಾಗವಹಿಸಬಹುದು.

ಆದರೆ ಕಾಲಕ್ರಮೇಣ ಜಾಗತೀಕರಣದ
ಹಲ್ಲು-ಉಗುರುಗಳು ಎಷ್ಟು ಬೆಳೆದವೆಂದ
ಇದರಿಂದ ದೇಶಗಳ ಸಂವಿಧಾನಾತ್ಮ
ಸಾರ್ವಭೌಮತ್ವಕ್ಕೇ ಧಕ್ಕೆಯುಂಟಾಯಿತ
ಆರಂಭದಲ್ಲಿ ಮುಖತೋರಿಸದಿದ್ದ ಖಾಸ
ಕರಣವು ಎಲ್ಲೆಲ್ಲೂ ವಿಜೃಂಭಿಸತೊಡಗಿತ
ಶಿಕ್ಷಣ, ವೈದ್ಯಕೀಯ, ಪತ್ರಿಕೋದ್ಯಮ, ಕೃ
ಅಷ್ಟೇ ಏಕೆ- ಸಾಹಿತ್ಯವೂ ಬಂಡವಾಳಶಾ
ಗಳ ಹಾಜರಿಯಿಂದಾಗಿ ವಾಣಿ
ವಾಯಿತು. ಜಾಗತೀಕರಣದ ಸುಂದ
ಪದಪುಂಜಗಳಿಂದ ಮೊದಲು ಪುಳಕಗೊಂಡವ
ಬೂರ್ಜ್ವಾ ಬುದ್ಧಿಜೀವಿಗಳು. ಅವರಿಗೆ ಇಲ್ಲಿ ಮಾ
ಕಟ್ಟೆಯ ಸಮಾಜವಾದ ಕಂಡಿತು. ಇನ್ನು ಜಾಗ
ಅರ್ಥವ್ಯವಸ್ಥೆಯ ರಾಷ್ಟ್ರೀಯ ಸಂಸ್ಕೃತಿಯನ್ನು ಅದ
ವೈವಿಧ್ಯವನ್ನು ಅರ್ಥಹೀನಗೊಳಿಸುವುದು. ಇದರ
ಪ್ರಾದೇಶಿಕ ಸಂಸ್ಕೃತಿಯ ನಾಶ, ಯಾವುದೇ ಆದರ್ಶವಾ
ತಾತ್ವಿಕತೆಯು ಬೇಕಿಲ್ಲವಾಗುವುದು. ಮನ
ಮಾರುಕಟ್ಟೆಯ ನಿಯಂತ್ರಣದಲ್ಲಿ ಇರುವುದರಿಂ
ಯಾವುದೇ ಅಲೌಕಿಕವೂ ಇಲ್ಲಿ ಸಾಧ್ಯವಾಗಲಾರದ
ಇದನ್ನೆಲ್ಲ ಜಾಗತೀಕರಣವು ತನ್ನ ದಿವ್ಯ ಉದಾಸೀನ
ಯಿಂದಲೇ ಸಾಧಿಸಿ ಸಾಮಾನ್ಯ ಜನರ ದೃಷ್ಟಿಯಲ್ಲಿ ಮ
ಎನ್ನಿಸಿಕೊಳ್ಳುತ್ತದೆ. ಪರಿಣಾಮವಾಗಿ ಇಲ್ಲಿ ಸಾಂಸ್ಕೃ
ಸಂಘರ್ಷ ಜರುಗುವುದಿಲ್ಲ. ನಮ್ಮ ಬದಲಾ
ಸಂವೇದನೆಯಿಂದ ಈಗಾಗಲೇ ಇದು ನಮ್ಮ ಅರಿ
ಬಂದಿದೆ. ಆದರೆ ವಾಸ್ತವವಾಗಿ, ಸಂಸ್ಕೃತಿಯ ವಿರು
ರಾಷ್ಟ್ರೀಯತೆಯ ವಿರುದ್ಧ ಮತ್ತು ಮನುಷ್ಯರ ಅಂತರಂ
ಪ್ರತ್ಯೇಕತೆಯ ವಿರುದ್ಧ ಜಾಗತೀಕರಣವು ನಡೆಸುವ ಪರೋ

ವಿಬಿಡುವವರು. ಬಾಯಿತುಂಬಾ ಎಲೆ-ಅಡಿಕೆ ಹಾಕಿ ಂಡು ಜಗಿಯುತ್ತಾ ಜಗಿದಿದ್ದನ್ನು ಉಗಿಯುತ್ತಾ ಕಿಮ್ಮಣ್ಣು ರಿಯನ್ನು ಇನ್ನಷ್ಟು ಕೆಂಪುಗೊಳಿಸುತ್ತಾ ನಡೆದೇ ಗುವವರು. ಮೋಣು ಸೈಕಲ್ಲು ದೂಡಿಕೊಂಡು ಪ್ಪನ್ನು ಹಿಂಬಾಲಿಸುವನು.

ಮೋಣು ಎಲ್ಲೆಲ್ಲಿಗೆ ಹೋಗಿ ಬರುತ್ತಾನೆಂದು ನಗಂತೂ ಕೊನೆಯಿಲ್ಲದ ಕುತೂಹಲ. ಅದನ್ನು ತಿಳಿಯುವ ನಕ ಸಮಾಧಾನವಿಲ್ಲ. ಸಾಯಂಕಾಲ ಸ್ಕೂಲಿನಿಂದ ಮನೆಗೆ ಂದ ತಕ್ಷಣ ಬ್ಯಾಗನ್ನು ಮನೆಯ ಒಂದು ಮೂಲೆಗೆ ಸೆದು, ಮೋಣುವಿನ ಮನೆಗೆ ನಾನು ಓಡಿ ಹೋಗುವೆನು. ಮೋಣು, ಇವತ್ತು ಎಲ್ಲಿಗೆ ಹೋಗಿದ್ಯಾ" ಎಂದು ಕೇಳಿದರೆ ತ ಒಂದಿನ ಹರುಮನೆ ಅಂದರೆ ಮತ್ತೊಂದಿನ ಸಸಿ ೋಟ ಎನ್ನುವನು. ಇನ್ನೊಂದಿನ ಕದಿದಾಳಿಗೆ, ಂಗದೊಂದಿನ ಬಾಲನಕೊಡಿಗೆಗೆ ಅನ್ನುವನು. ಅಂದು ಡ ಹಾಗೇ ಓಡಿ ಹೋದವನಿಗೆ ಅಂಗಳದಲ್ಲಿ ಸೈಕಲ್ಲು ರದಿದ್ದು ನೋಡಿ ಮೋಣು ಇರಲಿಕ್ಕಿಲ್ಲ ಅಂದುಕೊಂಡೆ. ರೋ ಇಬ್ಬರು ಸಾಬರ ಮನೆಯ ಜಗುಲಿಯಲ್ಲಿ ಳಿತು ಬೀಡಿ ಸೇದುತ್ತಿದ್ದರು. ಅವರ್‍ಯಾರು ಎಂದೂ ೋಡದೆ ಸಾಬರ ಮನೆಯೊಳಗೆ ಓಡಿದೆ. ಬಾಗಿಲಲ್ಲಿಯೇ ಲಾಗಿ ಒಂದರ ಮೇಲೊಂದು ಕುಳಿತಿದ್ದ ಅಡಿಕೆಯ ೀಲಗಳು ನನ್ನನ್ನು ತಡೆದವು. ಮನೆಯೊಳಗೆ ಧೂಪದ ೂಗೆ ತುಂಬಿಕೊಂಡಿತ್ತು. ಬೀಬಮ್ಮ ತೊಟ್ಟಿಲು ತೂಗುತ್ತಾ ವರ ಭಾಷೆಯಲ್ಲಿ ರಾಗವಾಗಿ ಜೋಗುಳ ಹಾಡುತ್ತಿದ್ದರು.

"ಬೀಬಮ್ಮ ಮೋಣು ಎಲ್ಲಿಗೆ ಹೋಗ್ಯಾನೆ" ಂಗಳವನ್ನು ನೋಡುತ್ತಾ ಸೈಕಲ್ಲು ಅಲ್ಲಿಲ್ಲ ಎಂದು ನ್ನೊಮ್ಮೆ ಖಚಿತಪಡಿಸಿಕೊಳ್ಳುತ್ತಾ ಕೇಳಿದೆ.

ಕತೆ

"ಎಂತದೋ ಶಂಕು.. ೋಣುನು ಸಾಬರು ಬೆಳಿಗ್ಗೆ ೋದೋರು ಇನ್ನೂ ಂದಿಲ್ಲ... ಎಲ್ಲೋದ್ರೊ ನೋ" ಎಂದು ಅದನ್ನೇ ವು ಯೋಚಿಸುತ್ತಿರುವರಂತೆ ಸಹನೆ ತೋರಿದರು. ೀಬಮ್ಮ ಜೋಗುಳ ಲ್ಲಿಸಿದ್ದರಿಂದ ಮಗು ಅಳಲು ಆರಂಭಿಸಿತು. ಅಳುತ್ತಿದ್ದ ಂಗುವನ್ನು ಹಿಡಿದೆತ್ತಿ ಬೀಬಮ್ಮ ಅದರ ಕಣ್ಣೀರು ರೆಸಿದರು. ನನಗೆ ಧೂಪದ ಹೊಗೆ ಉಸಿರುಕಟ್ಟಿಸಿದಂತಾಗಿ ೂರಬಂದೆ. ಹೊರಗೆ ಬೀಡಿ ಸೇದುತ್ತಾ ಕೂತವರು ಟ್ಟಪ್ಪಗೌಡರು ಮತ್ತು ರಾಮಪ್ಪಗೌಡರು ಎಂದು ಗುರುತು ಕ್ಕಿತು.

ಕಿಟ್ಟಪ್ಪಗೌಡರು ಜೋರಾಗಿ ನಗಾಡುತ್ತಿದ್ದರು. ಮಪ್ಪಗೌಡರು ಆ ನಗುವಿನಿಂದ ಹುಮ್ಮಸ್ಸು ಡೆದಿರುವರಂತೆ "ಎಷ್ಟು ವರ್ಷದಿಂದ ನೋಡ್ತಾನೇ ದ್ದೀನಿ.. ಸಾಬ್ರು ಒಂದು ವರ್ಷಾನೂ ಹೊಸಾ ಮಗು ಡ್ದೆ ಘಟ್ಟ ಹತ್ತೋದೇ ಇಲ್ಲ.. ಎಲ್ಲಾ ಸಾಬ್ರು ಇಂಗೆ ಕ್ಕು ಮಾಡ್ತಾ ಇದ್ರೆ ನಮ್ಮೂರು ಪಾಕಿಸ್ತಾನನೇ ಬಿಡು ಡು..."


ಕಿಟ್ಟಪ್ಪ ಗೌಡರು ಮತ್ತೆ ನಗುವ ಉತ್ಸಾಹ ತೋರದೆ "ಮನೆಯಲ್ಲಿ ನೋಡಿದ್ರೆ ನೆಂಟ್ರು ಬಂದ್ ಕುತ್ಕಂಡವರೇ.. ಈ ಸಾಬ್ರು ಎಲ್ಲಿಗೋದ್ರೋ ಏನೋ" ಎಂದು ಲೊಚಗುಟ್ಟಿದರು. ಆಗಲೇ ತಣಬೆ ತೆಗೆಯುವ ಸದ್ದಾಗಿ, ತಣಬೆಯಿಂದ ಸೈಕಲ್ ದೂಡುವ ಸದ್ದು ಕೇಳಿ ಮೋಣು ಬಂದನೆಂದು ನಾನು ತಣಬೆಯ ಬುಡಕ್ಕೆ ಓಡಿದೆ. ಆಗಲೇ ಮೋಣು, ಸಾಬರು ಸೈಕಲ್ಲನ್ನು ತಣಬೆ ದಾಟಿಸಿಯಾಗಿತ್ತು, ಅವರೊಂದಿಗೆ ನಾನು ಅಂಗಳಕ್ಕೆ ಬಂದೆ. ಸೈಕಲ್ಲಿನ ಕ್ಯಾರಿಯರು, ಪೆಡಲಿನ ಮೇಲೆ ಅಡಿಕೆಯ ಮೂಟೆಗಳಿದ್ದವು. ಮೋಣು, ಸಾಬರು ಅದನ್ನು ಅಂಗಳದಲ್ಲಿ ಇಳಿಸತೊಡಗಿದರು. ಜಗುಲಿಯಲ್ಲಿ ಕುಳಿತ ಕಿಟ್ಟಪ್ಪಗೌಡರು, ರಾಮಪ್ಪಗೌಡರು ಸೈಕಲ್ಲಿನ ಬಳಿಯೇ ಬಂದು ನೆಂಟರು ಬಂದ ವಿಚಾರ ತಿಳಿಸಿ ಸಾಬರು ಕೊಟ್ಟ ದುಡ್ಡನ್ನು ಪಡೆದು ಲಗುಬಗನೆ ಓಡಿದಂತೆಯೇ ನಡೆದು ಹೋದರು. ಅಡಿಕೆ ಚೀಲ ಇಳಿಸಿ ನಜೀರ್ ಸಾಬರು ಒಳ ಹೋಗುತ್ತಿದ್ದಂತೆ "ಎಂತ ಮೋಣು... ಎಲ್ಲಿಗೆ ಹೋಗಿದ್ದಿರಿ ಮಾರಾಯಾ... ಘಟ್ಟ ಇಳಿದು ಮಂಗಳೂರಿಗೆ ಹೋಗಿದ್ರಾ.." ಎಂದು ತಡೆಯದೆ ಕೇಳಿದೆ. ಒಳಗೆ ಬೀಬಮ್ಮನೂ ಸಾಹೇಬರಿಗೆ ಅವರ ಭಾಷೆಯಲ್ಲಿ ಎಲ್ಲಿಗೆ ಹೋಗಿದ್ದೀರಿ ಎಂದು ಕೇಳುತ್ತಾ ಜಗಳ ಮಾಡುವವರಂತೆ, ಇನ್ನೊಂದು ಕ್ಷಣ ಜೋರಾಗಿ ಅಳುತ್ತಿದ್ದುದು ಕೇಳಿಸಿತು.

"ಕುಪ್ಪಳ್ಳಿ ಅಂತ ಊರು ಕಣೋ.. ಸಸಿ ತೋಟಕ್ಕೆ ಹೋಗಿ ಅಲ್ಲಿಂದ ಒಳ ದಾರಿಯಲ್ಲಿ ಅಮ್ತಿ ಮೇಲೆ ದೇವಂಗಿಗೆ ಹೋಗಿ ದೇವಂಗಿಯಿಂದ ಆ ಊರಿಗೆ ಹೋಗಬೇಕು ಮಾರಾಯ... ತುಂಬಾ ದೂರ.. ಇಳಿಜಾರಿಗಿಂತ ಅಷ್ಟೇ ಜಾಸ್ತಿ.. ಸೈಕಲ್‌ಗಿಂತ ನಡ್ದಿದ್ದೆ ಜಾಸ್ತಿ. ಬರಬೇಕಾದ್ರಂತೂ ಈ ಅಡಿಕೆ ಮೂಟೆ ಹೇರಿದ ಸೈಕಲ್ಲು ದೂಡಿ ದೂಡಿ ಸಾಕಾಯ್ತು, ಮಧ್ಯಾಹ್ನ ಹೊರಟೋರು ಈಗ ಬಂದೀವಿ ನೋಡು" ಎಂದು ಮೋಣು ವರದಿ ಒಪ್ಪಿಸಿದ.

"ಕುಪ್ಪಳ್ಳಿನಾ..." ಎಂದು ಕಣ್ಣರಳಿಸಿದೆ.

ಶಾಲೇಲಿ ಹೊಸ ಮೇಷ್ಟ್ರು ನೀವು ಬರೆದ ಪದ್ಯ ಪಾಠ ಮಾಡ್ಬೇಕಾದ್ರೆಲ್ಲಾ ನಿಮ್ಮ ಬಗ್ಗೆ ಹೇಳೋರು .. "ನೀವು ಓದಿ ಅಂತಾ ದೊಡ್ಡ ಮನುಷ್ಯರಾಗ್ಬೇಕು" ಅನ್ನೋರು. ಆ ವರ್ಷ ಶೈಕ್ಷಣಿಕ ಪ್ರವಾಸ ಅಂತ ನಮ್ಮನ್ನೆಲ್ಲಾ ನಿಮ್ಮೂರಿಗೆ ಕರ್ಕೊಂಡೋಗಿದ್ರು. ನಿಮ್ಮ ಮನೆ, ನಿಮ್ಮ ಮನೆ ಅಂಗಳದೊಳಗಿನ ತುಳಸಿಕಟ್ಟೆ, ಎದುರಿನ ತೋಟ, ತೋಟದ ದಂಡೆಯ ಮೇಲಿನ ಕಾಡು... ನಿಮ್ಮ ಮನೆಯ ನೆತ್ತಿಯಲ್ಲಿದ್ದ ನೀವು ಯಾವಾಗಲೂ ಪದ್ಯ ಬರೆಯುತ್ತಿದ್ದ ಕವಿಶೈಲ.. ಎಲ್ಲತೋರಿಸಿದ್ರು. ಆದರೆ ನೀವು ಮಾತ್ರ ಆ ಮನೆಯಲ್ಲಿ ಇರ್ಲೇ ಇಲ್ಲ, ನೀವು ಕಾಲೇಜಲ್ಲಿ ಹೆಡ್‌ಮಾಸ್ಟ್ರಾಗಿ ಮೈಸೂರಲ್ಲಿದೀರಿ ಅಂತ ಹೊಸ ಮೇಷ್ಟ್ರು ಹೇಳಿದ್ರು.

ನಾನು ಕಾಲೇಜು ಸೇರಿದ್ಮೇಲೆನೇ ನೀವು ಬರೆದ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಓದಿದ್ದು. ಆಮೇಲೆ ವರ್ಷಕ್ಕೆ ಒಂದು ಸರಿನಾದ್ರೂ ಈ ಪುಸ್ತಕ ಓದದಿದ್ರೆ ಒಂದು ತರಹ ವಿರಹ ಕಾಡೋದು. ಕರ್ಮೀನ್ ಸಾಬಿ, ಪುಡಿಸಾಬು ಅಡಿಕೆ ವ್ಯಾಪಾರಕ್ಕೆ ಬರೋದು; ಇಜಾರದ ಸಾಬಿ, ಲುಂಗಿ ಸಾಬಿ, ಅಜ್ಜಿ ಸಾಬಿ, ಹಮೀರನಿಂದ ಹಲಸಿನ ಹಣ್ಣನ್ನು ಕಸಿದು ತಿನ್ನುವುದು; ದೊಳ್ಳ ಮರಾಠಿ ಮಂಜನಿಂದ ಕದ್ದು ತಂದ ಕದರಡಿಕೆಗೆ ಪುಡಿ ಸಾಬು ಬೂಸಲು ಬಂದ ಹುರಿಗಡಲೆ ನೀಡುವುದು.. ಪುಡಿ ಸಾಬಿಯಿಂದ ಹುರಿಗಡಲೆ ಪಡೆದು ಯಾರಿಗೂ ಗೊತ್ತಾಗದಂತೆ ತಿನ್ನಲು ಕಾಡಿಗೆ ಹೋಗುವ ದೊಳ್ಳ



ಅಲ್ಲಿ ಇಜಾರದ ಸಾಬಿ, ಅಜ್ಜಿ ಸಾಬಿ, ಲುಂಗಿ ಸಾಬಿ ಗುತ್ತಿಯ ಗಬ್ಬದ ಹೋರಿಯನ್ನು ಚೂರಿ ಹಾಕಿ ಸಿಗಿಯುವುದನ್ನು ನೋಡುವುದು... ಪುಡಿ ಸಾಬಿ, ಲುಂಗಿಸಾಬಿ, ಅಜ್ಜಿ ಸಾಬಿ, ಅಂತಕ್ಕ ಸೆಡ್ತಿಯ ಮಗಳು ಕಾವೇರಿಯನ್ನು ಇನ್ನೂ ಆರಂಭವಾಗದ ಮೆಷಿನ್ ಇಸ್ಕೂಲ್ ಕಟ್ಟಡದಲ್ಲಿ ಅತ್ಯಾಚಾರ ಮಾಡುವುದು..ಕಾವೇರಿಯನ್ನು ಕರೆತಂದ ಚಿಂಕ್ರನೂ ಸಾಬರೊಂದಿಗೆ ಸೇರಿ ಅತ್ಯಾಚಾರ ಮಾಡುವುದು... ಎಲ್ಲವೂ ನನಗೆ ನನ್ನ ಕಣ್ಮುಂದೆಯೇ ನಡೆದಂತೆ ಮನಸ್ಸಿನಲ್ಲಿ ಅಚ್ಚೊತ್ತಿಬಿಟ್ಟಿದೆ.

ನಜೀರ್ ಸಾಬರ ಸಂಸಾರ ಅಡಿಕೆ ವ್ಯಾಪಾರಕ್ಕೆ ಅಂತ ದೀಪಾವಳಿ ಹಬ್ಬಕ್ಕೆ ಬಂದರೆ ವಾಪಾಸು ಘಟ್ಟ ಇಳಿಯುತ್ತಿದ್ದುದು ಎಳ್ಳಮವಾಸ್ಯೆ ಜಾತ್ರೆ ಮುಗಿದ ಒಂದು ತಿಂಗಳಿಗೆ. ನಜೀರ್ ಸಾಬರು ತಮ್ಮ ಸಂಸಾರವನ್ನು ಮಂಗಳೂರಿಗೆ ಬಿಟ್ಟು ಪುನಃ ನಮ್ಮೂರಿಗೆ ಬಂದು ಚಾಲಿ ಅಡಿಕೆ ವ್ಯಾಪಾರ ಮಾಡುವರು. ಚಾಲಿ ಅಡಿಕೆ ಸುಲಿಸಿದರೆ ರೇಟು ಜಾಸ್ತಿ ಬರುತ್ತದೆಂದು ಚಾಲಿ ಸುಲಿಸುವರು. ಚಾಲಿ ಸುಲಿಯಲು ನಾನು, ಸಂಧ್ಯಾ ಸಣ್ಣಕ್ಕ ಎಲ್ಲಾ ಹೋಗುವೆವು. ಚಾಲಿ ಸುಲಿಯಲು ಹೋದ ನಮಗೆ ಮಧ್ಯೆ ಮಧ್ಯೆ ಸಾಬರು ಕೊಬ್ಬರಿ ಮಿಠಾಯಿ ಕೊಡುವರು. ಚಾಲಿ ಅಡಿಕೆ ಸುಲಿತ ಮುಗಿದ ನಂತರವೂ ಆಗಾಗ ನಾನು ನಜೀರ್ ಸಾಬರು ಒಬ್ಬರೆ ಇರುವಾಗ, ಅವರ ಮನೆಗೆ ಹೋಗುವೆನು. ಮನೆಯೊಳಗೆ ಹೋಗುತ್ತಿದ್ದಂತೆ ಒಣಕು ಮೀನಿನ ಕಮಟು ವಾಸನೆ ಮೂಗಿಗೆ ಬಡಿಯುವುದು. ಬೆರಳಿನಿಂದ ಮೂಗು ಮುಚ್ಚಿಕೊಂಡ ನನ್ನನ್ನು 'ಎಂತದೋ ಶಂಕು ಮೀನು ಪರಿಮಳ ಇಲ್ವಾ' ಅಂತ ನಗಾಡುವರು. ನಗಾಡುತ್ತಲೇ ಹೋಗಿ ಗೋಣೀಚೀಲವೊಂದಕ್ಕೆ ಕೈ ಹಾಕಿ ಮುಷ್ಟಿ ತುಂಬಾ ಹುರಿಗಡಲೆ ಹಿಡಿದು 'ತಗಾ' ಎನ್ನುವರು. ನಾನು ಎರಡೂ ಹಸ್ತವನ್ನು ಬಿಡಿಸಿ, ಒಟ್ಟಿಗೆ ಹಿಡಿದರೂ ಹುರಿಗಡಲೆ ನನ್ನ ಕೈತುಂಬಿ ಕೆಳಗೆ ಚೆಲ್ಲುವುದು. ಜೇಬಿಗೆ ಹಾಕಿಕೊಳ್ಳಲೂ ಸಾಧ್ಯವಾಗದೇ ಬೊಗಸೆಯಲ್ಲಿನ ಹುರಿಗಡಲೆಯನ್ನು ಹಾಗೆ ಬಾಯಿ ಬಳಿ ತೆಗೆದುಕೊಂಡು ಹೋಗಿ ದನ ಹಿಂಡಿ ತಿನ್ನುವಂತೆ ತಿನ್ನುವೆನು. ಮೂಗಿನ ಬಳಿ ಬಂದ ಬೊಗಸೆಯಲ್ಲಿನ ಹುರಿಗಡಲೆಯ ಪರಿಮಳದಲ್ಲಿ ಒಣಕು ಮೀನಿನ ವಾಸನೆ ಮಾಯವಾಗುವುದು.

ಇಂತದ್ದೇ ಒಂದು ಮಧ್ಯಾಹ್ನ ನಾನು ನಜೀರ್ ಸಾಬರ ಮನೆಗೆ ಹೋದೆ. ಆಗ ರಂಜಾನ್ ಉಪವಾಸದ ದಿನಗಳು ಆರಂಭವಾಗಿದ್ದವು. ಸಾಬರು ಅಡಿಕೆ ರಾಶಿಯನ್ನು ಸುರಿವಿಕೊಂಡು, ಹಸ, ಚಿಟ್ಳಿ, ಗೋಟು, ಗೊರಬಲು ಅಂತ ಬೇರೆ ಬೇರೆ ಮಾಡ್ತಾ ಆರಿಸ್ತಾ ಇದ್ರು, ತಲೆ ಬಗ್ಗಿಸಿಕೊಂಡು ಅಡಿಕೆಯನ್ನು ಆರಿಸುತ್ತಿದ್ದ ನಜೀರ್ ಸಾಬರು ನಾನು ಬಂದಿದ್ದನ್ನು ಗಮನಿಸಿ, ತಲೆ ಎತ್ತಿ ಏನೋ ಮಾತನಾಡಲು ಮುಂದಾಗಿ ಬಾಯಲಿದ್ದ ಎಲೆ ಅಡಿಕೆ ಅದಕ್ಕೆ ಅಡ್ಡ ಬಂದಿದ್ದರಿಂದ ಅಲ್ಲಿಂದ ಎದ್ದು ಅಂಗಳಕ್ಕೆ ಬಂದು ಎಲೆ-ಅಡಿಕೆ ಉಗಿದು 'ಏನೋ ಶಂಕು, ಇಸ್ಕೂಲು ಇಲ್ಲೇನೋ' ಎಂದರು. 'ಇವತ್ತು ಶನಿವಾರ' ಅಂತ ಸಾಬರಿಗೆ ಹೇಳ ಹೊರಟವನು ಪಕ್ಕನೇ ಏನೋ ಹೊಳೆದಂತಾಗಿ ಎಲೆ-ಅಡಿಕೆ ಜಗಿಯುತ್ತಿದ್ದ ಸಾಬರನ್ನು ಅಚ್ಚರಿಯಿಂದ ಮತ್ತೊಮ್ಮೆ ದಿಟ್ಟಿಸಿದೆನು. ನಾನು ಯೋಚಿಸುವುದರೊಳಗೆ ನನ್ನ ಬಾಯಿಂದ ಸಾಬರಿಗೆ ಪ್ರಶ್ನೆಯೊಂದು ಹೊರಬಿತ್ತು... "ಏನು ಸಾಬ್ರೆ ಉಪಾಸದ ದಿನಾ ಎಲೆ-ಅಡಿಕೆ ಜಗಿತಾ ಇದೀರಲ್ಲ".

ಸಾಬರು ಇನ್ನೊಮ್ಮೆ ಅಂಗಳಕ್ಕೆ ಹೋಗಿ ಎಲೆಯಡಿಕೆ ಉಗಿದು ಬಂದು ಜೋರಾಗಿ ನಕ್ಕರು.

"ಹ್ಹೊ..ಹ್ಹೊ .. ಶಂಕು ಎಂತ ಮಾರಾಯ, ಒಳ್ಳೆ ಪೊಲೀಸ್ ಬಂದಂಗೆ ಬಂದೀಯಲ್ಲೋ... ಈಗ ಏನಾದ್ರು ತಿಂದ್ರೆ ಪರಿಹಾರ ಉಂಟು ಮಾರಾಯ... ಇದ್ಕೆ ಬದ್ಲಿಯಾಗಿ ಮತ್ತೆ ಅಷ್ಟೇ ದಿನಾ ಉಪಾಸ ಹಿಡಿದ್ರೆ ಆಯ್ತು" ಅಂತಾ ಹೇಳುತ್ತಾ ಇದನ್ನು ಬೇರೆಯಾರಿಗೂ ಹೇಳ್ಬೇಡ ಅನ್ನುವ ರೀತಿಯಲ್ಲಿ ತಮ್ಮ ಪಕ್ಕದಲ್ಲಿದ್ದ ಮೂಟೆಗೆ ಕೈ ಹಾಕಿ ಒಂದು ಮುಷ್ಟಿ ಹುರಿಗಡಲೆಯನ್ನು ಆಗಲೇ ಬೊಗಸೆಯಾಗಿದ್ದ ನನ್ನ ಕೈಗಳಿಗೆ ಸುರಿವಿದರು. ಆವತ್ತು ಉಪವಾಸ ಅಂತಾ ನನಗೆ ನೆನಪಾಗಲಿಕ್ಕೂ ಕಾರಣವೊಂದಿತ್ತು. ಪ್ರತಿ ಶನಿವಾರ ಅಪ್ಪಯ್ಯ ಉಪಾಸ ಮಾಡೋರು. ಅಪ್ಪಯ್ಯ ಉಪಾಸ ಮಾಡಿದಾಗ ಅವಲಕ್ಕಿಗೆ ಸ್ವಲ್ಪ ಬೆಲ್ಲ ಹಾಕಿ ಅಮ್ಮ ಕೊಡೋರು. ಅವತ್ತು ಎಂದಿನಂತೆ ಸಾಹುಕಾರರ ಮನೆಯ ಹಾಲನ್ನ ಪೇಟೆಗೆ ಕೊಟ್ಟು ಬಂದು ಸುಸ್ತಾಗಿದ್ದ ಅಪ್ಪಯ್ಯ ಸ್ನಾನ ಮಾಡಿ ದೇವರ ಪೂಜೆ ಮುಗಿಸಿ ಊಟಕ್ಕೆ ಕುಳಿತಾಗಲೇ ಅಮ್ಮ ತಂದಿಟ್ಟ ಅವಲಕ್ಕಿ ಬೆಲ್ಲ ನೋಡಿಯೇ ಇಂದು ಉಪವಾಸ ಅಂತ ಅವರಿಗೆ ನೆನಪಾದದ್ದು. ಅವಲಕ್ಕಿ ಬೆಲ್ಲಕ್ಕಿಂತಲೂ ರುಚಿಯಾಗಿರುತ್ತಿದ್ದ ಕುಂಬಳಕಾಯಿಯ ಮಜ್ಜಿಗೆ ಹುಳಿಯ ಪರಿಮಳ ಅಪ್ಪಯ್ಯನ ಕಣ್ಣು ಕುಕ್ಕಿದೆ. ಏನೋ ನಿರ್ಧರಿಸಿದಂತೆ ಮೇಲೆದ್ದ ಅಪ್ಪಯ್ಯ ದೇವರ ಫೋಟೋ ಮುಂದೆ ನಾಲ್ಕಾಣೆ ಇಟ್ಟು ಬಂದು ಭರ್ಜರಿಯಾಗಿ ಊಟ ಮಾಡಿಯೇ ಬಿಟ್ಟರು.


(ಮುಂದಿನ ವಾರಕ್ಕೆ)

ುದ್ಧ ಇದಾಗಿದೆ. ಸರಳವಾಗಿ ಹೇಳಬೇಕೆಂದರೆ ಸರಕು ಸ್ಕೃತಿಯು ನೆಲದ ಸಂಸ್ಕೃತಿಯನ್ನು ಕೊಚ್ಚಿಹಾಕುತ್ತದೆ. ಕಾರಗಳು ಬಂಡವಾಳಶಾಹಿಯ ಗೆಣೆಕಾರರಾಗಿ, ದೊಡ್ಡ ದ್ಯಮಗಳು ಬಂದು, ನಮ್ಮ ಕುಲಕಸುಬು-ಕುಶಲಕಲೆಗಳು ಳಹೆಸರಿಲ್ಲದಂತಾಗುತ್ತವೆ. ಡಾ. ರಂಗಾರೆಡ್ಡಿ ಕೋಡಿ ಂಪುರ ಹೇಳುವಂತೆ "ಜಾಗತೀಕರಣದಿಂದ ಮೂರನೇ ಗತ್ತಿನ ರಾಷ್ಟ್ರಗಳ ಮನುಷ್ಯರೇ ಸರಕಾಗಿಬಿಡುತ್ತಾರೆ."

ಸದ್ಯ ನಮ್ಮ ವಿಚಾರವಾದಿ ಬರಹಗಾರರನ್ನೂ ಸೂಕ್ಷ್ಮ ವೇದನೆಯ ಸಾರ್ವಜನಿಕರನ್ನೂ, ದೇಶಿಯತೆಯ ಾಧಕರನ್ನೂ ಆತಂಕಕ್ಕೆ ತಳ್ಳಿರುವ ಸಂಗತಿಗಳೆಂದರೆ ಗತೀಕರಣದಿಂದ ಸಂಭವಿಸುವ ನಮ್ಮ ದೇಶಿಯತೆ ತ್ತು ಸಂಸ್ಕೃತಿಯ ವಿನಾಶಗಳು. ಆದರೆ ಈ ಪರಿತಾಪದಲ್ಲಿ ಮ್ಮ ದ್ವಂದ್ವವೂ ಇದೆ. ಏಕೆಂದರೆ ಲೌಕಿಕವಾಗಿ ನಾವೇನು ರಾಗಿಗಳಲ್ಲ, ಎಂ.ವಿ. ನಾಡಕರ್ಣಿ ಹೇಳುವಂತೆ ಾರತವೂ ಸಹ ಬಹುಮುಖಿ ಆರ್ಥಿಕ ನೀತಿಯಿಂದ ಲಕ್ಷಣೀಣ ಲಾಭಗಳಿಸಿದೆ!" ಹಾಗೆಯೇ ಇದರಿಂದ ೀಲರಿಗೆ ಹಾನಿಯಾಗಿದ್ದರೆ, ಕೆಲವರಿಗೆ ಅನೇಕ ಭಗಳಾಗಿವೆ. ಇನ್ನೂ ಕೆಲವರು "ಎಲ್ಲಕ್ಕೂ ಮಿಗಿಲಾಗಿ ು ವಿಶ್ವಶಾಂತಿ ಹಾಗೂ ಸಂಕ್ಷೇಮಕ್ಕೆ ಸಹಕಾರಿ" ು ಆಶಾವಾದಿಗಳಾಗಿ ಕುಳಿತಿದ್ದಾರೆ. ಇದನ್ನೆಲ್ಲ ಗಮನಿಸಿ, ದ್ರಶೇಖರ ಸಂಗಲಿಯವರು "ಜಾಗತೀಕರಣದ ಹುಂಬ ಸ್ಕಾರ ಅಥವಾ ಹುಂಬ ತಿರಸ್ಕಾರ ಎರಡೂ ಾಯಕಾರಿ" ಎನ್ನುತ್ತಾರೆ. ಜಿ.ಎನ್. ಮಲ್ಲಿಕಾರ್ಜುನರ ೃತಿಯಲ್ಲಿ ಇದರ ಬಗ್ಗೆ ಭ್ರಮನಿರಸನ ಈಗಾಗಲೇ ಂಭವಾಗಿದೆ. ಏಕೆಂದರೆ "ಜಾಗತೀಕರಣವನ್ನು ಿರೋಧಿಸಿಕೊಂಡು ಬರೆಯುತ್ತಿದ್ದ ಪತ್ರಿಕೆಗಳೇ ಇಂದು ಅಂತರರಾಷ್ಟ್ರೀಯ ಮಟ್ಟಕ್ಕೇರಲು ಸಾಧ್ಯವಾಗದೆ ಪ್ರಾದೇಶಿಕ ಆವೃತ್ತಿಗಳನ್ನು ಆರಂಭಿಸಿವೆ. ಇದಕ್ಕೆ ವಿರುದ್ಧವಾಗಿ ವಿದ್ಯಾವಂತರಲ್ಲಿ ಬಹುಸಂಖ್ಯಾತರು ಜಾಗತೀಕರಣದ ಲಾಭವನ್ನು ಬಾಚಿಕೊಳ್ಳಲು ಹೊಂಚುಹಾಕುತ್ತಿದ್ದಾರೆ. ಅವರ ಮುಂದಿರುವ ಪ್ರಶ್ನೆ : ದೇಶೀಯತೆಯು ಒಂದು ಬಹು ದೊಡ್ಡ ಆದರ್ಶವೇ?....

ಆಕ್ರಮಣಕಾರಿಯಾದ ಜಾಗತೀಕರಣವನ್ನು ಹಿಮ್ಮೆಟ್ಟಿಸಬೇಕೆನ್ನುವವರಿಗೆ ದೇಶೀಯತೆ ಮತ್ತು ಸಂಸ್ಕೃತಿಯ ಪ್ರಶ್ನೆ ಮಾತ್ರ ನೆರವಾಗಬಲ್ಲದು. "ಜಾಗತೀಕರಣವು ದೇಶೀಯ ಸಂಸ್ಕೃತಿಯನ್ನು ಅಂದರೆ ಜಾತಿ ಬದ್ಧ ಸಾಮಾಜಿಕ ವ್ಯವಸ್ಥೆಯನ್ನು ಕಂಗೆಡಿಸುವುದಾದರೆ ನಾವು ಅದನ್ನು ಸ್ವಾಗತಿಸಬಾರದೇಕೆ?" ಎಂದು ಚಂದ್ರಶೇಖರ ಪಾಟೀಲರು ನೀಡಿದ ಹೇಳಿಕೆಗೆ ನಮ್ಮ ವೈಚಾರಿಕ ಬರಹಗಾರರ ಸಹಮತವಿಲ್ಲ, ಏಕೆಂದರೆ "ಜಾಗತೀಕರಣವು ಕೆಳಜಾತಿಗಳ ಬದುಗಳಿಗೆ ಬಂದ ದೇವದೂತ" ಎನ್ನುವುದೇ ತರ್ಕಶುದ್ಧವಲ್ಲದ ನಿಲುವು. "ದೇಶಪ್ರೇಮ, ಸಂಸ್ಕೃತಿಯ ಮೂಲಕ ಜಾಗತೀಕರಣವನ್ನು ಎದುರಿಸಬೇಕಾಗಿದೆ" ಎಂದು ಯು.ಆರ್. ಅನಂತಮೂರ್ತಿ ಸಲಹೆ ಮಾಡುತ್ತಾರೆ. ಆದರೆ ಇದನ್ನು ಸ್ವೀಕರಿಸಬೇಕಾದರೆ ಸಂಸ್ಕೃತಿಯ ಕುರಿತು ನಮ್ಮ ಪರಿಕಲ್ಪನೆ ಬದಲಾಗುವ ಅಗತ್ಯವಿದೆ; ಸಂಸ್ಕೃತಿಯು "ಸಮುದಾಯಗಳ ರಾಜಕೀಯ, ಆರ್ಥಿಕ, ಸಾಮಾಜಿಕ, ಸುಖ-ದುಃಖ-ಸಂಕಟ ಸಮಸ್ಯೆಗಳನ್ನೆಲ್ಲ ಪ್ರತಿನಿಧಿಸುವಂತೆ ವಿಶಾಲ ಅರ್ಥ ವ್ಯಾಪ್ತಿಯನ್ನು ಪಡೆದುಕೊಳ್ಳಬೇಕಾಗುತ್ತದೆ". ಡಾ. ಬಾಲಚಂದ್ರ ನೇಮಾಡೆ ಒಂದು ಸರಳವಾದ ತೀರ್ಮಾನದಿಂದ ಇದನ್ನು ಮುಖಾಮುಖಿ ಮಾಡಲು ಯತ್ನಿಸುತ್ತಾರೆ. "ಎಷ್ಟೇ ವಿರೋಧಿಸಿದರೂ ಜಾಗತೀಕರಣವು ಬರುವದಿದ್ದರೆ ಬಂದೇ ಬರುತ್ತದೆ. ಆದರೆ ನಮ್ಮ ನೈತಿಕ ಹಕ್ಕೆಂದರೆ, ಅದನ್ನು ವಿರೋಧಿಸುವುದು... ಚಿಕ್ಕ-ಪುಟ್ಟ ದೇಶೀ ಪರಂಪರೆಗಳನ್ನು ವಾಕಸಾ ಎಂದು ಬಳಸುವುದೇ ಇದಕ್ಕೆ ಉತ್ತರ; ಅದೇ ನಮ್ಮ ನೈತಿಕ ಹಕ್ಕು..." ಅದನ್ನು ಪ್ರದರ್ಶಿಸುವ ಅಧಿಕಾರ ನಮಗಿದೆ- ಗೃಹ ಕೈಗಾರಿಕೆ, ಕೃಷಿ ಕೈಗಾರಿಕೆ, ದೇಶಿ ಉದ್ಯಮಗಳು, ಇವೆಲ್ಲ ಸನ್ನಿವೇಶವನ್ನು ಎದುರಿಸಿ ಬದಲಾಗ ಬೇಕು. ತಮ್ಮನ್ನು ನವೀಕರಿಸಿಕೊಂಡು ಇವು ಬಹುರಾಷ್ಟ್ರೀಯ ಕಂಪನಿಗಳ ಎದುರು ನಿಲ್ಲಬೇಕಾಗುತ್ತವೆ. ದೇಶೀಯ ಚಿಂತನೆಯ ಜೊತೆಗೆ ತಂತ್ರಜ್ಞಾನದ ಬಳಕೆಯೂ ಹೆಚ್ಚಬೇಕು. ಹಾಗಿಲ್ಲದಿದ್ದರೆ, ದೇಶೀಯತೆಯ ನಮ್ಮ ಮಾತುಗಳು ಬರಿಯ ರಾಜಕೀಯದ ಮೋಸಗಾರಿಕೆಯಾಗುತ್ತದೆ. ಆದರೆ, ಎಲ್ಲಕ್ಕೂ ಮೊದಲು ಟೇಲರ್ ಹೇಳುವ ಹಾಗೆ, "ಸಂಸ್ಕೃತಿಯಲ್ಲಿ ನಮ್ಮ ಜ್ಞಾನ-ವಿಜ್ಞಾನ-ನಂಬಿಕೆ-ಆಚರಣೆ ಎಲ್ಲವೂ ಒಳಗೊಂಡಿರಬೇಕು."

"ಜಾಗತೀಕರಣ ಮತ್ತು ಸಂಸ್ಕೃತಿ" ಪುಸ್ತಕದ ವೈಚಾರಿಕ ಚಿಂತನೆಗಳನ್ನು ಈ ಮೇಲಿನಂತೆ ಗ್ರಹಿಸಬೇಕಾಗುತ್ತದೆ. ಜಾಗತೀಕರಣದ ಫಲವಾಗಿ ಈಗಾಗಲೇ ನಾವು ಮಾರುಕಟ್ಟೆಯಲ್ಲಿ ದರಸಮರವನ್ನು ಕಾಣುತ್ತಿದ್ದೇವೆ. ಔಷಧಿಯಂತಹ ನಿತ್ಯೋಪಯೋಗಿ ವಸ್ತುಗಳು ದರಸಮರವನ್ನು ಜೀರ್ಣಿಸಿಕೊಂಡಿವೆ; ಇವುಗಳ ದರ ಗಗನಕ್ಕೇರಿದರೆ, ಕೃಷಿ ಉತ್ಪನ್ನಗಳ ಬೆಲೆ ತನ್ನ ಮಟ್ಟ ಕಾಯ್ದುಕೊಳ್ಳಲು ಏದುಸಿರು ಬಿಡುವಂತಾಗಿದೆ. ಸ್ಥಳೀಯ ಮಾರುಕಟ್ಟೆ ಮತ್ತು ಜಾಗತಿಕ ಮಾರುಕಟ್ಟೆಯ ವ್ಯತ್ಯಾಸದ ಪರಿಣಾಮ ಇದು. ಆದರೆ ಮುಖ್ಯ ಪ್ರಶ್ನೆ: "ಜಾಗತೀಕರಣದ ಉತ್ತಮಾಂಶವನ್ನೂ ಬಳಸಿಕೊಂಡು ದೇಶೀಯತೆಯ ಆಕರ್ಷಣೆಯನ್ನು ಉಳಿಸಿಕೊಳ್ಳಬೇಕು. ನಮ್ಮ ವೈಯಕ್ತಿಕತೆಯನ್ನು ಕಾಪಾಡಿಕೊಳ್ಳಬೇಕು" ಎನ್ನುವುದಾಗಿದೆ. ಜಿ.ಎನ್. ಮಲ್ಲಿಕಾರ್ಜುನ, ವಿ.ಗಮನಂತ ರೆಡ್ಡಿ, ಡಾ. ಪ್ರಕಾಶ್ ಸಿ. ರಾವ್, ಅರವಿಂದ ಚೊಕ್ಕಾಡಿ, ಎಂ.ವಿ. ನಾಡಕರ್ಣಿ, ರಂಗಾರೆಡ್ಡಿ ಕೋಡಿರಾಂಪುರ, ರಹಮತ್ ತರೀಕೆರೆ, ಬಾಲಚಂದ್ರ ನೇಮಾಡೆ, ಕೇಶವ ಶರ್ಮಾ - ಇವರ ಲೇಖನಗಳು ಜಾಗತೀಕರಣದ ದೂರದೃಷ್ಟಿ ಮತ್ತು ಆಯಾಮಗಳನ್ನು ವಿವರವಾಗಿ ವಿಶ್ಲೇಷಿಸುತ್ತವೆ. ಇವರ ಲೇಖನಗಳಿಂದಾಗಿ "ಜಾಗತೀಕರಣ ಮತ್ತು ಸಂಸ್ಕೃತಿ" ನಾವು ಗಮನಿಸಬೇಕಾದ ಪುಸ್ತಕವಾಗಿದೆ.



ಜಾಗತೀಕರಣ ಮತ್ತು ಸಂಸ್ಕೃತಿ
(ವೈಚಾರಿಕ ಲೇಖನಗಳು)
ಸಂಪಾದಕ:
ಡಾ. ದಸ್ತಗೀರಸಾಬ್ ದಿನ್ನಿ
ಕನಸು ಪ್ರಕಾಶನ, ಜಹೀರಾಬಾದ್,
ರಾಯಚೂರು-01
ಪುಟಗಳು - 165,
ಬೆಲೆ ರೂ. 120.00

ಆಲ್ಮನೆ ರಘುಪತಿ

ಕಾಂಗ್ರೆಸ್: ಪಂಚಮಸಾಲಿಗಳಿಗೆ ಖಾಲಿ ಜೋಳಿಗೆ!

ಕೊಪ್ಪಳ


ಕಳೆದ 16 ವರ್ಷಗಳಿಂದ ಪಂಚಮಸಾಲಿಗಳಿಗೆ ಯಾವ ಅಧಿಕಾರವನ್ನೂ ಕೊಡದೆಯೇ, ಪಂಚಮಸಾಲಿಗಳ ಓಟುಗಳನ್ನು ಪಂಚಾಮೃತದಂತೆ ನೆಕ್ಕುತ್ತಾ ಬಂದಿರುವ ಕಾಂಗ್ರೆಸ್ ಪಕ್ಷ ಮುಂದಿನ ಚುನಾವಣೆ ಹೊತ್ತಿಗೆ ತನ್ನ ಅಂತ್ಯಸಂಸ್ಕಾರ ಮಾಡಿಕೊಳ್ಳಲು ತಾನೇ ಗುಣಿ ತೋಡಿಕೊಳ್ಳುತ್ತಿದೆ. 16 ವರ್ಷಗಳಿಂದ ಅಧಿಕಾರ ಕೇಳುತ್ತಿರುವ ಪಂಚಮಸಾಲಿಗಳಿಗೆ ಕಾಂಗ್ರೆಸ್ ಕೊಟ್ಟಿದ್ದು ಖಾಲಿ ಜೋಳಿಗೆಯೊಂದನ್ನು ಮಾತ್ರ. ಸಾಮಾಜಿಕ ನ್ಯಾಯದ ಬೊಗಳೆ ಮಾತು ಮಾತ್ರ ಉದುರುದುರಿ ಜೋಳಿಗೆಗೆ ಬಿದ್ದದ್ದಷ್ಟೇ ಬಂತು. ಕಳೆದ ವಾರ ರಾಯಚೂರಿನ ಲಿಂಗವಂತ ರೆಡ್ಡಿಗಳ ರಾಜಕೀಯಕ್ಕೆ ಹಿಂದುಳಿದವರು ಲಗ್ಗೆ ಹಾಕಿದ್ದರ ಕುರಿತು ಬರೆದಿದ್ದ 'ಲಂಕೇಶ್' ಈಗ ಕೊಪ್ಪಳ ಜಿಲ್ಲೆಯಲ್ಲಿ ಶೇ. 25ರಷ್ಟಿರುವ ಪಂಚಮಸಾಲಿಗಳನ್ನು ಕಾಂಗ್ರೆಸ್ ಅದ್ಯಾವ ಪರಿ ಕಡೆಗಣಿಸಿದೆ ಎಂಬುದರ ವಿವರ ನೀಡುತ್ತಿದೆ.

ಪಂಚಮಸಾಲಿಗೆ ರಾಮುಲು ಬೇಲಿ!


ಕಳೆದ 20 ವರ್ಷಗಳಿಂದ ಜಿಲ್ಲಾ ಕಾಂಗ್ರೆಸ್‌ನ ಅನಭಿಷಕ್ತ ದೊರೆಯಾಗಿದ್ದ ಹೆಂಡದ ಧಣಿ ಎಚ್.ಜಿ.ರಾಮುಲುನನ್ನು ಲಿಂಗಾಯತ ವಿರೋಧಿ ಎಂದೇ ಗುರುತಿಸಲಾಗುತ್ತದೆ. ಪಕ್ಷ, ಅಧಿಕಾರದ ವಿಷಯ ಬಂದಾಗ ಅಹಿಂದ ವರ್ಗಗಳಿಗೆ ರಾಮುಲು ಪ್ರಾಶಸ್ತ್ಯ ಕೊಡುತ್ತಿದ್ದದ್ದು ನಿಜ. ಆದರೆ ಅದು ಅಹಿಂದದ ಮೇಲಿನ ಕಾಳಜಿಗೆಲ್ಲ, ಬದಲಿಗೆ ತನ್ನ ಸ್ವಾರ್ಥ, ಸ್ವಜನ ಪಕ್ಷಪಾತದ ಪಾಲಿಟಿಕ್ಸ್ ಬೆಳೆಸುವುದಕ್ಕೆ. ಈಗ ವೃದ್ಧ ರಾಮುಲು ಮನೇಲಿ 'ಆರಾಮುಲು' ಎಂದು ಕೊಂಚ ವಿಶ್ರಾಂತಿಗೆ ಸರಿದಂತಿರುವುದರಿಂದ ರಾಮುಲೂನ ಲಿಂಗಾಯತ ವಿರೋಧಿ ಅಜೆಂಡಾವನ್ನು ಇಬ್ಬರು ಸಾಡೇಸಾತ್ ಶಾಸಕರು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಮತ್ತೆ ಎಂದಿನಂತೆ ಲಿಂಗಾಯತ ಬಣದ ಪಂಚಮಸಾಲಿ ಉಪಬಣವೇ ಅನ್ಯಾಯಕ್ಕೊಳಗಾಗುತ್ತಾ ಸಾಗಿದೆ.

ಕೊಪ್ಪಳದ ಭ್ರಷ್ಟ ಶಾಸಕ ಬಸವರಾಜ್ ಹಿಟ್ನಾಳ್, ಯಲಬುರ್ಗಾದ ಯಡವಟ್ಟು ಶಾಸಕ ಬಸವರಾಜ್ ರಾಯರೆಡ್ಡಿಗಳ ಪಂಚಮಸಾಲಿ ವಿರೋಧಿ ನೀತಿಯೆಂದರೆ ತಮ್ಮ ಜಾತಿ, ಕುಟುಂಬಗಳನ್ನು ಉದ್ಧಾರ ಮಾಡುವುದೇ ಆಗಿದೆ. ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿಗಳ ಅಧ್ಯಕ್ಷ ಮತ್ತು ಸ್ಥಾಯಿ ಸಮಿತಿಗಳ ಅಧ್ಯಕ್ಷರ ಆಯ್ಕೆಯಲ್ಲಿ ಪಂಚಮಸಾಲಿಗಳ ವಿರುದ್ಧ ಪಿತೂರಿ ಮಾಡಿದ ಈ ಇಬ್ಬರು ಬೋಗಸ್‌ರಾಜರು ಮಾಡಿದ ಜಾತಿ ರಾಜಕಾರಣದಿಂದ ಬಹುಸಂಖ್ಯಾತ ಪಂಚಮಸಾಲಿಗಳ ಕಾಂಗ್ರೆಸ್ ವಿರುದ್ಧದ ಆಕ್ರೋಶ ಇಮ್ಮಡಿಯಾಗುತ್ತಿದೆ.

ಅವಿಭಜಿತ ರಾಯಚೂರು ಜಿಲ್ಲೆಯಿದ್ದಾಗಲೂ ಪಂಚಮಸಾಲಿಗಳು ಲೆಕ್ಕಕ್ಕುಂಟು, ಅಧಿಕಾರದಾಟಕ್ಕಿಲ್ಲ ಎಂಬ ಅಘೋಷಿತ ನಿಯಮವೇ ಇತ್ತು. ಕೊಪ್ಪಳ ಜಿಲ್ಲೆ ಉದಯಿಸಿದಾಗ ಕರಿಯಣ್ಣ ಸಂಗಟಿ (ಈಗಿನ ಎಂ.ಎಲ್.ಸಿ) ಜಿ.ಪಂ. ಅಧ್ಯಕ್ಷನಾಗಿದ್ದ.


ಬಸವರಾಜ್ ಹಿಟ್ನಾಳ್

2000ರಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದ ಜಿ.ಪಂ. ನ ಮೊದಲ ಅವಧಿಗೆ ಅಧ್ಯಕ್ಷ ಸ್ಥಾನಕ್ಕೆ ಎಸ್.ಸಿ. ಮೀಸಲು ತಂದಿದ್ದ ಆಗಿನ ಸಂಸದ ರಾಮುಲು, ರಾಮಣ್ಣ ಭಜಂತ್ರಿಯನ್ನು ಅಧ್ಯಕ್ಷನನ್ನಾಗಿ, ಲಿಂಗಾಯತ ರೆಡ್ಡಿ ಜಾತಿಯ ಶರಣಮ್ಮಳನ್ನು ಉಪಾಧ್ಯಕ್ಷಳನ್ನಾಗಿ ಮಾಡಿದ್ದ. ಎರಡನೇ ಅವಧಿಗೆ ಅಧ್ಯಕ್ಷ ಸ್ಥಾನಕ್ಕೆ ಹಿಂದುಳಿದ (ಮಹಿಳೆ), ಉಪಾಧ್ಯಕ್ಷ ಸ್ಥಾನಕ್ಕೆ ಎಸ್.ಸಿ. (ಮಹಿಳೆ) ಮೀಸಲು ತಂದ ರಾಮುಲು ಮತ್ತೊಮ್ಮೆ ಪಂಚಮಸಾಲಿಗಳು ಅಧಿಕಾರದ ಗದ್ದುಗೆಯ ಸಮೀಪ ಬರದಂತೆ ಜಾಲಿ ಬೇಲಿ ಹಾಕಿಬಿಟ್ಟಿದ್ದ. ಮೂರನೇ ಅವಧಿಗೆ ಅನಿವಾರ್ಯವಾಗಿ ಜನರಲ್ ಬಂದಾಗ, ದಶಕದಿಂದ ಕಾಯುತ್ತಲೇ ಇದ್ದ ಶೇ.25 ರಷ್ಟಿರುವ ಪಂಚಮಸಾಲಿಗಳು ಒಂಚೂರು ಖುಷಿಗೊಂಡು, ಪಂಚಮಸಾಲಿ ಜನಾಂಗ ಸಂಘದ ರಾಜ್ಯಾಧ್ಯಕ್ಷ ಬಾವಿಬೆಟ್ಟಪ್ಪ, ಪ್ರಧಾನ ಕಾರ್ಯದರ್ಶಿ ಬಸವರಾಜ ದಿಂಡೂರ ನೇತೃತ್ವದಲ್ಲಿ ರಾಮುಲು ಮೇಲೆ ಅಧಿಕಾರಕ್ಕಾಗಿ ಒತ್ತಡ ತಂದರು. ಪಂಚಮಸಾಲಿ ಶರಣಗೌಡನನ್ನು ಅಧ್ಯಕ್ಷ ಮಾಡುವುದಾಗಿ ಭರವಸೆ ನೀಡಿದ ರಾಮುಲು, ರೆಡ್ಡಿ ಜಾತಿಯ ನಿರ್ಜೀವ ವಸ್ತು ಹಿರೇಗೌಡನನ್ನು ಅಧ್ಯಕ್ಷ ಕುರ್ಚಿಯಲ್ಲಿ ಕೂಡ್ರಿಸಿ, ಗಾಣಿಗ ಜಾತಿಯ ಶಿವಶಂಕರನನ್ನು ಉಪಾಧ್ಯಕ್ಷ ಚೇಂಬರಿಗೆ ನೂಕುವ ಮೂಲಕ ಪಂಚಮಸಾಲಿಗಳಿಗೆ ಹಾಡುಹಗಲೇ ಪಂಚ್ ನೀಡಿ-ಅನ್ಯಾಯವೆಸಗಿದ್ದ.


ರಾಯರೆಡ್ಡಿ

ಈ ಐದು ವರ್ಷದ ಅವಧಿಯಲ್ಲಿ ಹಲವು ಸ್ಥಾಯಿ ಸಮಿತಿಗಳ ಅಧ್ಯಕ್ಷ ಸ್ಥಾನಗಳಾದರೂ ಪಂಚಮಸಾಲಿಗಳಿಗೆ ದಕ್ಕಬೇಕಾಗಿತ್ತು, ಊಹೂಂ.... ಕಲ್ಲನ್ನು ಮೂಲೆಮನೆಗೆ ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ ಸಿಕ್ಕಿದ್ದು ಬಿಟ್ಟರೆ ಉಳಿದಂತೆ ಪಂಚಮಸಾಲಿಗಳು ಅಧಿಕಾರ ರಹಿತವಾಗಿಯೇ ಉಳಿದಿದ್ದರು.

2004ರ ಚುನಾವಣೆ ವೇಳೆ ಮಂಗ್ಯಾ ಮುತಾಲಿಕ್ ಬಂದು ಹಾರಾಡಿ, ಅರಚಾಡಿ ಹೋಗಿದ್ದಕ್ಕೆ ಪಾಠ ಕಲಿಸಲು ನಿರ್ಧರಿಸಿದ ಮುಸ್ಲಿಮರು ಕಾಂಗ್ರೆಸ್‌ನ ಬಸವರಾಜ್ ಹಿಟ್ನಾಳನನ್ನು 'ಭಾಯಿ ಭಾಯಿ' ಎಂದಿದ್ದರಿಂದ ಹಿಟ್ನಾಳ್ ಶಾಸಕನಾಗಿ ಬಿಟ್ಟ. ಇತ್ತೀಚೆಗೆ ಅಹಿಂದ ರ್‍ಯಾಲಿಗಳಲ್ಲಿ ಜೆಡಿಎಸ್‌ನ್ನು ಅಪ್ಪ-ಮಕ್ಕಳ ಪಕ್ಷ ಎಂದು ಜರಿಯುತ್ತಿದ್ದ ಕುರುಬರ ಹಿಟ್ನಾಳ್ ಬಸು, ಜಿ.ಪಂ. ಇಲೆಕ್ಷನ್‌ನಲ್ಲಿ ತನ್ನ ಪುತ್ರ ರಾಘವೇಂದ್ರನನ್ನು ಅಳವಂಡಿಯಿಂದ ಗೆಲ್ಲಿಸುವ ಮೂಲಕ 'ಬಸವರಾಜೇಗೌಡ'ನಾಗಿ ಬಿಟ್ಟ. ಮೊದಲು ಮಾತು ಕೊಟ್ಟಂತೆ ಗಿಣಿಗೇರಿ ಜಿ.ಪಂ. ಕ್ಷೇತ್ರಕ್ಕೆ ಮುಸ್ಲಿಮರಿಗೆ ಟಿಕೆಟ್ ಕೊಡುತ್ತೇನೆ ಎಂದಿದ್ದ ಹಿಟ್ನಾಳ್ ಕಾಂಗ್ರೆಸ್‌ನ 'ಗೆಲ್ಲುವ ಘೋಡಾ' ಎನಿಸಿದ್ದ ಜಾಕೀರ್ ಹುಸೇನ್ ಕಿಲ್ಲೇದಾರನಿಗೆ ಕೈಬಿಟ್ಟು, ಸ್ವಜಾತಿಯ, ಎಬಿಪಿಜೆಡಿಯ ಜಿಲ್ಲಾಧ್ಯಕ್ಷನ ಮಗ ಮಂಜುಗೆ ಬೆಂಬಲಿಸಿ ತನ್ನ ಕಾಂಗ್ರೆಸ್ ಪಕ್ಷಕ್ಕೆ ಚೂರಿ ಇಕ್ಕಿದ. ಆದರೂ ಹೇಗೋ ಕಾಂಗ್ರೆಸ್‌ನ ಯಂಕಪ್ಪ ಗೆದ್ದಾಗ ಹಿಟ್ನಾಳ್ ಮುಖ ಹಳಸಿದ ಹಿಟ್ಟಿನಂತಾಗಿ ಹೋಗಿತ್ತು.

ಇತ್ತ ಯಲಬುರ್ಗಿಯ ಶಾಸಕ ರಾಯರೆಡ್ಡಿ ತನ್ನ ಜಾತಿಯ ಮೂರು ಕುದುರೆ(ಕತ್ತೆ)ಗಳಿಗೆ ಟಿಕೆಟ್ ಕೊಡಿಸಿ ಎರಡನ್ನು ಗೆಲ್ಲಿಸಿದ. ನಂತರ ಈ ಇಬ್ಬರು ಶಾಸಕರು ಹೊಸ ಜಿ.ಪಂ.ಗೆ ಅಧ್ಯಕ್ಷರನ್ನಾಗಿಸಲು ತಮ್ಮ ತಮ್ಮ ಜಾತಿಗಳವರನ್ನೇ ಬೆಂಬಲಿಸತೊಡಗಿದರು. ಮಗ ರಾಘವೇಂದ್ರನನ್ನು ಅಧ್ಯಕ್ಷ ಮಾಡಲು ಹೊರಟ ಹಿಟ್ನಾಳ್‌ಗೆ ಮಹಿಳಾ ಮೀಸಲು ತರುವ ಮೂಲ... ರಾಯರೆಡ್ಡಿ ತೊಡಕಾಗಿಬಿಟ್ಟ. ಉಪಾಧ್ಯಕ್ಷ ಸ್ಥಾನ... ಜನರಲ್ ಕೆಟಗರಿ ಮೀಸಲು ಮಾಡಿಸಿದ ರಾಯರೆ... ತನ್ನ ರೆಡ್ಡಿ ಜಾತಿಯ ಯಂಕಣ್ಣ ಯರಾಶಿಯ... ಉಪಾಧ್ಯಕ್ಷ ಮಾಡಿದ. ಒಟ್ಟಿನಲ್ಲಿ ಎಲ್ಲೆಲ್ಲ... ಪಂಚಮಸಾಲಿಗಳಿಗೆ ನೋ ಎಂಟ್ರಿ! ಅದಕ್ಕೂ ಮೊದಲ... ಕಾಂಗ್ರೆಸ್ ಪಂಚಮಸಾಲಿ ಜನಾಂಗದ ಅಮರೇ... ಹೊಸಮನಿಗೆ ಉಪಾಧ್ಯಕ್ಷ ಸ್ಥಾನ ನೀಡುವ ಸುಳ್ಳು ಭರವಸೆ ನೀಡಿತ್ತು.

ಕೊನೆಯಲ್ಲಿ "ಹಾಲಿಗೆ ಬಂದದ್ದು ಪಂಚಾಮೃ... ಅಂದಕೊಬೇಕು" ಎಂದು ಪಂಚಮಸಾಲಿಗಳಿಗೆ ಬೋಧಿಸಿದ ಕಾಂಗ್ರೆಸ್ ಅವರ ಕೈಗೆ ಚಿಪ್ಪು ಕೊಟ್ಟು ಮೋಸ ಮಾಡಿತು. ಸ್ಥಾಯಿ ಸಮಿತಿಗಳ ಅಧ್ಯಕ್ಷ ಸ್ಥಾನಗಳ... ಪಂಚಮಸಾಲಿಗಳಿಗೆ ದಕ್ಕದೇ ಹಿಟ್ನಾಳ್‌ನ ಮಗ ರಾಘು... ರಾಯರೆಡ್ಡಿಯ ಭಂಟ ಯಂಕಣ್ಣನಿಗೆ ಪ್ರಾಪ್ತಿ ಆಗಿವೆ.

ಹೋಗಲಿ, ತಾಪಂಗಳಲ್ಲಾದರೂ ತಮಗೆ ಚಾನ್ಸ್ ಉಂಟಾ ಎಂದು ಅತ್ತ ತಿರುಗಿ ನೋಡಿ... ಪಂಚಮ ಸಾಲಿಗಳಿಗೆ ಅಲ್ಲೂ 'ಗೋ ಬ್ಯಾಕ್' ಎಂಬ ಬೋರ್ಡೇ ಕಾಣಿಸಿತು. ಬಿಸಿ... ಮೀಸಲು ತಂದ ಶಾಸಕ ಹಿಟ್ನಾಳ್ ತ... ಸ್ವಜಾತಿಯ ಬಸವರಾಜ ಭಾವಿಕಟ್ಟಿಯನ... ಕೊಪ್ಪಳ ತಾ.ಪಂ. ಅಧ್ಯಕ್ಷನನ್ನಾಗಿ ಮಾಡಿದ್ದಾ... ಇಲ್ಲಿನ ಮೂರು ಸ್ಥಾಯಿ ಸಮಿತಿಗಳ ಅಧ್ಯ... ಸ್ಥಾನಗಳಲ್ಲಿ ಎರಡರಲ್ಲಿ ಶಾಸಕನ ಜಾತಿಯವರಾಗಲೇ ಕುಳಿತುಬಿಟ್ಟಿದ್ದಾರೆ.

ಕಾಂಗ್ರೆಸ್‌ನಿಂದ ಪಂಚಮಸಾಲಿಗಳಿಗೆ ಇಷ್ಟೇ... ಅನ್ಯಾಯವಾದರೂ ವಿಧಾನಸಭೆ ಟಿಕೆಟ್ ಗಿಟ್ಟಿಸಲು... ಪಂಚಮಸಾಲಿ ಕಾರ್ಡ್ ಬಳಸುವ ಡಾ.ರಾಂಪುರ ತ... ಜನಾಂಗಕ್ಕಾಗುತ್ತಿರುವ ಅನ್ಯಾಯದ ವಿರುದ್ಧ ಒಮ್ಮೆಯೂ ಪ್ರತಿಭಟಿಸದೇ ಸೋಮಾರಿ ಎನಿಸಿದ್ದಾನೆ.

ಬಾಯಲ್ಲಿ ಸಾಮಾಜಿಕ ನ್ಯಾಯ ಎಂದು ಬೊಗಳುತ್ತ ಬರೀ ಸ್ವಕುಟುಂಬ ಸ್ವಜಾತಿಗಳ ಪಾಲಿಟಿಕ್ಸ್ ಮಾಡುತ್ತಿರು... ಹಿಟ್ನಾಳ್, ರಾಯರೆಡ್ಡಿಗಳಿಗೆ ಬರಲಿರುವ ದಿನಗಳ... ಪಂಚಮಸಾಲಿಗಳ ಸಮೇತ ಇತರರೆಲ್ಲರೂ ಬು... ಕಲಿಸಲಿದ್ದಾರೆ. ಮೊದಲು ಕೊಪ್ಪಳದಲ್ಲಿ ಐದು ಸೀಟು... ಗೆಲ್ಲುತ್ತಿದ್ದ ಕಾಂಗ್ರೆಸ್ ಕೈಯಲ್ಲೀಗಿರುವುದು ಎರಡು... ಸೀಟು. ಪಕ್ಕದ ಬಳ್ಳಾರಿಯ ಕಾಂಗ್ರೆಸ್ ಕೋ... ಛಿದ್ರಗೊಂಡಿದ್ದು ಕಣ್ಣೆದುರಿಗಿದ್ದರೂ ತಮ್ಮ ದಟ... ಪಾಲಿಟಿಕ್ಸ್ ಮುಂದು ವರೆಸಿರುವ ಈ ಇಬ್ಬರ... ಎಂಎಲ್‌ಎಗಳು ಕಾಂಗ್ರೆಸ್‌ನ್ನು ಜೀರೋ ಪಾಯಿಂಟ್‌... ತರುವ ಗುಪ್ತ ಹುನ್ನಾರ ನಡೆಸುತ್ತಿದ್ದಾರೇನೋ?

-ವರದಿಗಾ...


ಕೃಷಿಗಂಟಿದ ಮನುಷ್ಯ ಕ್ರಿಮಿಗಳು
ಕೀಟನಾಶಕದ ಹೆಸರಲ್ಲಿ ಮೈದಾಹಿಟ್ಟು

ರಾಯಚೂರು

ಅಸಲಿ ಕೀಟನಾಶಕಗಳೇ ನಿರೀಕ್ಷಿತ ಪರಿಣಾಮ ಬೀರುವುದಿಲ್ಲ. ಅಂತಾದ್ದರಲ್ಲಿ ಇಲ್ಲೀಗ ಬಾಹ್ಯದಲ್ಲಿ ಅಸಲಿ ಕೀಟನಾಶಕವನ್ನೇ ಹೋಲುವ ನಕಲಿ ಕೀಟನಾಶಕವೊಂದು ಚಲಾವಣೆಗೆ ಬಂದು ರೈತರನ್ನು ತುಂಗಭದ್ರೆಗೆ ನೂಕತೊಡಗಿದೆ. ಮಾನ್ವಿ ತಾಲ್ಲೂಕಿನಲ್ಲಿ ಸೆಟ್ಲ್ ಆಗಿರುವ ಆಂಧ್ರ ವಲಸಿಗರ ಈ ರೈತದ್ರೋಹಿ ಕೆಲಸಕ್ಕೆ ಇಲ್ಲಿನ ಕೃಷಿ ಇಲಾಖೆಯ ಅಧಿಕಾರಿ ದೊರೆಸ್ವಾಮಿಯೂ ಸಾಥ್ ನೀಡಿಬಿಟ್ಟಿದ್ದ. ಇದೆಲ್ಲವನ್ನೂ ಬಗೆಹರಿಸಬೇಕಾದ ಶಾಸಕ ಭೋಸರಾಜನ ಮಗ ರವಿರಾಜನೇ ಆರೋಪಿಗಳಿಗೆ ಗಾಡ್ ಫಾದರ್‌ನಂತಿದ್ದಾನೆ!

ಸ್ಟಾರ್‌ಥಿನ್ ಹೆಸರು : ರೈತರ ಬಾಯಿಗೆ ಕೆಸರು!

ತನ್ನ ಹತ್ತಿರದ ಹೊಲದಲ್ಲಿ ಬೆಳೆದಿದ್ದ ಭತ್ತದ ಬೆಳೆಗೆ ಬಂದಿದ್ದ ರೋಗ ನಿವಾರಿಸಲು ಅಸಿಫೇಟ್ ಎಂಬ ಕ್ರಿಮಿನಾಶಕ ತರಲು ಬಲ್ಲಟಗಿ ಬಸವಣ್ಣ ಕ್ಯಾಂಪಿನ ಸಾಯಿರಾಮ ಎಂಬ ರೈತ ನವೀನ್ ಎಂಬಾತನೊಂದಿಗೆ ಮಾನ್ವಿಗೆ ಬಂದು, ಅಂಗಡಿಯೊಂದರಲ್ಲಿ ವಿಚಾರಿಸಿದಾಗ ಕೆ.ಜಿ. ಪ್ಯಾಕೆಟ್ಟಿನ ಬೆಲೆ 350 ರೂ. ಎಂದು ತಿಳಿಯುತ್ತದೆ. ಅಷ್ಟರಲ್ಲೇ ಅಲ್ಲಿಗೆ ಬರುವ ನವೀನನ ಪರಿಚಯಸ್ಥ ಮೆಕಾನಿಕ್ ಸತೀಶ್ ಎಂಬಾತ ತಾನು 330 ರೂ.ಗೆ ಒಂದು ಕೆ.ಜಿಯಂತೆ ಕ್ರಿಮಿನಾಶಕ ಕೊಡುವುದಾಗಿ ಕರೆದೊಯ್ಯುತ್ತಾನೆ. ಸಾಯಿರಾಮ 80, ನವೀನ್ 40 ಪ್ಯಾಕೇಟುಗಳನ್ನು ಖರೀದಿಸುತ್ತಾರೆ. ಮನೆಗೆ ಬಂದು ನೋಡಿದರೆ ಕ್ರಿಮಿನಾಶಕ ಪುಡಿಯ ಬಗ್ಗೆ ಸಂಶಯ ಬರುತ್ತದೆ. ಅದರಲ್ಲಿ ಬರೀ ಮೈದಾ ಹಿಟ್ಟೇ ಹೇರಳವಾಗಿರುವುದನ್ನು ಕಂಡು ಬೆಚ್ಚಿಬೀಳುವ ಈ ರೈತರು ಸೀದಾ ಮಾನ್ವಿ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸುತ್ತಾರೆ. ಅದೇ ಊರಿನ ಶ್ರೀನಿವಾಸರಾವ್ ಎಂಬಾತ ಮಾನ್ವಿಯ ಭವಾನಿ ಏಜನ್ಸಿಯಲ್ಲಿ 380 ರೂಗೆ ಕೆ.ಜಿ.ಯಂತೆ 15 ಕೆ.ಜಿ. ಸ್ಟಾರ್‌ಥಿನ್ ಖರೀದಿಸಿ ಮೋಸ ಹೋಗಿದ್ದ. ಹೀಗೆ ಮೋಸ ಹೋದ ಹಲವಾರು ರೈತರು ಪೋಲೀಸರು, ತಾಲ್ಲೂಕು ಕೃಷಿ ಸಹಾಯಕ ನಿರ್ದೇಶಕ ದೊರೆಸ್ವಾಮಿ, ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದಾರೆ.



ಟೋಪಿವಾಲಾ ಆಂಧ್ರವಾಲಾಸ್!

ಈ ಪ್ರಕರಣದ ಪ್ರಮುಖ ಆರೋಪಿ ಆಂಧ್ರ ಮೂಲದ ಮೆಕ್ಯಾನಿಕ್ ಸತೀಶ್ ಎಂಬ ಚಾರ್ ಸೋ ಬೀಸ್ ಈಗ ನಾಪತ್ತೆ ಆಗಿದ್ದಾನೆ. ಶಾಸಕ ಭೋಸರಾಜನ ಪುತ್ರ ರವಿರಾಜನೇ ರಸಗೊಬ್ಬರ ಮತ್ತು ಕೀಟನಾಶಕ ಅಂಗಡಿ ಮಾಲೀಕರ ಸಂಘದ ಅಧ್ಯಕ್ಷನಾಗಿದ್ದು ಕಳ್ಳ ವ್ಯಾಪಾರಿಗಳಿಗೆ ಗುರುವಿನಂತಾಗಿದ್ದಾನೆ. ಭವಾನಿ ಏಜನ್ಸಿಯ ಮಾಲೀಕ ಮತ್ತು ನಗರ ಬಿಜೆಪಿ ಘಟಕದ ಅಧ್ಯಕ್ಷ ಗೋಪಾಲಕೃಷ್ಣ ಎಂಬ ಆಂಧ್ರವಾಲಾ ಚೆಡ್ಡಿ ಬಳಿ ಹೇರಳ ನಕಲಿ ಸ್ಟಾರ್‌ಥಿನ್‌ಗಳಿವೆ.

ದೊರೆಸ್ವಾಮಿ-ಕೈಗೆ ಸಿಗದ ಆಸಾಮಿ!

ಕಳೆದ 6 ವರ್ಷಗಳಿಂದ ಮಾನ್ವಿಯಲ್ಲೇ ಗೂಟ ಬಡಿದುಕೊಂಡು ಕುಳಿತಿರುವ ಸಹಾಯಕ ಕೃಷಿ ಅಧಿಕಾರಿ ದೊರೆಸ್ವಾಮಿ ಕಚೇರಿಯಲ್ಲಿ ಸಿಗುವುದೇ ಅಪರೂಪ. ಕೆಲ ದಿನಗಳ ಹಿಂದೆ ತಾಲ್ಲೂಕಿನಲ್ಲಿ ಯೂರಿಯಾ ರಸಗೊಬ್ಬರದ ಕೃತಕ ಅಭಾವ ಸೃಷ್ಟಿಯಾಗಿ, ಅಂಗಡಿಗಳ ಮಾಲೀಕರು ದುಂಡಗಾಗುವುದನ್ನು ನೋಡುತ್ತಾ ಎಂಜಾಯ್ ಮಾಡಿದ್ದ ದೊರೆಸ್ವಾಮಿಗೆ ರೈತರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ಇದರಿಂದ ರೊಚ್ಚಿಗೆದ್ದಿರುವ ರೈತರು ಕರ್ನಾಟಕ ರಾಜ್ಯ ರೈತ ಸಂಘದ ಚಾಮರಸ ಬೆಟ್ಟದೂರರವರ ನೇತೃತ್ವದಲ್ಲಿ ಒಂದು ದಿನದ ಧರಣಿ ನಡೆಸಿದ್ದಾರೆ. ದೊರೆಸ್ವಾಮಿಯ ವಜಾಕ್ಕೆ, ಪ್ರಕರಣದ ತನಿಖೆಗೆ ಒತ್ತಾಯಿಸಲಾಗುತ್ತಿದೆ.

-ವರದಿಗಾರ

ಶಾಪ ವಿಮೋಚನೆ ಆಯಿತು!

ಸಣ್ಣಮಕ್ಕಳು ಅವರಿಗೆ ಇಷ್ಟವಾದ ವಸ್ತುಗಳು ಅನಿರೀಕ್ಷಿತವಾಗಿ ದೊರೆತಾಗ ಸಂಭ್ರಮಿಸುತ್ತವಲ್ಲ, ಆ ಸಂತೋಷದ ಭರದಲ್ಲಿ ಏನಾದರೂ ಯದ್ವಾತದ್ವಾ ಕೆಲಸ ಮಾಡುತ್ತವಲ್ಲ, ಅಂತಹ ಮನಸ್ಥಿತಿ ಅವರದ್ದು ಆಗಿತ್ತು, ಅವರದ್ದು ಅಂದರೆ ಭಾರತೀಯ ಜನತಾ ಪಕ್ಷದವರದ್ದು, ಏನೋ ಆನಂದ, ಎಂತಹದ್ದೋ ಸಂತೋಷ. ಯಾವ ಕೆಲಸ ಮಾಡಲೂ ಅವು ಅಡ್ಡಿ ಬರುತ್ತಿದ್ದವು. ವಕೀಲರು ತಮ್ಮ ವೃತ್ತಿ ಮರೆತರು; ವಿದ್ಯಾರ್ಥಿಗಳು ಓದು ಮರೆತರು. ಹೀಗೆ ಹಲವು ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದವರು, ತಮ್ಮ ದೈನಂದಿನ ಕೆಲಸ ಮರೆತು, ಭಾಜಪ ಅಧಿಕಾರ ಹಿಡಿದ ಹೆಮ್ಮೆಯಿಂದ, ಎದೆ ಉಬ್ಬಿಸಿ ಓಡಾಡುವುದನ್ನೇ ಕಸುಬು ಮಾಡಿಕೊಂಡರು. ಬಿಂದೆ ಬಣಗುಡುತ್ತಿದ್ದ ಭಾಜಪ ಕಚೇರಿಗೂ ಎಂತಹದ್ದೋ ಕಳೆ ಬಂದು ಮಿರಿಮಿರಿ ಮಿಂಚುವಂತಾಯಿತು.

ಅಧಿಕಾರದ ಪಾಲುದಾರ ಪಕ್ಷವಾದ ಜಾತ್ಯತೀತ ಜನತಾದಳದವರಲ್ಲಿ ಇಂತಹ ವಾತಾವರಣ ಇಲ್ಲವಲ್ಲ ಅಂದರೆ ಅವರಿಗೆ ಅಧಿಕಾರ ಹೊಸದಲ್ಲ. ಆದರೆ ಇವರಿಗೆ ಇದೇ ಮೊದಲ ಅನುಭವ. ಅದೂ ಅದು ದೊರೆತದ್ದು ಅಧಿಕಾರದ ಗದ್ದುಗೆ ಅನ್ನುವುದು ನಮಗೆ ಕನಸಿನ ಮಾತು ಅಂತ ನಂಬಿದ್ದ, ಭಾರತೀಯ ಜನತಾ ಪಕ್ಷಕ್ಕೆ ಸಿಗಬಾರದು ಎಂಬುದು ಒಂದು ಶಾಪ ಅಂತ ತಿಳಿದಿದ್ದ ದಿನಗಳಲ್ಲಿ! ಈ ಶಾಪದಿಂದ ಕುಮಾರಸ್ವಾಮಿಯವರು ವಿಮೋಚನೆ ಮಾಡಿದರು ಎಂಬುದಾಗಿ ವಿಜ್ಞಾನ ಮಂತ್ರಿ ರಾಮಚಂದ್ರೇಗೌಡರು ಕೃತಜ್ಞತೆಯಿಂದ ಹೇಳಿರುವುದು ಸರಿಯಾಗಿಯೇ ಇದೆ. ಆದರೆ ಒಂದು ವಿಷಯ ಅವರು ಸ್ಪಷ್ಟಪಡಿಸಬೇಕಿತ್ತು. ಶ್ರೀರಾಮ ತನ್ನ ಪಾದ ಸ್ಪರ್ಶದಿಂದ ಕಲ್ಲಾಗಿದ್ದ ಅಹಲ್ಯೆಯ ಶಾಪ ವಿಮೋಚನೆ ಮಾಡಿದ. ಕುಮಾರಸ್ವಾಮಿಯವರು ಯಾವುದರಿಂದ ಸ್ಪರ್ಶ ಮಾಡಿ ಭಾಜಪವನ್ನು ಶಾಪ ವಿಮುಕ್ತಗೊಳಿಸಿದರು? ಅಹಲ್ಯೆ ಭಾಜಪ, ಶ್ರೀರಾಮಚಂದ್ರ ಕುಮಾರಸ್ವಾಮಿ ಎಂಬುದು ಇದರಿಂದ ಸ್ಪಷ್ಟ ಆಗಿದ್ದರೂ ಆಕೆಗೆ ಮೋಸ ಗೊಳಿಸಿದ ಇಂದ್ರ ಯಾರು? ಅಹಲ್ಯೆಯ ಪತಿ ಗೌತಮ ಯಾರು? ಎಂಬುದು ಕುರಿತು ಶ್ರೀರಾಮಚಂದ್ರನ ಭಕ್ತರಾದ ಭಾಜಪದವರು ಮುಂದಾದರೂ ವಿವರಣೆ ನೀಡಬಹುದಾಗಿದೆ.

ಇದುವರೆವಿಗೂ ಇತರ ಪಕ್ಷದವರು ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ತಿಂದು ತೇಗುತ್ತಿರುವುದನ್ನು ಕಂಡು 'ಭ್ರಷ್ಟಾಚಾರ ಮಿತಿ ಮೀರಿತು' ಎಂದು ಸಾರಿ ಸಾರಿ ಹೇಳುತ್ತಿದ್ದರೂ ತಮಗೆ ಯಾವಾಗ ಇಂತಹ ಅವಕಾಶ ದೊರೆಯುತ್ತದೆಯೋ ದೇವರೆ ಎಂದು ಪರಿತಪಿಸುತ್ತಿದ್ದವರಿಗೆ ಅವರದ್ದೇ ಪಕ್ಷದ ವಿದ್ಯಾರ್ಥಿ ನಾಯಕ ಎಂ.ಎಸ್. ಬಾಲಾಜಿ ದಾರಿ ದೀಪ ಆಗಿದ್ದಾನೆ. ಬೆಂಗಳೂರು-ರಾಮನಗರ ನಡುವೆ ಒಂದು ಸಾವಿರ ಎಕರೆ ಭೂಮಿಯನ್ನು ಐಟೀಗಾಗಿ ಪಡೆದು ಮಾರ್ಗದರ್ಶನ ನೀಡಿದ್ದಾನೆ. ಐಟಿ ನಗರದ ಹೆಸರು ಗೊತ್ತೆ? ಗಾಂಧಿಸಿಟಿ! ಗೋಡ್ಸೆ ಗಾಂಧೀಜಿಯ ಭೌತಿಕ ಶರೀರವನ್ನು ಮಾತ್ರ ತೆಗೆದ. ಆದರೆ ಈ ಬಾಲಾಜಿ ಎಂಬ ಗೋಡ್ಸೆ ಗಾಂಧಿ ಸಿಟಿ ಹೆಸರಿನಲ್ಲಿ ಅವ್ಯವಹಾರ ನಡೆಸಿ ಗಾಂಧಿ ಸಿದ್ಧಾಂತಗಳ ಕೊಲೆಯನ್ನು ಯಶಸ್ವಿಯಾಗಿ ಮಾಡಿದ್ದಾನೆ. ಭಾರತೀಯ ಜನತಾ ಪಕ್ಷಕ್ಕೆ ಇದಕ್ಕಿಂತಲೂ ಬೇರೆ ಸೇವೆ ಬೇಕಿಲ್ಲ! ಇಂತಹ ಸೇವೆ ಮಾಡಲು ಹಲವಾರು ಕಾರ್ಯಕರ್ತರು ತುದಿಗಾಲಲ್ಲಿ ನಿಂತಿದ್ದರೂ... ಅಕಟಕಟಾ... ಒಕ್ಕಲಿಗ ಪೌರುಷನಲ್ಲ ಎಂಬ ಮಾತಿಗೆ ಉದಾಹರಣೆಯೋ ಎಂಬಂತೆ ಭಾಜಪ ರಾಜ್ಯಾಧ್ಯಕ್ಷ ಸದಾನಂದ ಗೌಡ ಬಡಬಡಿಸುತ್ತಿದ್ದಾನೆ. ಎಪಿಎಂಸಿ ಮತ್ತು ಸಹಕಾರ ಸಂಸ್ಥೆಗಳಿಗೆ ನಾಮ ನಿರ್ದೇಶನ ಮಾಡುವಾಗ ತಮ್ಮ ಪಕ್ಷವನ್ನು ಗಣನೆಗೇ ತೆಗೆದುಕೊಂಡಿಲ್ಲ ಎಂದು ಹರಿ ಹಾಯುತ್ತಿದ್ದಾನೆ. ಇದನ್ನೆಲ್ಲ ಕೇಳಿ ಕುಮಾರಸ್ವಾಮಿ ರಾಜೀನಾಮೆ ಬಿಸಾಕ್ತೀನಿ ಎಂದರೆ ಏನು ಗತಿ ಎಂದು ದಿಗಿಲು ಪಡುತ್ತಿರುವ ಹೊತ್ತಿನಲ್ಲೇ ಆ ಹಾಳಾದ ಕುಮಾರಸ್ವಾಮಿ 'ರಾಜೀನಾಮೆ ಬಿಸಾಕ್ತೀನಿ' ಅಂದೇ ಬಿಡೋದೆ! ಒಂದು ವೇಳೆ ಹೀಗೇನಾದರೂ ಆದರೆ ಕಬಳಿಸುವ ಅವಕಾಶದಿಂದ ವಂಚಿತರಾದವರೆಲ್ಲ ಸದಾನಂದಗೌಡರಿಗೆ ಗಾಳಿ ಬಿಡಿಸಲು ತಯಾರು ಆಗುತ್ತಿದ್ದಾರಂತೆ! ಇದನ್ನು ಮನಗಂಡ ಸದಾ ಹಲ್ಲು ಬಿಟ್ಟುಕೊಂಡೇ ಇರುವ ಸದಾನಂದಗೌಡರು 'ನಮ್ಮದು ಬಾಯಿ ಜೋರು ಮಾರಾಯರಾ. ಆದರೆ ಹೃದಯ ಉಂಟಲ್ಲ ಅದು ಸದಾ ಮೆದು ಉಂಟು' ಎಂದು ಹೇಳಲು ಸಿದ್ಧರಾಗುತ್ತಿದ್ದಾರಂತೆ!

ಸದಾನಂದಗೌಡರಿಗೆ ಗಾಳಿ ಬಿಡುಸ್ತಾರಂತೆ!

ಅಣಕ

ಒಂದು ಮಹಿಳೆಯ ಕೆನ್ನೆಗೆ ಪಪ್ಪಿ ಕೊಟ್ಟರೆ... ನೀವು ಸೆರೆಮನೆ ಸೇರುತ್ತೀರಿ.

ಇಂಡೋನೇಷ್ಯದಲ್ಲಿ ಸಾರ್ವಜನಿಕವಾಗಿ ಮುತ್ತು ಕೊಡುವುದು ಅಪರಾಧ ಅಲ್ಲ, ಆದರೆ ಮುತ್ತು ನೀಡುವುದರಲ್ಲಿ ಕೆಲವು ನಿಷೇಧಗಳಿವೆ. ಅವೆಂದರೆ ಸಂಬಂಧ ಇಲ್ಲದವರು ಮುತ್ತು ನೀಡಬಾರದು. ಸಂಬಂಧ ಇದ್ದವರೂ ತುಟಿಯ ಮೇಲೆ ಮುತ್ತನ್ನು ಸಾರ್ವಜನಿಕ ಸ್ಥಳದಲ್ಲಿ ನೀಡ ಬೇಕಾದರೆ ಅದು ಐದು ನಿಮಿಷಗಳಿಗಿಂತಲೂ ದೀರ್ಘ ಅವಧಿಯದ್ದಾಗಿರಬಾರದು!

ಸಮಸ್ಯೆ ಏನು ಅಂದರೆ ಮುತ್ತನ್ನು ಐದು ನಿಮಿಷ ಅಥವಾ ಅದಕ್ಕಿಂತ ಕಡಿಮೆ ಅವಧಿಗೆ ಮಾತ್ರ ನೀಡಿದ ಎಂದು ಹೇಗೆ ಹೇಳುವುದು? ಅಲ್ಲೇನು ಪೋಲೀಸಿನವ ಟೈಂಪೀಸ್ ಹಿಡಿದುಕೊಂಡು ಅವನು ಯಾವಾಗ ಮುತ್ತು ಕೊಡಲು ಪ್ರಾರಂಭಿಸಿದ, ಯಾವಾಗ ನಿಲ್ಲಿಸಿದ ಅಂತ ಲೆಕ್ಕ ಹಾಕಕ್ಕೆ ಆಗುತ್ತಾ? ಅದೂ ಅಲ್ಲದೆ ಇಂತಹ ಕೃತ್ಯಗಳಲ್ಲಿ ತೊಡಗಿಸಿಕೊಂಡಿರುವವರನ್ನು ಹಿಡಿಯಬೇಕಾದರೆ ಪೋಲೀಸಿನವ ಮರೆಯಲ್ಲಿ ನಿಂತಿರಬೇಕು. ಮರೆಯಿಂದ ಹೊರಕ್ಕೆ ಬಂದು ಹಿಡಿದ ಅಂತಲೇ ಇಟ್ಟುಕೊಳ್ಳಿ. 'ನಾವು ಈಗ ತಾನೆ ಶುರು ಮಾಡಿದೀವಿ ಐದು ನಿಮಿಷದ ಮೇಲಾಯ್ತು ಅಂತಿದೀರಲ್ರಿ' ಅಂತ ಅವರು ಎಗರಿ ಬಿದ್ದರೆ ರಾದ್ಧಾಂತ ಆಗಬಹುದು ಅಲ್ಲವಾ. ಅದಕ್ಕೆ ಸೊರಾಬ್ಜಿ ಹೇಳೋದು ಇಂತಹ ಅದ್ವಾನದ ಕಾನೂನು ಕೊನಾರ್ಕ, ಖಜುರಾಹೊ ಅಂತಹ ಹೆಮ್ಮೆಯ ಸ್ಥಳವಿರುವ ಭಾರತಕ್ಕೆ ಬರುವುದು ಬೇಡ ಅಂತ.

ಗಂಡಾಂತರದ ಕಿಸ್ಸು!

ಇಂಗ್ಲಿಷ್ ಸಿನಿಮಾಗಳಲ್ಲಿ ಗಂಡು ಹೆಣ್ಣು ಅಪ್ಪಿಕೊಂಡು ಕಿಸ್ ಯಾನೆ ಮುತ್ತು ಕೊಡುವುದು ಮಾಮೂಲು. ಭಾರತೀಯ ಸಿನಿಮಾಗಳಲ್ಲಿ ಹೀಗೆ ಮಾಡಿದರೆ ಏನಾಗುತ್ತೆ? ಹಾಗೆ ಮಾಡಿದವರಿಗೆ ಏನಾಗುತ್ತದೋ ಏನು ಕತೆಯೋ ಆದರೆ ಸೆನ್ಸಾರ್ ಮಂಡಳಿ ಕತ್ತರಿ ಬೀಳುವುದು ಖಾತರಿ. ಅಸಭ್ಯ ಅಸಹ್ಯಕಾರಿ ದೃಶ್ಯಗಳನ್ನು ಬೇಕಾದರೆ ತೋರಿಸಿ ಪ್ರೇಕ್ಷಕರನ್ನು ಲೈಂಗಿಕವಾಗಿ ಉದ್ರೇಕಗೊಳಿಸಲಿ. ಅದು ಪರವಾಗಿಲ್ಲ, ಆದರೆ ಆ ಮುತ್ತು? ಉಹುಂ!



ಸೋಲಿ ಜೆ. ಸೊರಾಬ್ಜಿ ಅವರು ಈ ಮುತ್ತಿನ ಬಗ್ಗೆ ಒಂದು ಪುಟ್ಟ ಲೇಖನ ಬರೆದಿದ್ದಾರೆ. ಅದರ ಸಾರಾಂಶ ಇದು.

ಕೆಲವು ದೇಶಗಳಲ್ಲಿ ಮುತ್ತು ಕೊಡುವುದು ಅಪಾಯಕಾರಿ. ನಿಮಗೆ ಮೆಚ್ಚುಗೆ ಸೂಚಿಸಲು ಇರಾನಿನಲ್ಲಿ

ಚಿಕ್ಕುಗಳ ಕಾಲ

ಊರಿಗೆ ಚಿರತೆ ನುಗ್ಗಿದರೆ ಏನು ಮಾಡ್ತೀವಿ?

ಪೋಲೀಸಿನವರಿಗೆ, ಅರಣ್ಯ ಇಲಾಖೆಯವರಿಗೆ ತಿಳಿಸ್ತೀವಿ.

ಅಲ್ಲವೆ? ಅವು ಕ್ರೂರ ಪ್ರಾಣಿಗಳು ಅದಕ್ಕೆ.

ಅದೇ ಊರಿಗೆ ಚಿಕ್ಕು ಬಂದರೆ?

ಅರೆ, ಅವುಗಳ ವಾಸವೇ ಊರಿನಲ್ಲಿ ಅಲ್ಲವೆ?

ಹೌದಾ? ದೆಹಲಿಯಲ್ಲಿ ನೋಡಿ. ಎಸ್‌ಪಿಜಿಯವರು ಈ ಚಿಕ್ಕುಗಳನ್ನು ಹಿಡಿಯಲು ಸಹಾಯ ಮಾಡಿ ಅಂತ ಜೂ ಅಧಿಕಾರಿಗಳ ಮೊರೆ ಹೋಗಿದ್ದಾರೆ! ಯಾಕೆ ಅಂದರೆ ಅವು ಪ್ರಧಾನ ಮಂತ್ರಿಯ ಮನೆ ಹೊಕ್ಕಿರುವ ಬಿಡು ಬೀಸು ಚಿಕ್ಕುಗಳು!

ಜೂ ಅಧಿಕಾರಿಗಳು ನಿಜಕ್ಕೂ ಇದರಲ್ಲಿ ಸಹಾಯ ಮಾಡಬಲ್ಲರೆ ಅಂದರೆ ಹಾಗೇನಾದರೂ ಮಾಡಿದರೆ ಅದು ಆಶ್ಚರ್ಯದ ಸಂಗತಿ ಎನ್ನುತ್ತಾರೆ ತಿಳಿದವರು. ಯಾಕೆಂದರೆ ಪಾರ್ಲಿಮೆಂಟ್ ಭವನದಲ್ಲಿ ಸೆಂಟ್ರಲ್ ಹಾಲ್ ಅಂತ ಒಂದಿದೆ. ಅದು ಸಂಸದರು, ಮಾಜಿ ಸಂಸದರು, ಸಂಸತ್ತಿನ ವರದಿಗಾರರು ಮುಂತಾದ ಗಣ್ಯರು ಸೇರುವ ಸ್ಥಳ. ಅಲ್ಲಿ ಚಿಕ್ಕುಗಳ ಕಾಟವೇ ಕಾಟ ಅಂತೆ. ಅವು ಎಷ್ಟು ಧೈರ್ಯಶಾಲಿ ಚಿಕ್ಕುಗಳು ಅಂದರೆ ಕೆಲವು ಸಲ ಟೇಬಲ್ ಮೇಲಕ್ಕೆ ನೆಗೆದು ಬಂದು ತಿಂಡಿಯ ತಟ್ಟೆಯನ್ನೇ ಕಿತ್ತುಕೊಳ್ಳುತ್ತವಂತೆ. ಇಂತಹ ಚಿಕ್ಕುಗಳನ್ನು ಹಿಡಿದು ಹೊರಹಾಕಲು ಯಾಕೆ ಸಂಸತ್ತು ಜೂ ಅಧಿಕಾರಿಗಳನ್ನು ಇನ್ನೂ ಕೇಳಿಲ್ಲ ಅನ್ನುವುದು ಅವರ ಪ್ರಶ್ನೆ.

ಹಾಗಾದರೆ ಸೆಂಟ್ರಲ್ ಹಾಲ್‌ನಿಂದ ಈ ಚಿಕ್ಕುಗಳನ್ನು ಯಾವಾಗಲೂ ಹೊರಹಾಕಿರಲೇ ಇಲ್ಲವೆ ಅಂದರೆ ಒಂದೇ ಒಂದು ಸಲ ಹೀಗೆ ಮಾಡಲಾಯಿತಂತೆ. ಅದು ಅಮೆರಿಕ ಅಧ್ಯಕ್ಷ ಬುಷ್ ಬಂದಿದ್ದಾಗ. ಸೆಂಟ್ರಲ್ ಹಾಲಿನಲ್ಲಿ ಸಂಸದರನ್ನು ಕುರಿತು ಅವರು ಭಾಷಣ ಮಾಡಿದಾಗ.

ಆಗ ಮಾಡಿದ ಹಾಗೆ ಈಗಲೂ ಯಾಕೆ ಮಾಡಬಾರದು ಎಂಬ ಪ್ರಶ್ನೆ ಸಹಜ ಅಲ್ಲವೆ. ಅದಕ್ಕೆ ಈಗ ಹಬ್ಬಿರುವ ವದಂತಿ ಏನೆಂದರೆ ಗಣ್ಯಾತಿಗಣ್ಯರು ಏನು ಮಾತಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ತಿಳಿಯಲು ಐಬಿ ಇಲಾಖೆಯವರು ಚಿಕ್ಕುಗಳ ದೇಹದ ಒಳಗೆ ಮೈಕ್ರೋಫೋನ್‌ಗಳನ್ನು ಇಟ್ಟಿದ್ದಾರಂತೆ. ಅದಕ್ಕೇ ಚಿಕ್ಕುಗಳನ್ನು ಹೊರಕ್ಕೆ ಓಡಿಸುತ್ತಿಲ್ಲವಂತೆ!

ರೇಪ್ ಯಾಕೆ ಆಗಲಿಲ್ಲ?

ರವಿ ಗರಣಿ ನಿರ್ದೇಶನದ 'ಶುಭಂ' ಕುರಿತ ವಿಮರ್ಶೆ ನೋಡಿದಿರಾ?

ಒಬ್ಬ ಯುವಕ ಒಬ್ಬ ಯುವತಿಯನ್ನು ಪ್ರೀತಿಸುತ್ತಿರುತ್ತಾನೆ. ಆದರೆ ಯುವತಿಗೆ ಅವನ ಮೇಲೆ ಪ್ರೀತಿ ಇಲ್ಲ.

ಏನು ಮಾಡಬೇಕು ಯುವಕ? ಕಿಡ್ನಾಪ್ ಹರ್!

ಕಲಾಸಾಮ್ರಾಟ ಎಸ್. ನಾರಾಯಣ್‌ರ ಚಿತ್ರ 'ಸೇವಂತಿ ಸೇವಂತಿ' ಈ ವಾರ ತೆರೆಕಂಡಿದೆಯಂತೆ. ಅಲ್ಲೂ ಅದೇ ಕತೆ. ಒನ್ ಸೈಡೆಡ್ ಲವ್ ಸ್ಟೋರಿ.

ಏನು ಮಾಡಬೇಕು ಯುವಕ? ಯುವತಿಗೆ ಮತ್ತು ಬರುವಂತೆ ಮಾಡಿ ಮಾಂಗಲ್ಯ ಕಟ್ಟದ!

ಅಲ್ಲ ಅದರ ಬದಲು ರೇಪ್ ಮಾಡಬಹುದಿತ್ತಲ್ಲಾ ಅಂದರೆ ಹೀರೋ ಆದವನು ರೇಪ್ ಮಾಡುವುದಿಲ್ಲ!


ಹೆಣ್ಣಿಗೂ ಒಂದು ಮನಸ್ಸಿದೆ, ಆಕೆಗೂ ಭಾವನೆಗಳು ಇವೆ ಅಂದರೆ ಭಾರತೀಯ ನಾರಿಗೆ ಅವೆಲ್ಲ ಮುಖ್ಯ ಅಲ್ಲ ಅನ್ನುವುದು ನಮ್ಮ ನಿರ್ದೇಶಕರ ಖಚಿತ ನಿಲುವಂತೆ!

ಯಾವ ಕಾಲದಲ್ಲಿ ಇದ್ದಾರೆ ಇವರು?

-ಎಚ್.ಎಲ್. ಕೇಶವಮೂರ್ತಿ

ನಮ್ಮ ಪ್ರಜ್ಞೆಯಾಗಿ ಮುತ್ತುರಾಜ್ ಉಳಿಯುತ್ತಾರೆ

ನಾನು ಬಹಳವಾಗಿ ಇಷ್ಟಪಡುವ ಶಿವ ಸುಂದರ್‌ರವರು ರಾಜ್‌ರವರ ಬಗ್ಗೆ ಆಳವಾಗಿ ಯೋಚಿಸುವ ಲೇಖನವನ್ನು ಬರೆದಿದ್ದಾರೆ. ಇದುವರೆಗೂ ರಾಜ್‌ರವರ ಬಗ್ಗೆ ಈ ರೀತಿಯ ಲೇಖನ ಯಾವ ಪತ್ರಿಕೆಯಲ್ಲೂ ಬಂದಿಲ್ಲ, ಇದು 'ಲಂಕೇಶ್' ವಿಶಿಷ್ಟತೆ.



ಈಗಲೂ ಅಪ್ಪನನ್ನು ನನ್ನ ಕೈಯಿಂದ ಎತ್ತಿಕೊಳ್ಳಲೇ ಇಲ್ಲ ಎಂದು ಸಂಕಟಪಡುತ್ತೇನೆ- ಲಂಕೇಶರ 'ಹುಳಿಮಾವಿನ ಮರ'ದ ಸಾಲುಗಳು ಅವರ 'ಅವ್ವ' ಕವನದಷ್ಟೇ ಇಂದಿಗೂ ನನ್ನನ್ನು ಕಾಡುತ್ತವೆ. ಬೆವರಿನ ಸಂಸ್ಕೃತಿಯ ಹಿನ್ನೆಲೆಯಿಂದ ಬಂದಿದ್ದ ರಾಜ್‌ರವರಿಗೆ ಆ ವರ್ಗದ ನೋವು, ಅಪಮಾನ, ಹತಾಶೆ, ಕಷ್ಟಗಳನ್ನು ತಮ್ಮ ನಟನೆಯ ಮೂಲಕ ಅಭಿವ್ಯಕ್ತಿಸಲಾಗದಿದ್ದಕ್ಕೆ ನೋವಿರಲಿಲ್ಲವೆ? ಅಂತರಂಗದಲ್ಲಿ ಮುತ್ತುರಾಜ್‌ರಾಗಿಯೇ ಇದ್ದ ಅವರಿಗೆ ಬಂದಿತ್ತಾ ಆ ನೋವಿತ್ತು ಎಂದು ಅನ್ನಿಸುತ್ತದೆ. ಅಂತರಂಗದಲ್ಲಿ ಮುತ್ತುರಾಜ್‌ರಾಗಿಯೇ ಇದ್ದು ಕಷ್ಟವೆಲ್ಲವು ಮೂಲಕ ಸಾಂಸ್ಕೃತಿಕವಾಗಿ ಬಂಗಾರದ ಮನುಷ್ಯರಾಗಿದ್ದು ನಿಜ. ಆದರೆ ಅಂತರಂಗದಲ್ಲಿ ಮುತ್ತುರಾಜ್‌ರಾಗಿಯೇ ಇದ್ದು ಬಂದ ಹೆಜ್ಜೆಗೆ ಕಾಡುತ್ತಾರೆ.

ಅಪ್ಪ ಕೊಟ್ಟಷ್ಟು ತಾನು ಹಿಂತಿರುಗಿಸಲಿಲ್ಲ ಎಂಬ ಲಂಕೇಶರ ನೋವು ಅಕ್ಷರ ಮಾಧ್ಯಮದ ಮೂಲಕ ಅವರ 'ಹುಳಿಮಾವಿನ ಮರ'ದಲ್ಲಿ ವ್ಯಕ್ತವಾಗಿದೆ. ಆದರೆ ಮುತ್ತುರಾಜ್‌ರಾಗಿ ತನ್ನ ವರ್ಗದ ಜನರ ಅಳಲನ್ನು ಚಿತ್ರ ಮಾಧ್ಯಮದ ಮೂಲಕ ಅಭಿವ್ಯಕ್ತಿಸಲಾಗದ ಅವರ ಅಂತರಂಗದ ನೋವು ಅವರ ಸಾವಿನೊಂದಿಗೇ ಹೊರಟು ಹೋಗಿದೆ. ಕೆಳವರ್ಗದ ನೋವು ಮತ್ತು ಕನ್ನಡ ಇರುವವರೆಗೂ ಮುತ್ತುರಾಜ್ ರವರು ನಮ್ಮ ಅಳುಕಿನ, ಅಭಿಮಾನದ ಪ್ರಜ್ಞೆಯಾಗಿ ಉಳಿಯುತ್ತಾರೆ.

-ಯೋಗೀಶ್ ಸೂರಪ್ಪ, ಹಾಸನ

ಬದುಕಿನ ಭರವಸೆ ಕಳೆದುಕೊಂಡ ಚಿತ್ರದುರ್ಗದ ಲಕ್ಕಣ್ಣರೆಡ್ಡಿ ಇಡೀ ರೈತ ಸಮುದಾಯಕ್ಕೆ ಪ್ರಾತಿನಿಧಿಕ ಪ್ರತಿಮೆಯಾಗಿದ್ದಾರೆ. ಮರ್ಯಾದಾ ಪುರುಷೋತ್ತಮ ಇಂದು ದೈನ್ಯತೆಯ ಸಾಕಾರ ಮೂರ್ತಿ! ಈಗ್ಗೆ ಮೂರು ವರ್ಷಗಳ ಹಿಂದೆ ಮಂಡ್ಯ ಜಿಲ್ಲೆ ಹಳ್ಳಿಯೊಂದರ ರೈತ ಬೊಮ್ಮೇಗೌಡ ತನ್ನೂರಿನ ಸಾಂಸ್ಕೃತಿಕ ಅಧಃಪತನವನ್ನು ಕಂಡು ಸೈರಿಸಲಾರದೆ ತಾನೇ ಹಾಗೇ ಸ್ವಾಸ್ಥ್ಯ ಮಾಡಿಕೊಂಡು, ಅದನ್ನೆಲ್ಲ ಚೀಟಿಯಲ್ಲಿ ಬರೆದಿಟ್ಟು, ತಾನೇ ರಚಿಸಿಕೊಂಡ ಚಿತೆ ಏರಿ ದಗ್ಧವಾಗಿ ಹೋದರು. ಇದನ್ನು ಕಂಡ ಅಘದ ಆಪ್ತಮಿತ್ರರೊಬ್ಬರೂ ಕೂಡ ಹೀಗೇ ನೇಣು ಹಾಕಿಕೊಂಡು ಸತ್ತರು. ಇನ್ನು ರಾಷ್ಟ್ರಾದ್ಯಂತ ಮಣ್ಣಿನ ಮಕ್ಕಳು ದಿನೇದಿನೇ ಆತ್ಮಹತ್ಯೆಯ ಅಂಚಿಗೆ ದೂಡಲ್ಪಡುತ್ತಿದ್ದಾರೆ.

ಭ್ರಷ್ಟಾಚಾರ ಕೈ ಮೀರುತ್ತಿದೆಯೆಂದು ನ್ಯಾಯಮೂರ್ತಿ ವೆಂಕಟಾಚಲ ಹೇಳುತ್ತಿದ್ದಾರೆ. ಬೃಹತ್ ಅಣೆಕಟ್ಟೆಗಳ ಹಿನ್ನೀರಿನಲ್ಲಿ ರೈತರ ಬದುಕು ಮುಳುಗಿ ಹೋಗುತ್ತಿದೆ. ನ್ಯಾಷನಲ್ ಪಾರ್ಕ್, ರಕ್ಷಿತಾರಣ್ಯಗಳ ನೆಪದಲ್ಲಿ ಮೂಲನಿವಾಸಿಗಳ ಎತ್ತಂಗಡಿಯಾಗುತ್ತಿದೆ. ಕೀಳುಮಟ್ಟದ ಪುನರ್ವಸತಿ ಕೇಂದ್ರಗಳಲ್ಲಿ ಉಳಿದಿರುವ ಹಿರೀಕರು ಜೀವಚ್ಛವವೆಂಬಂತೆ ಬದುಕು ಸಾಗಿಸುತ್ತಿದ್ದಾರೆ. ಆದರೆ ಐಟಿ, ಬಿಟಿ ಕಂಪನಿಗಳು ಮಾತ್ರ ವಿಜೃಂಭಿಸುತ್ತಿವೆ. 'ಕತ್ತಿ ವಿದೇಶಿಯಾದರೆ ಮಾತ್ರ ನೋವೆ? ನಮ್ಮವರೆ ಹದ ಹಾಕಿ ತಿವಿದರದು ಹೂವೆ?' ಎಂಬ ಕವಿವಾಣಿಯೊಂದಿಗೆ ಅವರದೇ ಆದ 'ಧನ್ವಂತರಿ ಚಿಕಿತ್ಸೆ' ಕತೆ (ಕುವೆಂಪು) ನೆನಪಾಗುತ್ತಿದೆ; ಇತ್ತ ಪ್ರಗತಿ ಅತ್ತ ಅವನತಿ.

ಜಾವರೆ ಕಳೆಗೊಂಡರೆ ಇನ್ನಾರಿಗೆ ಮೊರೆ?

-ಪ್ರೊ. ಶಿವರಾಮಯ್ಯ, ಬೆಂಗಳೂರು

ಚಿತ್ರ ನನ್ನದಲ್ಲ

ನಿಮ್ಮ ಪತ್ರಿಕೆಯ 26.4.2006 ರ ಸಂಚಿಕೆಯ 11 ನೇ ಪುಟದಲ್ಲಿ ನನ್ನ ಚಿತ್ರ ಪ್ರಕಟವಾಗಿದೆ. 'ಜ್ಯೋತಿಷಿ ತಂದಿಟ್ಟ ದುರಂತ' ಎಂಬ ಶೀರ್ಷಿಕೆಯಡಿ ವರದಿ ವಿಶ್ವಪತಿ ಶಾಸ್ತ್ರಿಯವರ ಬಗ್ಗೆ, ಚಿತ್ರ ನನ್ನದು. ಸಂಬಂಧವಿಲ್ಲದ್ದು.

ನಿಮ್ಮನ್ನು ಸಂಪರ್ಕಿಸಲು ಮಾಡಿದ ಪ್ರಯತ್ನ ವಿಫಲವಾದ್ದರಿಂದ ಕಾಗದ ಬರೆಯುತ್ತಿದ್ದೇನೆ. ನಿಮ್ಮ ಮುಂದಿನ ಸಂಚಿಕೆಯಲ್ಲಿ ಈ ಪತ್ರವನ್ನು ಪ್ರಕಟಿಸಿ ತಮ್ಮಿಂದ ಆಗಿರುವ ತಪ್ಪನ್ನು ಸರಿಪಡಿಸಬೇಕೆಂದು ಕೇಳುತ್ತಿದ್ದೇನೆ.

ನಮಸ್ಕಾರಗಳು,

ಬಿ.ಎನ್. ಮೂರ್ತಿ

ಆಡಳಿತ ನಿರ್ದೇಶಕ

ಭಾರತ ಸಂಸ್ಕೃತಿ ಪ್ರತಿಷ್ಠಾನ, ಬೆಂಗಳೂರು.

ಹೃದಯವಾಗಿದೆ -ಸೌಲಬ್

R.B.P. LANKESH, Kannada Weekly Price Rs. 10/- 10-5-2006 RNI No. KARKAN2005/14648 Regd.No.KA/BG(S)/2036/2005-

ರೋಮಿಯೋಗೂ ಒಂದು ಕಾಲ

'ರೋಡ್ ರೋಮಿಯೋ' ಚಿತ್ರವನ್ನು ನಿರ್ಮಿಸಿರುವವರು Rare brains films ಸಂಸ್ಥೆಯವರು. ಮೊನ್ನೆ ಈ ಚಿತ್ರದ ಕ್ಯಾಸೆಟ್ ಬಿಡುಗಡೆ ಮಾಡಿದ ಶೈಲಿ ನೋಡಿದರೆ, ಇವರದ್ದು ನಿಜಕ್ಕೂ rare brain ಅಂತ ಅನ್ನಿಸಿತು.

ಏಕೆಂದರೆ ಅತ್ಯಂತ ಜನನಿಬಿಡ ರಸ್ತೆಯಾದ ಕೆಂಪೇಗೌಡ ರಸ್ತೆಯ ಮಧ್ಯದಲ್ಲಿ ಈ ಚಿತ್ರದ ಕ್ಯಾಸೆಟ್ ಬಿಡುಗಡೆ ಮಾಡಲಾಯಿತು. ಅದೂ ಅಲ್ಲೇ ರಸ್ತೆಯಲ್ಲಿ ಹೋಗುತ್ತಿದ್ದ ರೋಡ್ ರೋಮಿಯೋನನ್ನು ಕರೆದು ಅವನಿಂದ ಕ್ಯಾಸೆಟ್ ಬಿಡುಗಡೆ ಮಾಡಿಸಲಾಯಿತು. ಆನಂತರ ಇಡೀ ನಗರ ಪ್ರದಕ್ಷಿಣೆ ಮಾಡಿದ ಡಬಲ್ ಡೆಕ್ಕರ್ ಬಸ್ಸಿನಲ್ಲೇ ಪತ್ರಿಕಾಗೋಷ್ಠಿ ನಡೆಸಲಾಯಿತು. ಈ ಕಾರ್ಯಕ್ರಮಕ್ಕಾಗಿ ಕೆಂಪೇಗೌಡ ರಸ್ತೆಯಲ್ಲಿ ಅರ್ಧ ಗಂಟೆ ಟ್ರಾಫಿಕ್ ನಿಲ್ಲಿಸಿದ್ದು ಮಾತ್ರ ಸರಿ ಅನ್ನಿಸಲಿಲ್ಲ.

ಅದೇನೇ ಇರಲಿ, ನಿಜಕ್ಕೂ ಇದೊಂದು ವಿಭಿನ್ನ ರೀತಿಯ ಕ್ಯಾಸೆಟ್ ಬಿಡುಗಡೆ ಸಮಾರಂಭವಾಗಿತ್ತು. ಚಿತ್ರದ ಹೆಸರು 'ರೋಡ್ ರೋಮಿಯೋ' ಎಂಬ ಕಾರಣಕ್ಕಾಗಿ ಹೀಗೆ ಮಾಡಿದೆವು ಎಂದರು ನಿರ್ಮಾಪಕರಾದ ನಂದಕುಮಾರ್ ಮತ್ತು ಸೋನಾಲಿ. ಜಡ್ಡುಗಟ್ಟಿ ಹೋಗಿದ್ದ ಕ್ಯಾಸೆಟ್ ಬಿಡುಗಡೆ ಸಮಾರಂಭಕ್ಕೆ ಹೊಸ ಆಯಾಮ ನೀಡಿದ ನಂದಕುಮಾರ್ ಮತ್ತು ಸೋನಾಲಿಯವರ ಕ್ರಿಯಾಶೀಲತೆ ಮೆಚ್ಚೋಣ. ಆದರೆ ಇದೇ ಕ್ರಿಯಾಶೀಲತೆಯನ್ನು ನಿರ್ದೇಶಕ ಸಾಯಿಪ್ರಕಾಶ್ ಚಿತ್ರದಲ್ಲಿ ತೋರಿಸಿದ್ದಾರಾ ಎಂಬುದೇ ಸದ್ಯಕ್ಕಿರುವ ಪ್ರಶ್ನೆ!

ಅಮಾವಾಸ್ಯೆಯ ನಾಗೇಂದ್ರ ಪ್ರಸಾದ್



ನಾಗೇಂದ್ರ ಪ್ರಸಾದ್‌ಗೂ ಅಮಾವಾಸ್ಯೆ ತುಂಬಾ ಹತ್ತಿರದ ನಂಟು.

ಅವರ ಮೊದಲ ನಿರ್ದೇಶನದ ಚಿತ್ರ 'ನಲ್ಲ' ಅಮಾವಾಸ್ಯೆಯಂದೇ ತೆರೆಕಂಡಿದ್ದು, ಇದೀಗ ಎರಡನೇ ಚಿತ್ರ 'ಅಂಬಿ' ಕೂಡಾ ಅಮಾವಾಸ್ಯೆಯಂದೇ ಬಿಡುಗಡೆಗೊಂಡಿದೆ. ಇಂತಹ ಕುತೂಹಲಕಾರಿ ವಿಷಯವನ್ನು ಬಹಿರಂಗಪಡಿಸಿದವರು ನಿರ್ಮಾಪಕ ಕೆ.ಸಿ.ಎ... ಕುಮಾರ್. ಮೊದಲ ಚಿತ್ರ ಬಾಕ್ಸ್ ಆಫೀಸಿನಲ್ಲಿ ಗೆಲ್ಲಲಿಲ್ಲ, ಕನಿಷ್ಠ ಎರಡನೇ ಚಿತ್ರವಾದರೂ ನಾಗೇಂ... ಪ್ರಸಾದ್ ಅವರನ್ನು ಕತ್ತಲಿಂದ ಬೆಳಕಿನತ್ತ ಕೈ ಹಿಡಿದು ನಡೆಸುತ್ತದೆಯೋ ನೋಡಬೇಕು! ಕಪ್ಪುವಿದೆ ಬಿ...

ಯಾರೀ 'ಸೌಂದರ್ಯ'



ಸೌಂದರ್ಯ ಮತ್ತೆ ಕನ್ನಡಿಗರ ಮನೆ-ಮನ ತುಂಬಲಿದ್ದಾಳೆ.

ನೀವು ಆಶ್ಚರ್ಯಪಡುವ ಅಗತ್ಯವಿಲ್ಲ, ಮುಂದಿನ ವಾರ 'ಸೌಂದರ್ಯ' ಎಂಬ ಹೊಸ ಚಿತ್ರ ಸೆಟ್ಟೇರಲಿದೆ. ರಮೇಶ್-ಸಾಕ್ಷಿ ಶಿವಾನಂದ್ ಜೋಡಿಯಾಗಿ ನಟಿಸಲಿರುವ ಈ ಚಿತ್ರವನ್ನು ಕೆಎಎಸ್ ಅಧಿಕಾರಿ ಚಿನ್ನಗಂಗಪ್ಪ ನಿರ್ದೇಶಿಸಲಿದ್ದಾರೆ. 'ಕರಿಮನೆಯ ಕಗ್ಗತ್ತಲು' ಎಂಬ ಕಲಾತ್ಮಕ ಚಿತ್ರದ ನಂತರ ಜಗ್ಗೇಶ್ ಹಾಕಿಕೊಂಡು ಕೈಸುಟ್ಟುಕೊಂಡ ಚಿನ್ನಗಂಗಪ್ಪ ಈ ಬಾರಿ ಸಸ್ಪೆನ್ಸ್ ಥ್ರಿಲ್ಲರ್ ಕೈಗೆತ್ತಿಕೊಂಡಿದ್ದಾರೆ.

ನಾಯಕ ರಮೇಶ್ ಪ್ರಕಾರ ಇದು 'ಆಗಂತುಕ' ಚಿತ್ರದ ಮಾದರಿಯಲ್ಲಿದ್ದು ಅದಕ್ಕಿಂತ ಹೆಚ್ಚು ಥ್ರಿಲ್ಲಿಂಗ್ ಇದೆಯಂತೆ. ಇಂತಹ ಚಿತ್ರಕ್ಕೆ ಸೌಂದರ್ಯ ಅಂತ ಯಾಕೆ ಹೆಸರಿಟ್ಟಿದ್ದಾರೆ ಎಂಬುದು ಮಾತ್ರ ಅರ್ಥವಾಗದ ಸಿಕ್ರೇಟ್! ಇದೂ ಒಂದು ಸಸ್ಪೆನ್ಸ್ ಇರಬಹುದೇನೋ?

ಸುದೀಪ್-ದರ್ಶನ್ ಭಾಯಿ, ಭಾಯಿ





ಇದೊಂದು ಭಾರಿ ಸಂತೋಷದ ಸುದ್ದಿ.


ಕನ್ನಡ ಚಿತ್ರರಂಗದ ಲೇಟೆಸ್ಟ್ ದುಶ್ಮನ್‌ಗಳಾದ ಸುದೀಪ್ ಮತ್ತು ದರ್ಶನ್ ತಮ್ಮ ಭಿನ್ನಾಭಿಪ್ರಾಯಗಳನ್ನೆಲ್ಲಾ ಮರೆತು ಒಂದಾಗಿದ್ದಾರಂತೆ.

ಈ ಸುದ್ದಿ ಅಧಿಕೃತವಾಗಿ ಎಲ್ಲೂ ಪ್ರಕಟಗೊಂಡಿಲ್ಲವಾದರೂ ಗಾಂಧಿನಗರದಲ್ಲೆಲ್ಲಾ ಇದು ದಟ್ಟವಾಗಿ ಹಬ್ಬಿದೆ. ಇದು ನಿಜವೇ ಆಗಿದ್ದಲ್ಲಿ ಖಂಡಿತವಾಗಿಯೂ ಇದೊಂದು ಶುಭಶಕುನ.

ಕನಿಷ್ಠವೆಂದರೂ ಒಂದು ಡಜನ್ ಸಿನಿಮಾ ಕತೆಗಳು ಇವರಿಬ್ಬರ ಮಿಲನಕ್ಕಾಗಿ ಕಾಯುತ್ತಾ ಕಳೆದ ಮೂರ್‍ನಾಲ್ಕು ವರ್ಷಗಳಿಂದ ಧೂಳು ಹಿಡಿಯುತ್ತಾ ಕುಳಿತಿವೆ. ಈ ಸುದ್ದಿಯಿಂದ ಆ ಕತೆಗಳಿಗೆಲ್ಲಾ 'ಪುನರ್ಜನ್ಮ' ಸಿಗಬಹುದು.

ಸಿಲ್ಲಿ ಕಾರಣಕ್ಕಾಗಿ ಸದಾ ಒಬ್ಬರ ಮೇಲೆ ಇನ್ನೊಬ್ಬರು ಗೂಟೆ ಕುಳ್ಳಿರಿಸುತ್ತಿದ್ದ ಈ ಯುವ ನಾಯಕರಿಗೆ ಕೊನೆಗೂ ಜ್ಞಾನೋದಯವಾಗಿರುವಂತಿದೆ. ಕೆಟ್ಟ ಮೇಲೆಯಾದರೂ ಬುದ್ಧಿ ಬಂತಲ್ಲಾ ಎಂಬುದೇ ಸಂತೋಷದ ಸುದ್ದಿ. ಇದೊಂದು ಗಾಸಿಪ್ ಆಗಿರದೆ ನಿಜವಾದ ಸುದ್ದಿಯಾಗಲಿ ಎಂಬುದು ನಮ್ಮ ಆಶಯ ಕೂಡಾ!

ಬರಗೂರು ಬಂಡಾಯ



ಬರಗೂರು ರಾಮಚಂದ್ರಪ್ಪ ಮತ್ತೊಮ್ಮೆ ಬಂಡಾಯದ ಕಹಳೆ ಊದಿದ್ದಾರೆ.

'ಜನಪರ' ಎಂಬ ತಮ್ಮ ಹೊಸ ಚಿತ್ರಕ್ಕೆ ಶಿವರಾಜ್‌ಕುಮಾರ್‌ರನ್ನು ನಾಯಕರಾಗಿ ಹಾಕಿಕೊಳ್ಳಬೇಕೆಂದು ಬರಗೂರು ಭಗೀರಥ ಪ್ರಯತ್ನ ನಡೆಸುತ್ತಾ ಬಂದಿದ್ದರು.

ಈಗಿನ ಪರಿಸ್ಥಿತಿಯಲ್ಲಿ ಕಾಲ್‌ಶೀಟ್ ಕೊಡುವುದು ಬಹಳ ಕಷ್ಟ ಎಂದು ಶಿವಣ್ಣ ಹೇಳಿದ ನಂತರ ಬರಗೂರು ಅಪ್‌ಸೆಟ್ ಆದರು. ಇದರ ಫಲವಾಗಿ ಎಲ್ಲಾ ಹೊಸ ಕಲಾವಿದರನ್ನು ಹಾಕಿಕೊಂಡೇ ಚಿತ್ರ ಶುರು ಮಾಡುತ್ತೇನೆ ಎಂದು ಬರಗೂರು ಪ್ರ... ಕೈಗೊಂಡಿದ್ದಾರಂತೆ. ಇವರ ಅಚ್ಚುಮೆಚ್ಚಿನ ಸಂಗೀತ ನಿರ್ದೇಶಕ ಹಂಸಲೇಖಾ ಜನಪರ ಹಾಡು... ಸುಗ್ಗಿಯನ್ನು ಈ ಚಿತ್ರದಲ್ಲಿ ನೀಡಲಿದ್ದಾರಂತೆ. ಹೀರೋ ಕಾಲ್‌ಶೀಟ್‌ಗಾಗಿ ಕಾಯುವ ಬದಲು ಹೊಸಬರ... ಹಾಕಿ ಅವರನ್ನು ಹೀರೋ ಮಾಡುವುದು ಅಂದರೆ ಒಂದು ರೀತಿಯ ಬಂಡಾಯ ತಾನೇ?

ದುರ್ಗದಲ್ಲಿ ಲವ್ ಸ್ಟೋರಿ



'ಕಲ್ಲರಳಿ ಹೂವಾಗಿ' ಚಿತ್ರಕ್ಕಾಗಿ ಚಿತ್ರದುರ್ಗಕ್ಕೆ ತೆರಳಿದ್ದ ಪತ್ರಕರ್ತರ ತಂಡಕ್ಕೆ ಬರೀ ಫ್ಲ್ಯಾಷ್‌ಬ್ಯಾಕ್ ಕಥೆಗಳೇ ಸಿಕ್ಕವು.

ಪುಟ್ಟಣ್ಣ ಕಣಗಾಲ್ 'ನಾಗರಹಾವು' ಚಿತ್ರವನ್ನು ಚಿತ್ರೀಕರಿಸಿದ ನಂತರ ಈ ಸ್ಥಳದಲ್ಲಿ ಬೇರೆ ಯಾವ ಚಿತ್ರತಂಡವೂ ಇಲ್ಲಿ ಚಿತ್ರೀಕರಿಸಿದ್ದೇ ಇಲ್ಲವಂತೆ. ಹೀಗಾಗಿ 'ನಾಗರಹಾವು' ಚಿತ್ರದಲ್ಲಿ ನಟಿಸಿದ ಎಂ.ಪಿ. ಶಂಕರ್ ಮತ್ತು ಅಂಬರೀಷ್ ಸುಮಾರು 35 ವರ್ಷಗಳ ನಂತರ ಚಿತ್ರದುರ್ಗದ ಕೋಟೆಗೆ ಬಂದಿಳಿದಿದ್ದಾರೆ.

ಇನ್ನೊಂದು ವಿಶೇಷವೆಂದರೆ ಸುಮಲತಾ ಅವರನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದ್ದೇ ನಾಗಭರಣರಂತೆ. 'ಆಹುತಿ' ಎಂಬ ಚಿತ್ರದ ಮುಖಾಂತರ. ಅದೇ ಮೊದಲ ಬಾರಿಗೆ ಅಂಬಿ-ಸುಮಲತಾ ಒಟ್ಟಿಗೆ ನಟಿಸಿದ್ದು. ಇದೀಗ ಸುಮಾರು 25 ವರ್ಷಗಳ ನಂತರ ಜೋಡಿಯಾಗಿ ಅಂಬಿ-ಸುಮ ಮತ್ತೆ ನಾಗಾಭರಣ ಚಿತ್ರದಲ್ಲಿ ನಟಿಸುತ್ತಿದ್ದಾರೆ. "ನಾವಿಬ್ಬರು ದಂಪತಿಗಳಾಗಲೂ ಒಂದು ರೀತಿಯಲ್ಲಿ ಭರಣರೇ ಪರೋಕ್ಷವಾಗಿ ಕಾರಣ" ಎನ್ನುತ್ತಾರೆ ಸುಮಲತಾ.

ಹೀಗೆ ಚಿತ್ರದುರ್ಗದ ಕೋಟೆಯ ಬಿಸಿಲ ತಾಪವನ್ನು ಲೆಕ್ಕಿಸದೇ ಒಬ್ಬೊಬ್ಬರು ಒಂದೊಂದು ಫ್ಲ್ಯಾಷ್‌ಬ್ಯಾಕ್ ಹೇಳುತ್ತಲೇ ಇದ್ದರು.



ಸಾಯಿ ಅದೃಷ್ಟ ರವಿ ದುರಾದೃಷ್ಟ?





ಇದೊಂದು ಅಪರೂಪದ ಹ್ಯಾಟ್ರಿಕ್.

ರವಿಚಂದ್ರನ್ ಮತ್ತು ನಿರ್ದೇಶಕ ಸಾಯಿಪ್ರಕಾಶ್ ಜೋಡಿಯ ಮೂರು ಚಿತ್ರಗಳು ಸೆಟ್ಟೇರುತ್ತಿವೆ.

ಈಗಾಗಲೇ ಕೆ. ಮಂಜು ನಿರ್ಮಾಣದ 'ಒಡಹುಟ್ಟಿದವಳು' ಮತ್ತು ಬಾಲಮುತ್ತಯ್ಯ ನಿರ್ಮಾಣದ 'ನೀಲಕಂಠ' ಚಿತ್ರದಲ್ಲಿ ರವಿ-ಸಾಯಿಪ್ರಕಾಶ್ ಜೋಡಿ ಕಾರ್ಯನಿರ್ವಹಿಸುತ್ತಿದೆ.

ಈ ಜೋಡಿಯ ಮೂರನೆಯ ಚಿತ್ರ ಒಂದೆರಡು ವಾರದಲ್ಲೇ ಸೆಟ್ಟೇರಲಿದ್ದು ಇದನ್ನು 'ಪಾಂಡುರಂಗ ವಿಠಲ' ಖ್ಯಾತಿಯ ನಿರ್ಮಾಪಕ ಗಣೇಶ್ ಮತ್ತು ಪ್ರವೀಣ್ ನಿರ್ಮಿಸಲಿದ್ದಾರೆ.

ಈ ಮೂರು ಚಿತ್ರಗಳನ್ನು ಸಾಯಿಪ್ರಕಾಶ್ ನಿರ್ದೇಶಿಸುತ್ತಿರುವುದರಿಂದ ಇವೆಲ್ಲವೂ ರೀಮೇಕ್ ಚಿತ್ರಗಳೆಂದು ಸುಲಭವಾಗಿ ತೀರ್ಮಾನಿಸಬಹುದು. ರವಿಚಂದ್ರನ್ ಸಾಧಾರಣವಾಗಿ ಯಾರಿಗೂ ಈ ರೀತಿ ಸತತವಾಗಿ ಕಾಲ್‌ಶೀಟ್ ನೀಡಿದ್ದೇ ಇಲ್ಲ, ಇದು ಸಾಯಿಪ್ರಕಾಶ್ ಅದೃಷ್ಟವೋ ಅಥವಾ ರವಿಚಂದ್ರನ್ ದುರಾದೃಷ್ಟವೋ ಎಂಬುದನ್ನು ಕಾಲವೇ ಹೇಳಬೇಕು.

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 266764…
Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-4…